# ಅಪರಂಜಿ

ತಿಳಿನಗೆಯ ಕಾರಂಜಿ

ನವೆಂಬರ್ - 2015



**ಸಂಪಾದಕ ಮಂಡಳಿ**

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ



# ಅಪರಂಜಿ

ತಿಳಿನಗೆಯ ಕಾರಂಜಿ

**ಸಂಪುಟ 33**

**ಸಂಚಿಕೆ – 2**

**ನವೆಂಬರ್ – 2015**

## *ಈ ಸಂಚಿಕೆಯಲ್ಲಿ .....*

| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ನಮ್ಮ ನಿಮ್ಮಲ್ಲಿ | **ಶಿವಕುಮಾರ್** | 3 |
| ನೆರೆಹೊರ್ಕೆ | **ಎಚ್.ಆರ್. ಹನುಮಂತ ರಾವ್** | 6 |
| ಮೊಬೈಲಾಯಣ | **ರಮ್ಯ** | 12 |
| ಹೈ ಪವರ್ ಪ್ರವಾಸ.... | **ಇ.ಆರ್. ರಾಮಚಂದ್ರನ್** | 14 |
| ದೀಪಾವಳಿಗೆ ಏನು.... | **ಸಹನಾ ಪ್ರಸಾದ್** | 17 |
| ತುಂತುರು | **ದಂಡಾ** | 22 |
| ಉಪ್ಪಿ ಉಪಾಖ್ಯಾನ! | **ತುರುವೇಕೆರೆ ಪ್ರಸಾದ್** | 23 |
| ಏಕಾಂತದ ಸುಖ | **ಎಚ್. ಗೋಪಾಲಕೃಷ್ಣ** | 27 |
| ಸೋಪಿನ ಅವಾಂತರ | **ಕಮಲಾ ಸಿಡೆನೂರ** | 30 |
| ಐ.ಟಿ. ಕನ್ಸಲ್ಟಂಟ್! | **ವಿದ್ಯಾ ವಿ. ಹಾಲಭಾವಿ** | 32 |
| ಸುಖ ಅರಸುವ ಧೀರರು | **ಬೇಲೂರು ರಾಮಮೂರ್ತಿ** | 33 |
| ಒಬ್ಬರಂತೆ ಇನ್ನೊಬ್ಬರೂ.. | **ಎಸ್.ಎನ್. ಸುಬ್ಬರಾವ್** | 37 |
| ಸೀಜರ್ಸ್ ವೈಫ್.... | **ಪ್ರಶಾಂತ ಅಡೂರ** | 38 |

**ಮುಖಪುಟ ವ್ಯಂಗ್ಯಚಿತ್ರ – ಗುಜ್ಜಾರ್/ರವೀಂದ್ರ ರಾವ್**

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಎಂ. ಶಿವಕುಮಾರ್

**ಟ್ರಸ್ಟಿಗಳು**

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ವಿ.ಆರ್. ನಾಥ್

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್

**ಚಂದಾ ವಿವರ:**

**ಬಿಡಿ ಪ್ರತಿ: ರೂ. 10/-**

**ವಾರ್ಷಿಕ ಚಂದಾ: ರೂ. 100/-**

**ಹತ್ತು ವರ್ಷದ ಚಂದಾ:ರೂ. 750/-**

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳಿಸಿ.

ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.

ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್ , 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003. email: koravanji42@hotmail.com

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ, ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು – 560 068. ದೂರವಾಣಿ: 080-26688488. email: belururamamurthy@gmail.com

*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ : ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● ಪ್ರಕಾಶ್



‘ಕ್ಷಮೆ ಯಾಚಿಸುವೆ’ : ಶ್ರೀ ಈಶ್ವರಪ್ಪ – ಸುದ್ದಿ

***● ಶಿವಪ್ಪ ಕಾಯೊ ತಂದೆ !!***

★★★

ಪರೀಕ್ಷಾ ಅವ್ಯವಹಾರ, ವೈದ್ಯನ ಬಂಧನ – ಪತ್ರಿಕೆ

***● ಬೇಲಿಯೇ.... ಅಂದು, ಸಾಕಾಗಿದೆ !!***

★★★

ಪರಿಷತ್ತು ಕನ್ನಡದ ಶಾಲೆ ತೆರೆಯಲಿ – ಸಲಹೆ

***● ‘ಆಶೀರ್ವಾದ’ ಎಂದರೆ ಇದೇ !!***

★★★

ಇಂಗ್ಲಿಷ್‌ನಲ್ಲಿ ರಜೆ ಅರ್ಜಿ ಸಲ್ಲಿಸಿದ್ದಕ್ಕೆ ನೋಟೀಸ್ – ಸುದ್ದಿ

***● ಹೌ ಫನ್ನಿ !!***

★★★

ಸೂರ್ಯನಲ್ಲಿ ಬೃಹತ್ ರಂಧ್ರಗಳು – ಪತ್ರಿಕೆ

***● ಇದು ಅಮೆರಿಕನ್ನರ ಸಂಚು ಇರಬೇಕು !!***

★★★

ಇಷ್ಟೊಂದು ವಾಪಸ್ ಆದ ಪ್ರಶಸ್ತಿಗಳನ್ನು ಏನು ಮಾಡುತ್ತಾರೋ ?!

★★★

ವಯಸ್ಸಾದ ಕಾಂಗ್ರೆಸಿಗರಿಗೆ ‘ಸಲಹೆಗಾರ’ ರಾಗಿ ನೇಮಕ – ಸುದ್ದಿ

***● ಅರ್ಥವಾಯಿತು !!***

★★★

‘ಲೋಕಾಯುಕ್ತ ನಿಷ್ಕ್ರಿಯ’ – ಹೇಳಿಕೆ

***● ಅಂಡರ್ ಸ್ಟೇಟ್‌ಮೆಂಟ್ ಆಫ್ ದಿ ಸೆಂಚುರಿ***
***ಅಂತ ಅಪರಂಜಿ ನಕ್ಕಳಂತೆ !!***

★★★

## "ನಮ್ಮ ನಿಮ್ಮಲ್ಲಿ"

ಅಪರಂಜಿಯಂತಹ ಒಂದು ಸಣ್ಣ ಪ್ರಮಾಣದ ಪತ್ರಿಕೆಯ ದಿನನಿತ್ಯ ನಿರ್ವಹಣೆಯಲ್ಲಿ ಎರಡು ಬಗೆಯ ಕೆಲಸಗಳು ಇದಿರಾಗುತ್ತವೆ. ಒಂದು ಸಂತಸ ತರುವ ಕೆಲಸಗಳು ಮತ್ತು ಇನ್ನೊಂದು, ''ಮಾಡಲೇ ಬೇಕು. ಹಲ್ಲು ಕಚ್ಚಿಕೊಂಡು ಮಾಡಿಮುಗಿಸಿದರೆ ಅನಂತರ ಸುಖವಾಗಿ ಇರಬಹುದಲ್ಲಾ'' ಎಂಬ ಭ್ರಾಂತಿಯಿಂದ ಮಾಡುವ ಕೆಲಸಗಳು. ಸಂದಾಯವಾದ ಚಂದಾಹಣಕ್ಕೆ ರಸೀತಿ ಬರೆಯುವುದು, ಡಿಟಿಪಿಯವರು ಕಳುಹಿಸಿದ ಕರಡನ್ನು ಪ್ರೂಫ್ ರೀಡ್ ಮಾಡುವುದು, ವರ್ಷಕ್ಕೊಮ್ಮೆ ಮಾಡುವ ಲೆಕ್ಕಪತ್ರಗಳು, ಹಲವೊಮ್ಮೆ ನಮ್ಮ ಓದುಗರು ಕರೆಮಾಡಿ ''ಹಿಂದಿನ ತಿಂಗಳ ಪತ್ರಿಕೆ ತಲುಪಿಲ್ಲ. ನಾನೊಬ್ಬ ಆಸಕ್ತ ಓದುಗ. ದಯವಿಟ್ಟು ಇನ್ನೊಂದು ಸಂಚಿಕೆಯನ್ನು ರವಾನಿಸುವಿರಾ?'' ಎಂದು ಕೇಳಿದಾಗ, ವಿಧಿಯಿಲ್ಲದೇ ಬಿಟ್ಟ ಕೆಲಸ ಬಿಟ್ಟು ಅವರಿಗೆ ಸಂಚಿಕೆಯನ್ನು ಕೊರಿಯರ್ ಮಾಡುವುದು, ಇವೆಲ್ಲಾ ಎರಡನೆಯ ಗುಂಪಿನ ಕೆಲಸಗಳ ವ್ಯಾಪ್ತಿಗೆ ಬರುತ್ತವೆ. ಹಾಗಾದರೆ ಸಂತಸ ತರುವ ಕೆಲಸಗಳಾವುವು? ಅಂತ ನೀವು ಕೇಳಬಹುದು. ಎರಡು ನಿದರ್ಶನಗಳ ಮೂಲಕ ಅದನ್ನೇ ಹೇಳುಕ್ಕೆ ಹೊರಟಿದ್ದೆ.

ಮೊನ್ನೆ ಮಧ್ಯಾಹ್ನ ಹಾಗೇ ಕೂತಿದ್ದೆ. ಅಂದಹಾಗೆ ನಾನು ಕೂತಿರುವುದರ ಬಗ್ಗೆ ನನಗೂ ನನ್ನ ತಮ್ಮ ಪ್ರಕಾಶನಿಗೂ ಬಹು ಮೋಜಿನ ಸಂಭಾಷಣೆಗಳಾಗಿವೆ. ಅವನು ಫೋನ್ ಮಾಡಿ ''ಏನು ಮಾಡ್ತಾ ಇದ್ದೀಯಾ?'' ಅಂತ ಕೇಳಿದಾಗೆಲ್ಲಾ ನನ್ನ ಉತ್ತರ ''ಸುಮ್ಮನೆ ಕೂತಿದ್ದೇನೆ.'' ಆ ಉತ್ತರ ಕೇಳಿದಾಗಲೆಲ್ಲಾ ಅವನಿಗೆ ಅಸಾಧ್ಯ ಕೋಪ. ಸುಮ್ಮನೆ ಕೂತಿರುವುದು ಹೇಗೆ ಸಾಧ್ಯ? ಏನಾದರೂ ಕೆಲಸ ಮಾಡುತ್ತಿರಬೇಕಲ್ಲವೇ? ಅಂತ ಅವನ ಪ್ರಶ್ನೆ. ಪಾಪ, ಪಾಮರ! ಅವನಿಗೇನು ಗೊತ್ತು, ಸುಮ್ಮನೆ ಯಾವ ಆಲೋಚನಾ ತರಂಗವೂ ಮನಸ್ಸನ್ನು ಪ್ರಕ್ಷುಬ್ಧಗೊಳಿಸದೇ, ನಿಮ್ಮ ಪಾಡಿಗೆ ನೀವು ಹಾಯಾಗಿ ಕೂತಿರುವುದರ ಸ್ವಾರಸ್ಯ. ಅದು ಹೇಗೇ ಇರಲಿ, ಅಂದು ಮಧ್ಯಾಹ್ನ ನಾನು (ಸುಮ್ಮನೆ!) ಕೂತಿದ್ದಾಗ ಹೊರಬಾಗಿಲ ಕರೆಗಂಟೆ ರಿಂಗಾಯಿತು. ಲಗುಬಗೆಯಿಂದ ಎದ್ದು ಹೋಗಿ ಬಾಗಿಲು ತೆರೆದೆ. ಉಮಾ ಅವರು ಬಾಗಿಲಲ್ಲಿ ನಿಂತಿದ್ದರು. ಇತ್ತೀಚಿಗಷ್ಟೇ ನಾನು ಕಳೆದುಕೊಂಡ ಆಪ್ತ ಗೆಳೆಯ ರಾಜಗೋಪಾಲ್‌ನ ತಂಗಿ ಉಮಾ. ಅವರನ್ನು ಒಳಕ್ಕೆ ಕರೆದು ವರಾಂಡಾದಲ್ಲಿ ಕೂರಿಸಿ ಕ್ಷೇಮ ಸಮಾಚಾರ ವಿಚಾರಿಸಿದೆ. ಅನಂತರ ಆಕೆ, ''ಇದೇ ತಿಂಗಳ ಇಪ್ಪತ್ತೆಂಟರಂದು ನಮ್ಮ ಅಣ್ಣನ ಹುಟ್ಟುಹಬ್ಬ. ಅವನಿದ್ದಾಗ ಅವನಿಗೆ ಅಪರಂಜಿ ಕೆಲಸ ಅಂದರೆ ಅಚ್ಚು ಮೆಚ್ಚು. ಅವನ ನೆನಪಿನಲ್ಲಿ ಅಪರಂಜಿಗೆ ಒಂದು ಸಣ್ಣ ದೇಣಿಗೆ ನೀಡಲೆಂದು ಬಂದೆ'' ಅಂತ ಹೇಳಿದರು. ''ಅದಕ್ಕೇನಮ್ಮಾ, ಅಗತ್ಯವಾಗಿ ನೀಡಿ. ಚೆಕ್ಕನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿದರಾಯಿತು'' ಅಂತ ಹೇಳಿದೆ. ಆಕೆ ''ನಮ್ಮ ಅಣ್ಣ ನಮಗೆಲ್ಲಾ ತುಂಬಾ ಆಪ್ತನಾಗಿದ್ದ. ಯಾವಾಗಲೂ ನಮ್ಮನ್ನ ನಗಿಸುವುದೇ ಅವನ ಕೆಲಸವಾಗಿತ್ತು. ನಾನು ಚಿಕ್ಕವಳು ಅಂತ ನನ್ನನ್ನ ರೇಗಿಸುತ್ತಲೂ ಇದ್ದ ಅನ್ನಿ. ಹಾಗಾಗಿ

ಅವನ ಹೆಸರಿನಲ್ಲಿ ಒಂದು ಲಕ್ಷ ರೂ.ಗಳನ್ನು ಟ್ರಸ್ಟಿಗೆ ಕೊಡಲು ನಿರ್ಧರಿಸಿರುವೆ'' ಅಂತ ಉಮಾ ಹೇಳಿದಾಗ ನಾನು ಒಂದು ಕ್ಷಣ ಅವಾಕ್ಕಾದೆ. ಅಪರಂಜಿಯಂತಹ ಲಘು ವ್ಯವಹಾರಕ್ಕೆ ಬಹು ಅಪರೂಪವಾದ ಮೊತ್ತ ಇದು. ಬೇಗ ಹೋಗಿ ಚೆಕ್ಕು ಪುಸ್ತಕಕ್ಕೆ ಒತ್ತು ಹಿಡಿಯಲು ರಟ್ಟೊಂದನ್ನು ತಂದು ಅವರಿಗೆ ಕೊಟ್ಟೆ. ''ನಾನು ಚೆಕ್ಕಿನ ಮೊತ್ತ ಬರೆದು ಸಹಿ ಹಾಕಿ ಕೊಡುತ್ತೇನೆ. ಪೇಯಿ ಹೆಸರನ್ನು ನೀವೆ ಬರೆದುಬಿಡಿ. ಸ್ಪೆಲ್ಲಿಂಗ್ ತಪ್ಪಾದರೆ ಅದೊಂದು ಫಜೀತಿ'' ಎಂದು ಹೇಳುತ್ತಾ ಆಕೆ ಚೆಕ್ಕನ್ನು ಬರೆದು ನನ್ನ ಕೈಗೆ ಕೊಟ್ಟರು. ಅಗಲಿದ ಗೆಳೆಯ ರಾಜಗೋಪಾಲ್ ಗತಿಸಿದ ನಂತರವೂ ಅಪರಂಜಿಯನ್ನು ಮರೆಯಲಿಲ್ಲ. ಈಗ ಈ ಚೆಕ್ಕನ್ನು ಸ್ವೀಕರಿಸುವ ಬದಲು ಅವನೇ ಜೀವಿಸಿದ್ದು ಎಂದಿನಂತೆ ಸಂಜೆಯ ವಾಕಿಂಗ್‌ಗೆ ಬಂದು ಬೆಲ್ ಮಾಡುವಂತಾಗಿದ್ದರೆ ಖಂಡಿತ ಅದನ್ನೇ ಆರಿಸುತ್ತಿದ್ದೆ ಎಂಬ ಅಂಶ ಹೊಳೆಯಿತು. ರಾಜಗೋಪಾಲ್‌ನ ಔದಾರ್ಯವನ್ನೇ ಬಿಂಬಿಸುತ್ತಿದ್ದ ಇಂತಹ ಸಹೋದರಿಯನ್ನು ಪಡೆದ ರಾಜ ಎಷ್ಟು ಪುಣ್ಯವಂತ ಅಂದುಕೊಂಡೆ.

★★★

ಅಪರಂಜಿಯನ್ನು ಮೊದಲಿನಿಂದ ಓದುತ್ತಿರುವವರಿಗೆ ಶ್ರೀನಿವಾಸ ವೈದ್ಯ ತೀರ ಪರಿಚಿತ ಲೇಖಕರು. ಅಪರಂಜಿಯ ಪ್ರಾರಂಭದ ದಿನಗಳಲ್ಲಿ ಇವರ ಲೇಖನಗಳು ಅಪರಂಜಿಗೊಂದು ಘನತೆಯನ್ನು ಒದಗಿಸುವುದರಲ್ಲಿ ಯಶಸ್ವಿಯಾಗಿದ್ದವು. ಹಲವಾರು ವರ್ಷಗಳು ನಿರಂತರವಾಗಿ ಇವರ ಲೇಖನಗಳು ಅಪರಂಜಿಗೆ ಶೋಭೆಯನ್ನು ತಂದವು. ಇವರು ಅಪರಂಜಿಗೆ ಲೇಖನಗಳನ್ನು ಬರೆಯುತ್ತಿದ್ದ ದಿನಗಳಲ್ಲಿ, ಅಂಚೆಯ ಮೂಲಕ ಇವರ ಲೇಖನದ ಲಕೋಟೆ ವರಾಂಡಾದಲ್ಲಿ ಬಿತ್ತೆಂದರೆ ಅಂದು ನಮ್ಮ ಮನೆಯಲ್ಲಿ ಹಬ್ಬ. ನನಗೂ ನನ್ನ ಪತ್ನಿ ಮಂಗಳೆಗೂ ಲೇಖನವನ್ನು ಮೊದಲು ಓದುವ ಬಗ್ಗೆ ಪೈಪೋಟಿ. ಕೊನೆಗೂ ಅವಳೇ ಗೆಲ್ಲುತ್ತಿದ್ದಳು ಅನ್ನಿ. ವೈದ್ಯರ ಹಾಸ್ಯ ಬಹು ನವಿರಾದದ್ದು. ಉತ್ತಮ ಸಾಹಿತ್ಯದ ಸೊಗಡನ್ನು ಮೈಗೂಡಿಸಿಕೊಂಡಿರುವ ಹಾಸ್ಯ ಇದು. ಕ್ರಮೇಣ ವೈದ್ಯರು ಗಂಭೀರ ಸಾಹಿತ್ಯ ಸೃಷ್ಟಿಯಲ್ಲಿ ತೊಡಗಿಸಿಕೊಂಡಂತೆ, ಅಪರಂಜಿಯಲ್ಲಿ ಅವರ ಲೇಖನಗಳು ವಿರಳವಾದವು. ಅಪರಂಜಿಯಲ್ಲಿ ಬರದಿದ್ದರೇನಂತೆ, ಅತ್ಯಂತ ಉತ್ತಮ ಸಾಹಿತ್ಯಧಾರೆ ವೈದ್ಯರ ಲೇಖನಿಯಿಂದ ಹೊರಹೊಮ್ಮಿ ಸಾಹಿತ್ಯಾಸಕ್ತರನ್ನು ತಣಿಸುತ್ತಲೇ ಬಂದವು. ''ಹಳ್ಳ ಬಂತು ಹಳ್ಳ'' ವಂತೂ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನೂ ಗಳಿಸಿತು. ಇದನ್ನೆಲ್ಲಾ ಯಾಕೆ ಹೇಳುಕ್ಕೆ ಬಂದೆ ಅಂದರೆ, ಅನೇಕ ದಿನಗಳ ನಂತರ ಅಪರೂಪವಾಗಿ ವೈದ್ಯರು ಮೊನ್ನೆ ಒಂದು ಲೇಖನವನ್ನು ಕಳಿಸಿದರು. ''ಆ ರಾತ್ರಿಗಳು...'' ಎಂಬ ಈ ಲೇಖನವನ್ನು ಒಂದೇ ಓದಿನಲ್ಲಿ ಓದಿ ಮುಗಿಸಿದೆ. ''ಪರವಾಗಿಲ್ಲ, ಇಷ್ಟು ದಿನಗಳಾದರೂ ಇವರ ಆರ್ದ್ರ ಶೈಲಿ, ಕಲ್ಪನಾ ಲಹರಿ, ಇವು ಒಂದಿಷ್ಟೂ ಲಯ ತಪ್ಪಿಲ್ಲವಲ್ಲಾ'' ಅಂತ ಅನಿಸಿತು.

ನವೆಂಬರ್ ಸಂಚಿಕೆಗೆ ಬಹು ತಡವಾಗಿ ನಮ್ಮ ಕೈಸೇರಿದ್ದರಿಂದ ಈ ಲೇಖನ ಡಿಸೆಂಬರ್ ಸಂಚಿಕೆಯಲ್ಲಿ ಬೆಳಕು ಕಾಣಲಿದೆ. ನಿಮ್ಮ ಕುತೂಹಲವನ್ನು ಪ್ರಚೋದಿಸಲು ಒಂದು ಕರ್ಟನ್ ರೈಸರ್ ರೀತಿಯಲ್ಲಿ ಈ ಲೇಖನದ ಪ್ಯಾರಾ ಒಂದನ್ನು ಇಲ್ಲಿ ಉದ್ಧರಿಸಿರುವೆ.

‘‘ಅತ್ತ ಶಿವಶಂಕರ ಮತ್ತು ಜಾಧವ ಇಬ್ಬರೂ ನನಗ ‘ಲೇ ಭಟ್ಟಾ ಮುಂಜಾನೆ ದೌಡ ಎಬ್ಬಸು’ ಅಂತ ಹೇಳಿ ಗಾದಿ ಉರುಳಿಸಿ ಮಲಗಿ ಬಿಡತಿದ್ದರು. ನಮ್ಮ ಜಾಯಿಂಟ ಸ್ಟಡಿಯ ಎಷ್ಟೋ ರಾತ್ರಿಗಳನ್ನು ನಾನು ಆ ಅಟ್ಟದ ಗ್ಯಾಲರಿ ಮ್ಯಾಲ ನೀಲೀ ಮುಗಿಲಿನ ಕೆಳಗೆ ಕಳೆದಿದ್ದೇನೆ. ನನಗ ಯಾಕೋ ಹುಣ್ಣಿಮೆಯ ಬೆಳದಿಂಗಳಗಳಕ್ಕಿಂತ ಅಮಾವಾಸ್ಯೆಯ ಕತ್ತಲೆಗಳದೇ ನೆನಪು ಭಾಳ ಉಳದsದ. ಬೆಳದಿಂಗಳು ಬಂದು ಛಂದನ ಮಾಯಾಲೋಕವನ್ನು ಸೃಷ್ಟಿಸಿ ಬಿಡತsದ ಅಷ್ಟ. ಅದರಲ್ಲಿ ನಿಮ್ಮ ಚಿಂತನ ಮಂಥನಗಳಿಗೆ ಆಸ್ಪದವೇ ಇರುವದಿಲ್ಲ. ಯಲ್ಲಾ ಬೆಳ್ಳಿಜಗತ್ತು. ರಂಭೆ ಮೇನಕೆಯರ ಕಚಗುಳಿ ಲೋಕ. ಗಿಡ್ಡ ಮರ, ಮುಗಿಲು, ಸರೋವರ, ಬೀದಿ ಖಂಬ, ಚರಂಡಿ, ಕರೇ ಹಂಚಿನ ಮನಿ, ಹಡಪ ಹತ್ತಿದ ಕುಂಟ ನಾಯಿ ಎಲ್ಲಾವನ್ನೂ ಸಂತೋಷದಾಗ ಸಂಭ್ರಮದಾಗ ಬೆಳದಿಂಗಳದಾಗ ಅದ್ದಿ ತಗದಿರತಾರ. ಬೆಳದಿಂಗಳದಾಗ ಎಲ್ಲರೂ ಚಿರಯವ್ವನಿಗರು. ಬರೇ ಹಾಡು ಹಾಡಿಕೋತ ಕನಸು ಕಾಣುವದಷ್ಟೇ ನಿಮ್ಮ ಕೆಲಸ! ಮಿಥ್ಯಾ...ಯಲ್ಲಾ ಮಿಥ್ಯಾ!’’

ಇಂತಹ ರಸನಿಮಿಷಗಳು ಆಗೊಮ್ಮೆ ಈಗೊಮ್ಮೆ ಬಂದರೂ, ಈ ಸಂತಸ ತರುವ ಕ್ಷಣಗಳು ಮಿಕ್ಕ ಎಲ್ಲಾ ಕಾರ್ಪಣ್ಯಗಳನ್ನೂ ಮರೆಯುವಂತೆ ಮಾಡಿ ಸಾರ್ಥಕತೆಯ ಒಂದು ಇಣುಕು ನೋಟವನ್ನು ಕಾಣಿಸುತ್ತವೆ. ಇನ್ನೂ ನಾಲ್ಕು ಓದುಗರಿಗೆ ಅಪರಂಜಿ ತಲುಪದೇ ಅವರು ಫೋನ್ ಮಾಡಿದರೂ ಪರವಾಗಿಲ್ಲ ನಗುತ್ತ ಅವರಿಗೆ ಮರು ಸಂಚಿಕೆಯನ್ನು ಕೊರಿಯರ್ ಮಾಡಬಲ್ಲೆ ಎಂಬ ಹುಮ್ಮಸ್ಸನ್ನೂ ನೀಡುತ್ತವೆ ಎಂಬ ನಂಬಿಕೆ ನನಗೆ! (ತಮಾಷೆಗೆ ಹೇಳಿದೆ ರೀ! ಪಾಪ ಹಣ ಕೊಟ್ಟು ಪತ್ರಿಕೆಗಾಗಿ ಅವರು ಕಾಯುತ್ತಿರುವಾಗ ಅಂಚೆ ಇಲಾಖೆಯ ಅಚಾತುರ್ಯದಿಂದ ಅವರೇಕೆ ನಿರಾಶರಾಗಬೇಕು? ಮರು ಪ್ರತಿ ಕಳಿಸುವುದು ನಮ್ಮ ಪವಿತ್ರ ಕರ್ತವ್ಯ. ಅದನ್ನು ನಿಷ್ಠೆಯಿಂದ ಮಾಡಿಯೇ ಮಾಡುತ್ತೇವೆ. ಆದರೆ ಅದು ಎರಡನೆಯ ಗುಂಪಿನ ಕೆಲಸ ಅಷ್ಟೇ:-))


**ಶಿವಕುಮಾರ್**

---



✵✵✵✵

## ಶುಭಾಶಯಗಳು



ಅಪರಂಜಿ ಓದುಗರಿಗೆಲ್ಲ ಕರ್ನಾಟಕ ರಾಜ್ಯೋತ್ಸವ ಮತ್ತು ದೀಪಾವಳಿಯ ಹಾರ್ದಿಕ ಶುಭಾಶಯಗಳು. ಕನ್ನಡವೆಂದರೆ ಕುಣಿದಾಡುವುದೆನ್ನೆದೆ, ಕನ್ನಡವೆಂದರೆ ಕಿವಿ ನಿಮಿರುವುದು ಎನ್ನುವ ಕವಿ ವಾಣಿ ಕರ್ನಾಟಕದಲ್ಲಿ ನೆಲೆಸಿರುವ ಎಲ್ಲ ಜನರಲ್ಲಿ ಸದಾ ತುಂಬಿರಲಿ ಎಂದು ಆಶಿಸುತ್ತಾ ನಾವೆಲ್ಲಾ ನಮ್ಮ ಎಂದಿನ ಪರಂಪರೆಯಂತೆ ಪ್ರೀತಿಯ ಮತಾಪು ಹಚ್ಚುತ್ತಿರೋಣ, ಉತ್ಸಾಹದ ಸುರು ಸುರು ಬತ್ತಿ ಸದಾ ಉರಿಸುತ್ತಿರೋಣ, ಪ್ರೀತಿಯ ಹೂವಿನ ಕುಂಡ ಎತ್ತರೆತ್ತರಕ್ಕೆ ಏರಲಿ, ನಮ್ಮ ಪ್ರೀತಿ, ವಿಶ್ವಾಸ, ವಿಷ್ಣು ಚಕ್ರ, ಭೂಚಕ್ರಗಳಂತೆ ಸುತ್ತಿ ಸುತ್ತಿ ಬರಲಿ ಎಂಬುದೇ ಅಪರಂಜಿಯ ತುಂಬು ಹೃದಯದ ಹಾರೈಕೆ.

# ನೆರೆಹೊರ್ಕೆ

**- ಎಚ್.ಆರ್. ಹನುಮಂತ ರಾವ್**

**ಈ** ಪದ ಇಂದು ಸವಕಲು ನಾಣ್ಯವಾಗುತ್ತಿದೆ. ಅದೂ ಬೆಂಗಳೂರಿನಂತಹ ಷಹರುಗಳಲ್ಲಿ. ಟೀಪಿ ಕೈಲಾಸಂ ಅವರದೇ ಒಂದು ನಾಟಕದಲ್ಲಿ 'ನೆರೆಹೊರ್ಕೆ, ನೆರೆಹೊರ್ಕೆನೇವೇಯೇ' ಎಂದು ಹೇಳಿದ್ದು ಬಹುಶಃ ಕಳೆದ ಶತಮಾನಕ್ಕಷ್ಟೇ ಹೆಚ್ಚು ಅನ್ವಯವಾಗುವ ಮಾತು. ಜಾಗತೀಕರಣದ ಪ್ರಭಾವವೋ, ಆಂಗ್ಲ ಸಂಸ್ಕೃತಿಯ ಅನುಸರಣೆಯೋ, ಐಷಾರಾಮಿ ಜೀವನದ ಸ್ವತಂತ್ರ ವಾಸ್ತವ್ಯದ ಅಭಿಲಾಷೆಯೋ ಕಾರಣವಿರಬಹುದು. ನಾಲ್ಕೈದು ದಶಕಗಳ ಹಿಂದಿನ ಪೀಳಿಗೆಯವರಲ್ಲಿದ್ದ ಪರಸ್ಪರ ಸಹಕಾರ, ಸಮಾಲೋಚನೆ, ಕುಶಲೋಪರಿ, ಕಷ್ಟ-ಸುಖಗಳ ವಿನಿಮಯ ಈಗ ಮಾಯವಾಗುತ್ತಿದೆ. ಕೈಯಲ್ಲಿ ಹಣವಿಲ್ಲದಿದ್ದರೂ ಆಗಿನ ಜನರ ಔದಾರ್ಯ, ಸಾಮೂಹಿಕ ಚಟುವಟಿಕೆ, ಉಪಚಾರಕ್ಕೇನೂ ಕಮ್ಮಿ ಇರಲಿಲ್ಲ. ಈ ಗುಣ ಈಗೀಗ ನಿಧಾನವಾಗಿ ಮಾಯವಾಗುತ್ತಿದೆ. ಈಗಿನಂತೆ ದಿನನಿತ್ಯ ಕೊಲೆಗಳು, ಸುಲಿಗೆ, ಕಾಮುಕರ ಧಾರ್ಷ್ಟ್ಯ ಬಹು ಅಪರೂಪ. ಇಲ್ಲವೆಂದೇ ಹೇಳಿದರೂ ತಪ್ಪಲ್ಲ. ಇಂದಿನ ಸ್ಥಿತಿಗೆ ಬಹುಷಃ ಈಗಿನವರ ಹಣದ ವ್ಯಾಮೋಹ, ಮತ್ತು ಜನಸಂಖ್ಯಾ ಸ್ಫೋಟವೂ ಕಾರಣ. ಆ ದಿನಗಳನ್ನು ನೆನಸಿಕೊಂಡಾಗ ಒಂದೊಂದಾಗಿ ಜ್ಞಾಪಕ ಮಾಲೆ ಸುರುಳಿ ಬಿಚ್ಚಿಕೊಳ್ಳುತ್ತದೆ. ಹಾಸ್ಯದ ದೃಷ್ಟಿಗೆ, ಹರಟೆಯ ಮಾತಿಗೆ ಸಾಕಷ್ಟು ಸಾಮಗ್ರಿಯೂ ಒದಗುತ್ತದೆ, ಒಂದೆರಡು ಉದಾಹರಣೆಗಳ ಮೂಲಕ ಹೇಳುವುದಾದರೆ...

★★★

''ಏನ್ ಶಾಂತಮ್ಮ, ಸೆರಗಿಗೆ ಕೈ ವರೆಸಿಕೊಂಡ್ ಮನ್ಯಾಗಿಂದ ಹೊರಗೆ ಬರ್ತಾ ಇರೋದ್ ನೋಡಿದರ ಊಟ ಆಗೆದ ಅನಸ್ತದಾ, ಏನೋ ಮುಖದಾಗ ಸಂತೋಷ ಕಾಣ್ತದಾ? ನಿನ್ ಹೆಸರ್ಗೆ ತಕ್ಕನಾಗೇ ಅದೀಯ ಬಿಡು ಶಾಂತು, ಏನಾದ್ರೂ ಉಂಟಾ, ನಾಚ್ಕೋ ಬೇಡ ಹೇಳು?!'' ಆರಾಗಿ, ಏಳನೆ ಬಾಣಂತನಕ್ಕೆ ಅಲ್ಪವಿರಾಮ ಹಾಕಲು ಕಷ್ಟಪಡುತ್ತಿದ್ದ, ಅರ್ಧ ಆಯಸ್ಸನ್ನು ದಾಟಿದ್ದ ರಾಧಾ ಬಾಯಿಯ ಪ್ರಶ್ನೆ.

''ಛೇ, ಹಾಗೇನಿಲ್ಲ, ರಾಧಾಬಾಯವ್ರ'' ಮುಖವನ್ನ ಸೆರಗಿನಲ್ಲಿ ಮುಚ್ಚಿ ನಾಚುತ್ತಾ, ಎರಡು ಮಕ್ಕಳ ತಾಯಿಯಾಗಿದ್ದ ಶಾಂತಮ್ಮ ಉತ್ತರಿಸಿದಳು.

''ಆಗ್ಲಿ ಬಿಡು, ಇನ್ನೂ ಮೂರಲ್ಲ, ನಾಲ್ಕಾಗ್ಲಿ, ಯಾವ ಮಕ್ಕಳು ಕಡೇ ಕಾಲದಾಗ ಆಗಿ ಬರ್ತಾವೋ ಹೇಳ್ಲಿಕ ಬರಲ್ಲ ಶಾಂತು. ಮಾತಿಗ ಹೇಳ್ತೀನಿ, ಆಚೆ ಮನೆ ರಂಗಮ್ಮ ಐದು ಹಡೆದ್ರೂ ಉಳ್ಕೊಂಡಿದ್ದು ಎರಡೇನೇವೆಯ. ಇನ್ನ ಆ ರಂಗನಾಯಿಕೀ ಪಾಡು ಯಾರ್ಗೂ ಬೇಡವ್ವ, ಪ್ರಸ್ಥ ಆದ ಐದನೆ ತಿಂಗಳಾ ಗಂಡ ಗೊಟಕ್ ಅಂದಾಯ್ತು. ಇದೀಗ ಆ ಚಾಂಡಾಲ ಸಿಂಗ್ರ ಇಂಗಾರಿ ಮನ್ಯಾಗ ಬಾಣಂತನ ಮಾಡ್ಸಕ್ಕ ಹೋಗ್ಯಾಳ, ಆ ಸಿಂಗ್ರೀಗೇ ಈಗಾಗ್ಲೇ ಆರಾಗ್ಯಾದ, ಮೂಲೆ ಮನೆ ಸದಾಶಿವನ ಕಥೆನೂ ಅದೇ. ಮದುವೆ ಆದ ಒಂದ್

ವರ್ಷಕ್ಕ ಹೆಂಡ್ತಿ ಯಶೋಧ ಶಿವಪಾದ ಸೇರಿದ್ಲು, ಬುದ್ಧಿವಂತ ಇನ್ನೊಂದ್ ಹೆಣ್ಕಟ್ಕೊಂಡ, ಅದಕ ನಾ ಹೇಳಾದ, ದೇವ್ರು ಕೊಟ್ಟದ್ದನ್ನು ನಾವ್ಯಾರು ಬೇಡ ಅನ್ನೋಕ್ಕ.''

ಅಷ್ಟೆಲ್ಲಾ ಯಾಕೆ, ನಿಮ್ಮರಡ್ನೇ ಸೊಸೆಗೆ ಕಡೇ ಗಳ್ಗೇಲಿ ಮೊದಲ್ನೇದೆ ನಿಲ್ಲಿಲ್ಲ ಅಂತಾ ಅದೆಷ್ಟು ಕಣ್ಣೀರ ಸುರ್ಸಿದ್ರೀ, ಆಕೆ ತೌರಕಡೇ ಸರ್ಯಾಗಿ ನೋಡ್ಕೊಂಡಿದ್ದಿಲ್ಲ ಅಂತ ಮಗನ್ಮೇಲೆ ರೇಗಾಡಿದ್ರಲ್ವ ರಾಧಾಭಾಯಿ? ನಮ್ಮಮ್ಮ ಅಂತೂ ನಂಗೆ ಹೇಳೇಬಿಟ್ಟಾಳ ''ನೀ ಯಾರ್ಮಾತ್ಗೂ ಸೊಪ್ಪಾಕ್ಬೇಡಾ ಶಾಂತಿ, ಆದಷ್ಟು ಆಗ್ಲಿ, ಬೇಡಾ ಅನ್ಲಿಕ್ ನಾವ್ಯಾರ? ಕೊಡಾವನು ಅಲ್ಲಿ ಮೇಲಿರೋವ್ನು, ನಮ್ಮ ಕೈಯಾಗಿಲ್ಲ, ನನ್ ಕೈಕಾಲ್ ಗಟ್ಟಿಯಾಗಿರೋವರ್ಗ ನಾನೇ ಬಾಣಂತನ ಮಾಡಿಸೇ ತೀರ್ತೀನಿ ಅಂತಾ.'' ಹೋಗ್ಲಿ ಬಿಡು ಶಾಂತು, ''ನನ್ ಸೊಸೆ ಮಾತ್ಗ ಬಂದ್ರ, ಮಾಡ್ದವ್ರ ಪಾಪ ಆಡ್ದವ್ರ ಬಾಯ್ನಗ'' ಅನ್ನೋ ತರಹ ನಮಗ್ಯಾಕಿದ್ದೀತೂ, ನಿಮ್ಮಮ್ಮ ಹೇಳಿದ್ ಸರ್ಯಾಗೆ ಆದ. ವೈಕುಂಠದ ಬಾಗ್ಲಾಗೇ ಬ್ರಹ್ಮ, ಶಿವ, ಇಂದ್ರ, ಚಂದ್ರ ಹೀಗ ದೇವರ್ಗೋಳೆಲ್ಲಾ ಕುಂತಿರ್ತಾರ ನಮ್ಮ ಮಾತು ಕೇಳಿಸ್ಕೋತಾ. ಆದ್ರೆ ಮಾತಿಗ ಹೇಳ್ತೀನಿ, ಈಗಿನ್ ಕಾಲ್ದ ಹೆಣ್ಣ ನೀ, ನಂಬ್ತೀಯೋ ಇಲ್ವೋ, ಯಜಮಾನ್ರ ಸೋದರ ಸಂಬಂಧಿ ಕ್ರಿಷ್ಟಾಚಾರ್ಯ ಅಳಿಯ ಉಡುಪಿ ಹಣಮಂತಾಚಾರ್ರು ಅಂದ್ರೆ ಉರ್ಗೆಲ್ಲ ಗೊತ್ತು ಮಹಾ ಆಚಾರಸ್ತರು. ಅದೇನ್ ಮಡಿ, ಅದೇನ್ ಭಕ್ತಿ, ಅದೇನ್ ಪೂಜೆ, ಪುನಸ್ಕಾರ ಅಂತೀ, ಅವ್ರ ಹೆಂಡ್ತಿ ನಡೆಯೋ ಹೆಜ್ಜೆ ಜಾಗದ್ಮ್ಯಾಗೂ ನೀರ್ಚೆಲ್ಕಂಡೇ ಹೋಗವ್ರು! ಸ್ನಾನ ಮಾಡಿ, ಹಣೆ ಮೇಲೆ ಮುದ್ರೆ, ಮೈ ಎಲ್ಲಾ ಚಂದನ ಲೇಪಿಸ್ಕಂಡು ಒದ್ದೆ ಬಟ್ಟೇಲಿ ಬೃಂದಾವನ ಸುತ್ತತಾ ಇದ್ರೆ ಎರಡು ಕಣ್ಣು ಸಾಲದು ಕಣೇ, ಅಂತಾ ಪುಣ್ಯಾತ್ಮ ಈಗಿಲ್ಲ ಬಿಡು'' ಎನ್ನುತ್ತಾ ಬರದ ಕಣ್ಣೀರು ಸುರ್ಸಿ, ಸೆರಗಿನಿಂದ ಮೂಗು, ಕಣ್ಣೂ ಎರಡೂ ಒರ್ಸಿಕೊಂಡು ಮಾತು ಮುಂದುವರೆಸಿದರು. ಕ್ಷಯರೋಗ ಬಂದು ಅವರ್ನ ಆ ದೇವ್ರೇ ಕರ್ಸ್ಕೊಂಡ್ ಬಿಟ್ಟ. 'ಸಾಕು ಈ ಭೂಮ್ಯಾಗ, ಇನ್ ಸ್ವರ್ಗದಗೂ ಐತೆ ನಿಮ್ ಕೆಲ್ಸ' ಅಂತಾ. ನಿರಂತರ ಹನ್ನೊಂದರ ಮಕ್ಕಳು ಹುಟ್ಟಿ ಎಲ್ಲಾನೂವೆ ಮೂರ್ ತಿಂಗಳು ಆರ್ತಿಂಗ್ಳಲ್ಲಿ ಸತ್, ಕಡೆದ ಒಂದ್ವರ್ಷ ಬಾಳಿ ಎಲ್ಲಾ ಕಳ್ಕಂಡ್, ಅವ್ರ ಪ್ರಪಂಚಾನೆ ಮುದ್ರೋಯ್ತು. ಅವ್ರ ಹೆಂಡ್ತಿ ರುಕ್ಕೂಬಾಯಿ ಮಠದಾಗೆ ಸೇವೆ ಮಾಡ್ಕಂಡು ಬಾಳು ಸವೆಸಾದ್ ನೋಡಿದ್ರ ಕರುಳು ಚುರುಕ್ ಅಂತದಾ, ಅದಕ್ಕಾ ನಾ ಹೇಳಿದ್ದು. ಕೊಡೋವ್ನು ಅವ್ನೆ, ತಗೊಳ್ಳೋವ್ನು ಅವ್ನೆ, ನಮ್ಕೈಯಾಗೇನೂ ಇಲ್ಲ, ಶಾಂತೂ? ''ಹೋಗ್ಲಿ ಬಿಡಿ ರಾಧಾಭಾಯಿ, ಅವರ್ಗಾ ಸ್ವರ್ಗಾ ಬಾ ಅಂತ ಕರೀತಿತ್ತಾ. ಅದಹಂಗಿರಲಿ, ನಿಮ್ಗತಾನ ಏನ್ ಮಹಾ ವಯಸ್ಸಾಗೇದಾ, ಆಯಸ್ಸ ಮುಗ್ದೋದಾವರ ಯೋಚನಾ ಮಾಡ್ಲಿಕ್ಕ, ಅದೇನ್ ಬೆಳಿಗ್ಗೇನೆ ನಿಮ್ಮ ಕಡೇ ಮಗ ಜಯತೀರ್ಥ ರಚ್ಚೆ ಹಿಡ್ಕಂಡಂಗಿತ್ತ?'' ''ಅವ್ನು ಸ್ಕೂಲ್ಗೆ ಹೋಗಲ್ಲ ಅಂತ ಹಠ ಮಾಡಾವ, ಏನಪ ಅಂತಂದ್ರ, ಸ್ಕೂಲ್ನಾಗೇ ನಿನ್ನೆ ಅವ ಮೂಗು ಸುರ್ಸ್ಕೊಂಡೇ ಇದ್ದವ, ನೆಗಡಿ ಬಂದದ ನೋಡ್ರಿ, ಅದಕ್ಕ-ಅವರಪ್ಪ ಆಚೆ ಹೋದಾಗ ಅವಗ ಐಸ್ಕ್ರೀಂ ಅದು ಇದು ಕೊಡ್ಸಿ ಕೆಡ್ಸಿ ಬಿಟ್ಟಾರ – ಅದನ್ನ ಒರೆಸ್ಕೊಳ್ಳಕ್ಕೇಂತ ಅವ್ನ ಮಿಸ್ ಬಯ್ದಾರ, ಅಷ್ಟೇ ಅಲ್ದೆ ಚೀಟಿ ಬರೆದು ಅವರಪ್ಪಂಗ ಕೊಟ್ಟು ಕಳಿಸಿವ್ರು, 'ಮಗೂಗೆ ನೆಗಡಿ ಬಂದದ ಅಂದ್ರ, ಬೇರೆ ಎಲ್ಲ ಮಕ್ಕಳ್ಗೂ ನೆಗಡಿ ಹಿಡಿಸಬೇಕಾ? ಎಲ್ಲರಿಗೂ ಕಾಲರ ಗೀಲರ ಬಂದ್ರ, ಎನ್ಗತಿ, ಜೋಭ್ನಾಗ ಒಂದ

ಮುಖವಸ್ತ್ರ ಕಳಸ್ಕಾಗದಿಲ್ವ?' ಅಂತೆಲ್ಲ, ಆ ಚೀಟಿನ ನೋಡಿ ನಮ್ಮವರು ಕೆಂಡ್ದಂಗ್ ಆಗಿ 'ನಿಂಗೇನ್ ಧಾಡಿ ಬಂದದ, ಅವ್ನ ಮೂಗ್ನಾಗೊಂದ್ ಅರಿವೇ ತೂರ್ಸಿ ಕಳಸ್ಲಿಕ್ ಅಂತಾ, ಇವಂಗ ಮೂಗು ವರ್ಸಿಕೊಳ್ಳದ್ ಬಿಟ್ಟು, ಸ್ಕೂಲ್ನಾಗೆ ಅದಕ್ಕಿಂತ ಹೆಚ್ಗ ಕಲ್ಯೋದ್ ಏನಿರ್ತೈತಿ, ಆ ಮಿಸ್ಸೇ ಆಕೆ ಸೆರ್ಗ್ನಾಗೇ ಮೂಗು ವೊರ್ಸಿದ್ರ ಏನ್ ಗಂಟ್ ಹೋಗ್ತಾಯಿತ್ತ' ಅಂಥೇಳಿ ಅವಗ ಒದ್, ಎರಡೇಟ್ ಕೊಟ್ಟಾರ, ಅದ್ಕ ಅವ್ನ ರಂಪ. ''ನೀವೇನಾರ ಅನ್ನಿ ಕಾಲ ಕೆಟ್ಟೋಗಿದೆ ರಾಧಾಬಾಯಿ, ಮಕ್ಕಳ್ಗೆ ಪಾಠ ಹೇಳೋದ್ ಒಂದ್ಬಿಟ್ ಈ ನರ್ಸರಿ, ಕೆಜಿಗಳಲ್ಲಿ ಇನ್ನೆಲ್ಲ ಮಾಡ್ತಾರ. ಬರೀ ಯೂನಿಫಾರ್ಮು, ನೋಟ್ಬುಕ್ಕು, ಟೈ, ಲಂಗ, ಲಗಾಮು ಅಂತ ಎಲ್ಲದಕ್ಕೂ ದುಡ್ಡ್ಮಾತ್ರ ಚೆನ್ನಾಗಿ ಕೀಳ್ತಾರ ಕಣ್ರೀ. ಮೊನ್ನೆ ಹಿಂದಿನ್ ಬೀದಿಲಿರೋ ಪುಷ್ಪಾನ ಮಗ್ಳು ಬಿಂದೂನ – ಇನ್ನೂ ಒಂದೂವರೆ ವರ್ಷ ಕೂಡ ಇಲ್ಲರೀ ಅದಕ್ಕ – ಆ ನೃಪತುಂಗ ಸ್ಕೂಲ್ ನರ್ಸೇರಿಗೆ ಸೀಟ್ ಬುಕ್ ಮಾಡ್ಲಿಕ್ಕ ರಾತ್ರೋ ರಾತ್ರಿ ಎಲ್ಲ ನಿದ್ದೆ ಇಲ್ದೆ ಕ್ಯೂನಾಗ ನಿಂತು ಅರ್ಜಿ ಕೇಳಿದ್ರ, ಅವರೇನ್ ಹೇಳ್ಬೇಕು – ತುಂಬಾ ಲೇಟಾಗಿ ಬಂದ್ರಿ ಪಾಪ, ಇನ್ನೂ ಮೊದಲೇ ಬಂದು ರಿಸರ್ವ್ ಮಾಡಿಸ್ಬೇಕಾಗಿತ್ತ – ಅಂತನ್ನಿಸ್ಕಂಡ್, ಗಂಡನ ಹತ್ರಾನೂ ಬೈಯ್ಸ್ಕೊಂಡ್ ಬಂದು ನನ್ನತ್ರ ಗೋಳೋ ಅಂತ ಅತ್ಕೊಂಡ್ರು ಪುಷ್ಪಾ. ಆಕೇನ ಸಮಾಧಾನ ಮಾಡ್ಲಿಕ್ಕ ನಂದೆರ್ಡು ಕರ್ಚೀಫು ಹಾಳಾದ್ವು.''

''ಹೋಗ್ಲಿ ಬಿಡು ಶಾಂತು, 'ಮುಂದಿನ್ಸಾರಿ ಪ್ರಸವಕ್ಕ ಹೋಗೋವಾಗ್ಲೇ ನಿಮಗೆ ಹೇಳಿ ಸೂಲ್ಗಿತ್ತೀನ ನೋಡ್ತೇನಿ' ಅಂತಾ ಸ್ಕೂಲ್ನವ್ರಗ ಹೇಳಿ ಬರಬೇಕಿತ್ತ. ನಿನ್ನ ಮಕ್ಕಳನ ಜಾಗ್ರತೆ ನೋಡ್ಕೋ, ಕಾಲ ಕೆಟ್ಟೋಗದ, ಜನಗಳಿಗೆ ಮಡಿ ಇಲ್ಲ, ಮೈಲಿಗೆ ಇಲ್ಲ, ಆಚಾರ ಮೊದ್ಲೇ ಬೇಕಿಲ್ಲ, ಎಲ್ಲಾ ಸುಡುಗಾಡು ಆಗ್ಯೇದಾ, ಏನ್ ಯೋಚ್ನೆ ಮಾಡ್ಬ್ಯಾಡಾ, ನಾವೆಲ್ಲ ಅದೀವಿ, ನಿಂಗೇನಾದ್ರೂ ನಮಗೆ ತಿಳಸ್ಬೇ, ನೆರೆಹೊರ್ಕೆ ಇರೋದ ಮತ್ಯಾಕ?''

ಕಾಮನ ಹಬ್ಬ ಬಂದರಂತೂ ಪ್ರತಿಯೊಬ್ಬರೂ ವಿದ್ಯುತ್ ಒಲೆ, ಗ್ಯಾಸ್ ಕಂಡರಿಯದ ಆ ದಿನಗಳಲ್ಲಿ ಮನೆಯಲ್ಲಿ ಶೇಖರಿಸಿದ್ದ ಸೌದೆ, ಮರದ ಪದಾರ್ಥಗಳನ್ನ ಕಾಂಪೌಂಡಿನೊಳಗೆ ಕಾಮಣ್ಣ ಮಕ್ಕಳಿಗೆ ಕಾಣದಂತೆ ಎಚ್ಚರ ವಹಿಸುತ್ತಿದ್ದರು. ಕಾರಣ, ರಾತ್ರೋರಾತ್ರಿ ಹುಡುಗರು ಅವನ್ನು ಕದ್ದೊಯ್ದು ಬೆಂಕಿಗೆ ಆಹುತಿ ಕೊಡುತ್ತಿದ್ದಿದುದು ಸರ್ವೇ ಸಾಮಾನ್ಯ. ಒಂದು ಬಾರಿ ನಮ್ಮ ರಸ್ತೇಲಿ ದಳ್ಳಾಳಿ ರಾಮಯ್ಯನೆಂಬೋರು ಮನೆ ಮಾಡಿದ್ದರು. ಅದು ರೇಷನ್ ಕಾಲ. ಪ್ರತಿಯೊಂದು ವಸ್ತುವೂ ಆಹಾರ ಧಾನ್ಯ ಕೂಡ ನಿಯಂತ್ರಣದಲ್ಲಿತ್ತು. ಹಾಗಾಗಿ ಮನೆಯ ಇಂಧನವಾಗಿ ಬಳಸುತ್ತಿದ್ದ ಸೌದೆ, ಸೀಮೆಎಣ್ಣೆಗೂ ಕೂಡ ಬರ. ಈ ರಾಮಯ್ಯ ಯುದ್ಧಕಾಲದಲ್ಲಿ ಮಿಲ್ಟ್ರಿ ಕಾಂಟ್ರಾಕ್ಟ್‌ನಲ್ಲಿ ಅಕ್ರಮವಾಗಿ ಸಂಪಾದಿಸಿದನೆಂದು ಪ್ರತೀತಿ. ಹಾಗಾಗಿ ಎಲ್ಲರಿಗೂ ಸೌದೆಯ ಡಿಪೋ ಮಾಲೀಕನಾಗಿದ್ದ ಈತನ ಬಗ್ಗೆ ಮೋಸಗಾರನೆಂಬ ಅಭಿಪ್ರಾಯವಿತ್ತು. ಹುಡುಗರು ಹೇಗಾದರೂ ಈ ಕಾಮನ ಹಬ್ಬ ನೆಪದಲ್ಲಿ ಅಪ್ರಿಗೆ ಚಳ್ಳೆಹಣ್ಣು ತಿನ್ನಿಸ್ಬೇಕೆಂದು ಕಾದಿದ್ದು, ಡಿಪೋಗೆ ಸೌದೆ ಬಂದ ರಾತ್ರೋರಾತ್ರಿಯೇ ಸಾಧ್ಯವಾದಷ್ಟು ಕದ್ದು, ಹಬ್ಬದ ದಿನ 'ರಾಮಣ್ಣ, ಅಲ್ಲ ನುಂಗಣ್ಣ ಹಾಯ್ ಹಾಯ್, ಕಾಮಣ್ಣ ಮಕ್ಕಳೂ, ಸೂ...ಕ್ಕಳು' ಎಂದು ಆತನ ಮನೆ ಮುಂದೆಯೇ ಕೂಗಿ ಹಾಡುತ್ತಾ ಎಲ್ಲವನ್ನು ಸುಟ್ಟು, ಸಂತೋಷಿಸಿದ್ದರು! ಆತ

ಬಾಯಿ ಬಾಯಿ ಬಡಿದುಕೊಂಡು, ಶಾಪ ಹಾಕಿದ್ದನ್ನ ಈಗಲೂ ನೆನಪಿಗೆ ಬರುತ್ತದೆ. ಒಂದೇ ಕೇರಿಯ ಹುಡುಗರು ಬೇರೆ ವಿಷಯಗಳಲ್ಲಿ ಒಮ್ಮತವಿಲ್ಲದಿದ್ದರು, ಜನಕ್ಕೆ ಒಳಿತಾಗುವ ಬಾಬತ್ತು ನೆರೆಹೊರ್ಕೆಯ ಸಂಘಟನೆಯನ್ನು ತೋರುತ್ತಿದ್ದರು. ನೀರಿನ ಅಭಾವವಿದ್ದ ಕಾಲಗಳಲ್ಲಿ ಯಾರೊಬ್ಬರ ಮನೆಯ ಭಾವಿಯಲ್ಲಿ ನೀರು ಸಿಗುವಂತಿದ್ದರೆ, ಎಲ್ಲ ಹುಡುಗ, ಹುಡುಗಿಯರುಗಳು ಎಷ್ಟೇ ದೂರವಿದ್ದರೂ ಪರಸ್ಪರ ಸಹಾಯ ಮಾಡುತ್ತಿದುದನ್ನ ಹಳೇ ಪೀಳಿಗೆಯವರು ಇಂದಿಗೂ ನೆನಪಿಸಿಕೊಳ್ಳುತ್ತಾರೆ.

ಹಬ್ಬ, ಹರಿದಿನಗಳು ಬಂತೆಂದರೆ ಪ್ರತಿ ಮನೆಯವರೂ ಆ ಬೀದಿಯ ಹಾಗೂ ಸುತ್ತಮುತ್ತಲೂ ಇದ್ದ ಜನಗಳನ್ನು ಕರೆದು ಪಾನಕ, ಪನ್ಯಾರ, ತಿಂಡಿ, ತೆಂಗಿನಕಾಯಿ ಇಲ್ಲ ಹಣ್ಣು ಕೊಟ್ಟು ಸಾಮೂಹಿಕವಾಗಿ ಆಚರಿಸುತ್ತಿದ್ದರು. ಯಾರು ತಪ್ಪಿಸಿಕೊಳ್ಳುವಂತೆಯೂ ಇರಲಿಲ್ಲ. ಮತ್ತೆ ಮತ್ತೆ ಕರೆದು ಉಪಚರಿಸುತ್ತಿದ್ದರು. ಹೆಣ್ಣು, ಗಂಡೆಂಬ ಭೇದವಿಲ್ಲದೆ ಯಾರಾದರೂ ಬರಲಾಗದಿದ್ದರೆ, ಕಾರಣ ಕೇಳಿ ತಮ್ಮ ಸಹಾಯ ಹಸ್ತ ಬೇಕಿದ್ದರೆ ಕೊಡುವಲ್ಲಿ ಹಿಂದೂ ಮುಂದು ನೋಡುತ್ತಿರಲಿಲ್ಲ. ಇನ್ನು ರಾಮನವಮಿ, ಗೌರಿ ಗಣೇಶ, ಆಯುಧ ಪೂಜೆ, ವಿಜಯದಶಮಿ, ದೀಪಾವಳಿ ಹಬ್ಬಗಳನ್ನು ಪ್ರತಿ ಊರಿನ ಸಮಸ್ತರು ಕಾರ್ಖಾನೆಗಳಲ್ಲಿ ದುಡಿಯುವ ಕಾರ್ಮಿಕರು ಒಗ್ಗಟ್ಟಾಗಿ, ಪತ್ರಿಕೆಗಳು – ಇಂದಿಗೂ ಸಾಮೂಹಿಕವಾಗಿ ಆಚರಿಸುತ್ತಿರುವರು. ಈ ಸಂಪ್ರದಾಯಸ್ಥ ಮೂರ್ತಿ ಪೂಜೆ, ಪುನಸ್ಕಾರಗಳು ತಮ್ಮನ್ನು ತಾವೇ ಬುದ್ಧಿವಂತರೆಂದು ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳುವ, ಪ್ರಗತಿಪರರೆಂದು ಕೊಚ್ಚಿಕೊಳ್ಳುವ, ಇಂದಿನ ಹಲವು ಬುದ್ಧಿ ಜೀವಿಗಳ ಟೀಕೆಗೆ ಗುರಿಯಾದರೂ, ಜಾಗತೀಕರಣದ ಪ್ರಭಾವದಿಂದಾಗಿಯೂ ಕೂಡ ಹಿಂದೂ ಸಂಪ್ರದಾಯವನ್ನು ಎಳ್ಳಷ್ಟು ಮರೆತಿಲ್ಲವೆಂಬುದಕ್ಕೆ ಪ್ರಾತ್ಯಕ್ಷಿಕ ಸಾಕ್ಷಿ! ಇನ್ನು ಜಾತಿ, ಮತಗಳ ಬಗ್ಗೆ ಯಾರೂ ಚಕಾರ ಎತ್ತುತ್ತಿರಲಿಲ್ಲ. ದೊಡ್ಡ ಷಹರುಗಳೆಂದರೆ ಆಗೆಲ್ಲ ಬೊಂಬಾಯಿ, ಮದ್ರಾಸು, ಕಲ್ಕತ್ತಾ ಇತ್ಯಾದಿಯಷ್ಟೆ. ಇತರ ನಗರಗಳು ಹಾಗೂ ತಾಲ್ಲೂಕು ಮಟ್ಟದ ಊರುಗಳಲ್ಲಿ ಅಲ್ಲಿಯ ವಾಸ್ತವಿಕ ಜೀವನವೇ ಬೇರೆ ರೀತಿಯದು. ವ್ಯವಸಾಯ ಮಾಡುವವರನ್ನು ಬಿಟ್ಟರೆ, ಇತರ ಜನರಿಗೆ ಸಂಜೆ ಹೊತ್ತು ಕಳೆಯುವ ದಾರಿ ಎಂದರೆ ಪರಸ್ಪರ ಮಾತು, ವಿಚಾರ, ವಿನಿಮಯ. ಇಲೆಟ್ರಿಕ್ ದೀಪಗಳನ್ನು ಕಾಣದ ಹಳ್ಳಿ ಜೀವನವಂತೂ ಬಹು ನೀರಸವೆಂದೇ ಹೇಳಬೇಕು. ಸಂಜೆಯಾಗುತ್ತಲೇ ಕುರಿ, ಮೇಕೆಗಳನ್ನು ಮೇಯಿಸಿಕೊಂಡು ಬಂದು, ದನಗಳನ್ನು ಕೊಟ್ಟಿಗೆಗೆ ತಂದು, ಅವುಗಳಿಗೆ ಹುಲ್ಲು, ನೀರು ಒದಗಿಸುವುದು ಚಿಕ್ಕವರ ಆದ್ಯ ಕರ್ತವ್ಯ. ಗಂಡಸರು ಊರಂಚಿನ ಕಟ್ಟೆಗಳಲ್ಲಿಯೋ ದೇವಸ್ಥಾನದ ಜಗುಲಿಯ ಮೇಲೋ ಕೂತು ಹರಟೆ ಇಲ್ಲ ಇಸ್ಪೀಟಾಟದಲ್ಲೋ, ಹೆಂಗಸರು ಗೃಹಕೃತ್ಯ ಮುಗಿಸಿ, ಎಲ್ಲರ ಮನೆಯ ಬಾಗಿಲುಗಳಾಚೆಯ ಜಗುಲಿಗಳಲ್ಲಿ ಕೂತು ಹರಟೆಯ ಮಾತುಗಳಲ್ಲಿ ತನ್ಮಯರಾಗುತ್ತಿದ್ದಿದೂ ಸಹಜ ಆ ದಿನಗಳಲ್ಲಿ, ಕುತೂಹಲದ ಅನುಭವಗಳು, ಯಾರೋ ಹೇಳಿದ ಕಥೆಗಳು ಕೂಡ ಪರಸ್ಪರ ವಿನಿಮಯ, ಚರ್ಚೆಗೆ ಬರುವುದು ಸಾಮಾನ್ಯ. ಅಂತಹ ವಿಷಯಗಳಲ್ಲಿ ದೆವ್ವದ ಬಗ್ಗೆ ಸ್ವಲ್ಪ ಹೆಚ್ಚೆನಿಸುವಷ್ಟು ಆಸಕ್ತಿ ತೋರುವುದೂ ಉಂಟು.

‘‘ನೋಡಿ ಆಂಡಾಲೂ, ನೀವು ದೊಡ್ಡ ಊರಿನಿಂದ ಬಂದವರು, ದೆವ್ವ, ಪಿಶಾಚಿಗಳನ್ನು, ನಂಬ್ತೀರಾ ಇಲ್ವೋ, ನಂ ಸಂಸಾರ ನಾಗ್ಮಂಗಲದಲ್ಲಿದ್ದಾಗ – ನಿಮಗೆ ಗೊತ್ತಲ್ವಾ, ನಮ್ಮವರು ಅಲ್ಲಿ ದೇವಸ್ಥಾನದ ಪೂಜಾರಿಯಾಗಿದ್ದು, ಕುಟಂಬಕ್ಕೆ ವರಮಾನ ಸಾಲದು ಅಂತಾ ಇಲ್ಲಿಗ್ ಬಂದಿದ್ದು – ಮಳೆಗಾಲದಲ್ಲಿ ಹಾವುಗಳು ಎಷ್ಟು ಸಾಮಾನ್ಯವೋ, ಸಂಜೆ ಆಗುತ್ತಲೂ ಕೊಳ್ಳಿ ದೆವ್ವಗಳು ಕೂಡ ಆಕಾಶ ನಿರ್ಮಲವಾಗಿದ್ದರೆ ಕಾಣ್ಸೋವು ಕಂಣ್ರೀ.’’ ‘‘ಹೌದಾ? ಹ್ಯಾಗಿರುತ್ತವೇ ಅವು?’’, ‘‘ಅದೇರಿ, ಡೊಂಕುಡೊಂಕಾಗಿ, ಒಂಥರಾ ಉರಿಯೋ ಕೊಳ್ಳಿ ತರಹಾನೇ ಕಾಣಿಸ್ತಿದ್ವು’’

‘‘ಏನ್ ಹೇಳ್ತೀರಾ ನಾಗಮ್ಮನೋರೇ, ಈಗಿನ ದಿನಗಳಲ್ಲೂ ಯಾರಾದ್ರೂ ನಂಬ್ತಾರಾ? ಅದೆಲ್ಲಾ ಭ್ರಮೆ ಅಂತಾ ಪೇಪರುಗಳಲ್ಲಿ ಬರ್ದಿದಾರಂತೆ?’’ ‘‘ಅದೇನೋಪ್ಪಾ, ನಾವೆಲ್ಲಾ ಊರ್ಗೆ ಊರೇ ಕಣ್ಣಾರ ನೋಡೀವೀ, ಒಂದ್ಸಲ ಏನಾಯ್ತು ಗೊತ್ತೇನ್ರೀ ಆಂಡಾಲೂ – ಇದು ಸಿನಿಮಾಗಳಲ್ಲಿ ತೋರ್ಸಾ ತರಹಾನೇ – ಅಲ್ಲಿಯ ಅಳಲೆಕಾಯಿ ಪಂಡಿತ ಅಹೋಬಲ ಭಟ್ಟರ ಮಾವ ‘ಶಾನುಭೋಗ ಶೀನಪ್ಪ’ ಅಂತ ಇಲಿಯಾರಪುರದಲ್ಲಿದ್ರಂತೆ ಕಣ್ರೀ – ಅವರ್ಗೆ ಇನ್ನೊಂದ್ ಹೆಸರು ‘ಇಲಿ ಶೀನಪ್ಪ’ ಅಂತ, ಅವರಿದ್ದ್ಮನೆ ರಸ್ತೆಗೂ ‘ಇಲಿ ಶೀನಪ್ಪ ರಸ್ತೆ ಅಂತಾ ಕರೀತ್ರಿದ್ರಂತೆ’ – ಯಾಕೋ, ಅವರ್ನ ದೆವ್ವ ಅಟ್ಟಿಸ್ಕೊಂಡ್ ಬಂದಿತ್ತಂತ ಹೇಳೊವ್ರು. ನೀವ್ ಹೆದ್ರಕೊಳ್ಳಲ್ಲಾಂದ್ರೆ ಹೇಳ್ತೀನಿ.’’ ಆಂಡಾಳುವಿನ ಒಪ್ಪಿಗೆಗೆ ಕಾಯ್ದೆ ಮುಂದುವರೆಸಿದರು ನಾಗಮ್ಮ ‘‘ಶೀನಪ್ಪ ಬಹಳ ಧೈರ್ಯಸ್ತ ಅಂತೆ, ಆದ್ರೆ ಒಂದ್ಸಲ ಅವ್ರ ಪಕ್ಕದ್ ಊರ್ಗೆ ಕೆಲ್ಸದ್ಮೇಲೆ ಹೋಕ್ಬೇಕಾಗಿತ್ತು. ಹಿಂತಿರುಗೋದು ತಡವಾಗಿ, ದಾರೀಲಿ ಬಿಕೋ ಅನ್ನೋಕಾಡ್ನ ದಾಟೊ ಹೊತ್ಗೆ, ಜೋರಾಗ್ ಮಳೆ ಬಂತಂತೆ ಕಣ್ರೀ. ಅಮಾವಾಸ್ಯೆಗೆ ಎರಡು ದಿನ ಮುಂಚೆ ಅಂದ್ಮೇಲೆ ಎಲ್ಲೆಲ್ಲೂ ಕತ್ತಲು, ಆಗಾಗ್ಗೆ ಮಿಂಚಿನ ಬೆಳಕನ್ನ ಬಿಟ್ರೆ. ಸುತ್ತಲೂ ದೊಡ್ದೊಡ್ ಮರಗಳು, ಗಿಡ, ಪೊದೆಗಳು, ವಿಕಾರವಾಗಿ ಕಿರ್ಚೋ ನರಿಗಳು, ಅದು ಬಿಟ್ರೆ, ಬಿಕೋ ಅನ್ನೋ ಜಾಗ, ರಾತ್ರಿ ಎಂಟೊಂಬ್ಬತ್ ಗಂಟೆ, ಜೊತೇಗ್ಯಾರೂ ಇಲ್ಲ ಬೇರೆ. ಎಂತಹವರೂ ಹೆದರೋ ಪರಿಸ್ಥಿತಿ ಅಲ್ವೇನ್ರೀ, ಕಾಡು ಅಂದ್ಮೇಲೆ ಹುಲಿ, ಚಿರತೆ, ಅಂಥಾ ಕ್ರೂರ ಪ್ರಾಣಿಗ್ಳು, ಯಾವ್ದಾದ್ರೂ ಗಿಡದ ನೆರಳು ನೋಡಿದ್ರೂ, ಭಯವಾಗೋ ಸನ್ನಿವೇಶ. ಮಲ್ನಾಡು ಅಂದ್ಮೇಲೆ ಮಳೆ ಹನಿಗಳು ಒಂದೊಂದು ರಟ್ಟೆ ಗಾತ್ರ. ಆ ಮಳೇಲಿ ನೆನೆಯೋದು ತಪ್ಪಿಸೋಕೆ ಎಲ್ಲೂ ಆಶ್ರಯ ಇಲ್ಲ. ಕೊನೆಗೆ ನಡೆದೂ ನಡೆದು ಸುಸ್ತಾಗೋ ವೇಳೆಗೆ ಅಲ್ಲೊಂದ್ ಗುಡಿಸಲ್ತರಾ ಜೋಪಡಿ ಕಾಣಿಸ್ತಂತೆರೀ.’’ ‘‘ಅದು ಹ್ಯಾಗೆ ಅಂತಾ ಜಾಗದಲ್ಲಿ?’’ ‘‘ಅದೇ ಆಶ್ಚರ್ಯ ಕಣ್ರೀ, ದೇವ್ರೇ ಅಂತಾ ಆ ಗುಡ್ಸಲಿನ ತಡಿಕೆ ಬಾಗ್ಲು ತಟ್ಟಿದ್ದೇ ತಟ್ಟಿದ್ದೂ, ಯಾರೂ ಕದ ತೆಗೀಲಿಲ್ಲ, ‘‘ಅಯ್ಯೋ ಭಗವಂತಾ, ಪಾಪಿ ಸಮುದ್ರಕ್ಕೋದ್ರೂ, ಮೊಣ್ಕಾಲುದ್ದ ನೀರ?’’ ಅನ್ನೋ ತರಹಾ ಆಗೋಯ್ತಾ, ಅನ್ಕೊಂಡ್ ಬೆನ್ ತಿರುಗಿಸಿದ್ರೆ, ಏನ್ ಆಶ್ಚರ್ಯ, ಅಂಡಾಳು ಅಂತೀರೀ?’’, ‘‘ಏನಾಯ್ತು, ನಾಗಮ್ಮ? ನಿಜವಾಗ್ಲೂ ಭಯವಾಗತ್ತಲ್ವ ನೆನೆಸಿಕೊಳ್ಳಕ್ಕೂ!’’ ‘‘ಅಲ್ವೇ? ಎದ್ರುಗೇನೆ ಒಬ್ಬ ಬೆಚ್ಚಗಿನ ಬಟ್ಟೆ ಹಾಕ್ಕೊಂಡ್ಕೈನಾಗ್

ದೀಪದ್ ಲಾಂದ್ರ ಹೊತ್ಕಂಡು ಇವರ ಮುಖಕ್ಕೆ ನೇರ ಹಿಡ್ದಾನೆ! ಒಂದು ಕ್ಷಣ, ಅಂತಾ ಚಳಿ, ಮಳೇಲೂ ಆತ ಬೆವರಿ, ಬಾಯಿ ತೊದಲ್ತಾ ಕೆಳಕ್ಕೆ ಬೀಳೋವ್ರಂಗಾಯ್ತಂತೆ ಆಂಡಾಳೂ'', ''ಆಮೇಕೆ?'', ''ಆ ಮನುಷ್ಯ – ನೀವ್ ಹಂಗಂತ ಅನ್ಕೊಂಡ್ರೆ – ಹಿಂದಕ್ ಸರಿದು, ಹೆದಬ್ರ್ಯಾಡಿ, ನೀವ್ಯಾರು, ಇಲ್ಯಾಕ್ ಇದೀರಿ ಅನ್ನೋದ್ ನಂಗೊತ್ತು, ಬನ್ನಿ, ತುಂಬಾನೇ ಮಳೆಲಿ ನೆನೆದಿದೀರಿ ಪಾಪ, ನಂಜೊತೆ ಬನ್ನಿ, ಹೆದರಬ್ಯಾಡಿ, ಅಂತೇಳಿ ಆ ಗುಡಿಸಲು ಬಾಗಿಲ ತೆಗೆದು ಒಳಕ್ಕೆ ಇವರನ್ನ ಬಿಟ್ಟಾನ್ರೀ, ತಗಳಪ್ಪಾ, ಏನಾಶ್ಚರ್ಯ ಅಂತೀರಿ! ಒಳಗೆ ಹೋಗ್ತಿದ್ದಾಗೇ ವಿಶಾಲವಾದ ಸುಂದರ ಹಜಾರ, ಎಲ್ಲೆಲ್ಲೂ ಪೆಟ್ರೋಮಾಕ್ಸ್ ದೀಪದ ಝುಗ ಝುಗ ಬೆಳಕು, ಅಲ್ಲಿ ಮದ್ವೆಗೆ ಸಿದ್ಧತೆ ನಡೆದಿದೆ, ಒಂದ್ಕಡೆ ಒಳಗೆ ಹೋಗ್ತಾ, ಅಡಿಗೆ ಮನೆ, ದೊಡ್ ದೊಡ್ ಪಾತ್ರೆಗಳಲ್ಲಿ ಭಕ್ಷ್ಯಗಳು ಎಲ್ಲ ತಯಾರಾಗ್ತಿದೆ, ನಾನಾ ತರಹದ ಸುಮಾರ್ ಜನ ಸೇರಿದಿದ್ದಾರೆ! ಇನ್ನೊಂದೆಡೆ ಓಲಗದ ಪರಿವಾರ ಸಿದ್ಧವಾಗಿದೆ. ಹಸೆಯ ಮೇಲೆ ಮದುವೆಯಾಗಲಿರುವ ಗಂಡು, ಹೆಣ್ಣು ಗಂಭೀರವಾಗಿ ಕುಳಿತಿವೆ! ಆಸನವೊಂದನ್ನ ತೋರಿಸಿ, ಬನ್ನಿ ಇಲ್ಲಿ ಕುಳ್ಳಿರಿ ಎಂದು ಆತ ಹೇಳುತ್ತಿದ್ದಾನೆ. ಗಾಬರಿಯಿಂದ ಕೂಡುತ್ತಲೇ, ''ನೋಡಿ, ನಿಮಗಾಗಿ ಎಲ್ಲರೂ ಕಾಯುತ್ತಿದ್ದರು, ನಿಮಗೆ ದಾನ ಮಾಡಿ ಆಶೀರ್ವಾದ ಪಡೆದ ನಂತರವಷ್ಟೆ ಮದುವೆ ಕಾರ್ಯಕ್ರಮ ಪ್ರಾರಂಭ, ಅದುವೇ ನಮ್ಮ ಸಂಪ್ರದಾಯ'' ಎನ್ನುತ್ತಾ ಹರಿವಾಣದಲ್ಲಿ ಪಂಚೆ, ಶಲ್ಯ, ಒಂದು ತಾಮ್ರದ ತಪ್ಪಲೆಯಲ್ಲಿ ಧಾನ್ಯ ಹಾಗೂ ಚಿಲ್ಲರೆ ಕಾಸು ಅವರ ಮುಂದಿಟ್ಟು ಬಾಗಿ ನಮಸ್ಕರಿಸುತ್ತಿದ್ದಂತೆ ಶಾನುಭೋಗರ ದೃಷ್ಟಿ ಸೊಂಟದ ಕೆಳಗೆ ದೇಹವೇ ಇಲ್ಲದ, ಆದರೆ ಧಾರಾಳವಾಗಿ ನೀರು ತೊಟ್ಟಿಕ್ಕುತ್ತಿದ್ದ ಆ ವ್ಯಕ್ತಿಯನ್ನು ಆಪಾದತಲಮಸ್ತಕ ನೋಡುತ್ತಲೇ ಅವರ ಜಂಘಾಬಲವೇ ಉಡುಗಿ ಹೋಯಿತಂತೆ, ಕೂಡಲೇ ''ಸರಿ, ನಾ ಈಗಲೇ ಹೊರಡಬೇಕು, ಕ್ಷಮಿಸಿ, ಎಂದು ತೊದಲುತ್ತಾ ಎದ್ದರಂತೆ ಕೈಯಲ್ಲಿ ತಟ್ಟೆ ಹಾಗೂ ಪಾತ್ರೆ ಹಿಡಿದು! ''ಬನ್ನಿ, ನಿಮಗೆ ದಾರಿ ತೋರಿಸುತ್ತೇನೆ'' ಎನ್ನುತ್ತಾ ಮತ್ತೆ ದೀಪವನ್ನು ಹಿಡಿದು ಆಚೆಗೆ ಬರುತ್ತಲೇ ಎಲ್ಲವೂ ಮಾಯ, ಕಣ್ಣು ಕತ್ತಲೆ ಕಟ್ಟಿದಂತಾಯಿತಂತೆ. ಮತ್ತೆ ಕಣ್ಣು ಬಿಟ್ಟಾಗ, ಬೆಳಗಿನ ಮುಂಜಾನೆಯಾಗಿ, ನಡುಗುವ ಚಳಿಯಲ್ಲಿ, ಮುರಿದು ಬಿದ್ದು ಹೋಗಿದ್ದ ಒಂದು ಗುಡಿಸಲಿನ ಹತ್ತಿರ, 'ಬಿಕೋ' ಎನ್ನುವ ಜಾಗದಲ್ಲಿ ಮಲಗಿದ್ದರಂತೆ ಕೈಯಲ್ಲಿ, ತಾಮ್ರದ ತಟ್ಟೆ, ಕಂಚಿನ ಪಾತ್ರೆಯನ್ನು ಭದ್ರವಾಗಿ ಹಿಡಿದೇ! ಅಲ್ಲಿಂದ 'ಎದ್ದೆನೋ, ಬಿದ್ದೆನೋ' ಎನ್ನುತ್ತಾ ಅದು ಹೇಗೋ ಊರನ್ನು ಸೇರಿಸಿಕೊಂಡವರು, ಊರಾಚೆಯ ಆಂಜನೇಯನ ದೇವಸ್ಥಾನದ ಕಟ್ಟೆಯ ಮೇಲೆ ಜ್ಞಾನವಿಲ್ಲದೆ ಬಿದ್ದಿದ್ದನ್ನ ಯಾರೋ ನೋಡಿ ಇವರನ್ನು ಕರೆತಂದು ಮನೆಗೆ ಬಿಟ್ಟರಂತೆ ಆಂಡಾಲೂ! ನಾಲ್ಕೈದು ದಿನ ಜ್ವರ ಬಂದು ಚೇತರಿಸಿಕೊಂಡರಂತೆ! 'ಆಶ್ಚರ್ಯ' ಅಂದರೆ ಈಗಲೂ ಆ ದೆವ್ವದ ಜ್ಞಾಪಕಾರ್ಥ ಅವಳ ಬಳಿ ಇದ್ದ ಆ ತಟ್ಟೆ ಮತ್ತು ಕಂಚಿನ ಪಾತ್ರೆಯನ್ನು ಅವರ ಮನೆಯವರು ಎಲ್ಲರಿಗೂ ತೋರಿಸುತ್ತಾರಂತೆ ಕಣ್ರೀ!''

# ಮೊಬೈಲಾಯಣ

- ರಮ್ಯ

**ಕೆ**ಲವರು ಮೊಬೈಲಿನಲ್ಲಿ ಯಾರ ಜೊತೆ ಮಾತನಾಡುತ್ತಾರೋ ಅವರಿಗೆ ಮಾತ್ರವಲ್ಲ, ಊರಿಗೆಲ್ಲಾ ಆ ಮಾತು ಕೇಳಿಸಬೇಕು, ಹಾಗೆ ಕೂಗುತ್ತಾರೆ.

**ಲ್ಯಾಂಡ್‌ಲೈನ್‌ನಲ್ಲಿ ಮಾತು ಕಥೆ ಸೇಫಾಗಿತ್ತು. ಆದರೆ ಈಗ ಜಗಜ್ಜಾಹೀರ.**

ಮುಂಚೆಯೆಲ್ಲಾ ಏನು ಮಾತಾಡಿದರೂ ಅದು ಯಾರಿಗೆ ಅನ್ವಯಿಸುತ್ತೋ ಅವರ ಕಿವಿಗೆ ಮಾತ್ರ ಬೀಳುತ್ತಿತ್ತು. ನೀವು ನಿಮ್ಮ ಗರ್ಲ್‌ಫ್ರೆಂಡಿಗೆ ಏನು ಪಿಸುಗುಟ್ಟುತ್ತೀರೋ, ಹೆಂಡತಿಯಿಂದ ಹೇಗೆ ಬೈಯಿಸಿಕೊಳ್ಳುತ್ತೀರೋ ಅಥವಾ ಬಾಸ್‌ಗೆ ಹೆದರಿ ಸಾಯುತ್ತೀರೋ, ಅದು ಯಾರಿಗೂ ಗೊತ್ತಾಗುತ್ತಿರಲಿಲ್ಲ. ಲ್ಯಾಂಡ್‌ಲೈನ್‌ನಲ್ಲಿ ಮಾತು ಕಥೆ ಸೇಫಾಗಿತ್ತು.

ಮೊಬೈಲ್ ಬಂದ ಮೇಲೆ ಈಗಿನ ಫ್ಯಾಷನ್ನೇ ಬೇರೆ. 'ವಾಕ್ ಅಂಡ್ ಟಾಕ್' ಅಂದ್ರೆ 'ಟಾಕ್ ಶೋ' ದಿಂದ ಪ್ರಪಂಚಕ್ಕೆಲ್ಲಾ ನೀವು ಮಾತನಾಡೋದು ಬ್ರಾಡ್‌ಕಾಸ್ಟ್ ಆಗುತ್ತೆ.

ಮನೆಯಿಂದ ಹೊರಗೆ ಹೊರಟರೆ ಇದರ ವಿಚಿತ್ರ ಅನುಭವ ಕೇಳುವುದಕ್ಕೆ, ಕೆಲವೊಮ್ಮೆ ನೋಡುವುದಕ್ಕೂ ಸಿಗುತ್ತೆ.

ಮನೆಯ ಹತ್ತಿರದ ಮದುವೆ ಛತ್ರದ ಮುಂದೆ ಹುಡುಗಿಯ ತಂದೆ ಯಾರ ಜೊತೇನೋ ಮೊಬೈಲ್ನಲ್ಲಿ ಗುಡುಗ್ತಿದ್ರು. 'ಕೊಡೋದು 5 ಲಕ್ಷ ಅಂತ ಮಾತಾಗಿತ್ತು. ನಿನ್ನೆ ರಾತ್ರಿ ಛತ್ರಕ್ಕೆ ಬರ್ತಾನೇ 8 ಲಕ್ಷ ಕೊಡ್ಬೇಕೂಂತ ಗಂಡಿನ ಕಡೇವ್ರು ಕಿತಾಪತಿ ಮಾಡ್ತಿದಾರೆ.... ಇಲ್ದಿದ್ರೆ ಹುಡುಗ ಬೆಳಿಗ್ಗೆ ಹಸೆಮಣೆಗೆ ಬರಲ್ವಂತೆ.... ನೋಡು ಹ್ಯಾಗಿದೆ.. ಇಲ್ಲ.... ನಾನೇನು ಜಗಳಕ್ಕೆ ಹೋಗಲ್ಲ... ಹ್ಯಾಗೋ ಇನ್ನೆರೆಡು ದಿನ ಹಲ್ಕಚ್ಕೊಂಡಿದ್ದು ಮದುವೆ ಮುಗಿಸ್ತೀನಿ.... ಮದುವೆ ಆದ್ಮೇಲೆ ಹುಡುಗಿಗೆ ಕೊಡ್ತೀವಂತ ಹೇಳಿದ್ದ ಒಡವೆಗಳ್ನ ಅರ್ಧಕ್ಕರ್ಧ ಇಳಿಸ್ತೀನಿ.... ಧಾರೆ ಆದ್ಮೇಲೆ ಮಧ್ಯಾಹ್ನ ಊಟಕ್ಕೆ ಜಾಂಗ್ರಿ, ಲಾಡುಗೆ ಒಪ್ಕೊಂಡಿದ್ದೆ..... ಈಗ ಬರೀ ನೀರ ಪಾಯಸ, ಪುಳಿಯೋಗರೆ ಮಾಡಿಸ್ತೀನಿ....'

ಎಷ್ಟೋ ಮದುವೆ ಊಟದ ಮೆನುವಿನ ಹಿಂದೆ ಏನೇನು ಕಾರಣಗಳಿರುತ್ತೋ!

ಮುಂದಿನ ಕ್ರಾಸ್ನಲ್ಲಿ ರೋಡ್ ಕಂಟ್ರಾಕ್ಟರೊಬ್ಬ ಸಿಟಿ ಕಾರ್ಪೊರೇಷನ್ ಅಧಿಕಾರಿಯ ಮೇಲೆ ಫೋನಲ್ಲಿ ಕೂಗ್ತಿದ್ದ. 'ರಸ್ತೆ ಮೇಲೆ ಟಾರು ನೀರು ದೋಸೆ ಹಾಗೆ ಹುಯ್ದಿದೀನಿ ಅಂತೀರಲ್ಲಾ.... ಟೆಂಡರ್ ಪಾಸ್ ಮಾಡ್ಸಿ ಆರ್ಡರ್ ತೊಗೋಳಕ್ಕೆ ನನ್ನ ಹಣಾನಾ ನೀರಿನ ಹಾಗೆ ಸುರೀಲಿಲ್ವಾ? ಕೆಲ್ಸ ಆದ್ಮೇಲೆ ಬಿಲ್ ಪಾಸ್ ಮಾಡ್ಸಕ್ಕೆ, ಪೇಮೆಂಟು ಸಿಗೋದಕ್ಕೆ ಮತ್ತೆ ದಾರೀ ಉದ್ದಕ್ಕೂ ದುಡ್ನ ಚೆಲ್ಬೇಕಲ್ಲಾ...... ನಂಗೆ ಸಿಗೋ ದುಡ್ಗೆ ಟಾರು ದೋಸೆ ಹಾಗೆ ಹುಯ್ದೆ ಉತ್ತಪ್ಪ ನೋ ಇಲ್ಲ ಅಕ್ಕಿ ರೊಟ್ಟಿ ತಟ್ಬೇಕಾಗಿತ್ತಾ...?'

ಈಗ ಗೊತ್ತಾಗ್ತಿದೆ ನಮ್ಮ ರೋಡುಗಳು ಯಾಕೆ ಹಪ್ಪಳದ ತರಾ ಪುಡಿಪುಡಿ ಆಗುತ್ವೇಂತ!

ದೇವಸ್ಥಾನದ ಹೊರಗಡೆ ಶಾಸ್ತ್ರಿಗಳು ಸುತ್ತಮುತ್ತ ನೋಡಿ ಟ್ರಸ್ಟಿಗಳ ಹತ್ರ ಮಾತಾಡ್ತಿದ್ರು.. 'ಒಳಗೆ ಭಕ್ತರು ಇದಾರೆ..... ಅದಕ್ಕೆ ಹೊರಗೆ ಬಂದು ಮಾತಾಡ್ತಿದೀನಿ... ಸಂಕ್ರಾಂತಿ ಹಬ್ಬದ ಬೆಳಿಗ್ಗೆ ನಿಮ್ಮ ಮನೇಗೆ 15 ಬಕೆಟ್ನಲ್ಲಿ ಸ್ವೀಟು ಪೊಂಗಲ್, ಖಾರದ ಪೊಂಗಲ್ ಕಳಿಸಿ ಅಂತ ಹೇಳಿ ಕಳಿಸಿದ್ರಲ್ಲಾ.. ಕಳಿಸ್ತೀನಿ ಆದ್ರೆ, ಆಗ ಸಿಸಿಟಿವಿ ಆನ್ ಇರುತ್ತೆ..... ನಾಳೆ ಯಾರಾದ್ರೂ ಕಂಪ್ಲೇಂಟ್ ಮಾಡಿದ್ರೆ ದೊಡ್ಡ ರಾಮಾಯಣ ಆಗಿ ಫಜೀತಿ ಆಗುತ್ತೆ.... ಆಗ ಸಿಸಿಟಿವಿನಲ್ಲಿ ಚೆಕ್ ಮಾಡ್ತಾರೆ.. ಯಾರ ಮನೆಗೆ ಪ್ರಸಾದ ಹೋಯ್ತು ಅಂತ ಪತ್ತೆ ಮಾಡ್ತಾರೆ... ಅದಕ್ಕೆ ನೀವು ಕೆ.ಇ.ಬಿ.ಗೆ ಹೇಳಿ ಒಂದು ಅರ್ಧ ಘಂಟೆ ಲೋಡ್ ಷೆಡ್ಡಿಂಗ್ ಅಂತ ಕರೆಂಟು ಆಫ್ ಮಾಡಿಸ್ತೀರಾ...? ....20 ಬಕೆಟ್ ಕಳಿಸ್ಬೇಕಾ. 5 ಕೆ.ಇ.ಬಿ. ಅವನಿಗಾ.... ಮೂರು ಸ್ವೀಟು, ಎರಡು ಖಾರ? ಒಕೆ.... ಹಾಗೇ ಆಗ್ಲಿ. ರೆಡಿಯಾದಾಗ ನಿಮಗೆ ಮಿಸ್ ಕಾಲ್ ಕೊಡ್ಬೇಕಾ? ಆಗ್ಲಿ ಕೊಡ್ತೀನಿ... ಆಗ ನೀವು ಕೆ.ಇ.ಬಿ.ಗೆ ಫೋನ್ ಮಾಡಿ ಡಿಸ್ಕನೆಕ್ಟ್ ಮಾಡ್ಸಿ..'

ಪದೇ ಪದೇ ಲೋಡ್ ಷೆಡ್ಡಿಂಗ್ ಆಗೋದು ಬೇರೆ ಬೇರೆ ಕಾರಣಕ್ಕೆ ಅನ್ಸುತ್ತೆ!

ಕಾರ್ನರ್ ಅಡ್ಡದಲ್ಲಿ ಇದು ಕೇಳಿಸ್ತು, 'ಬಾಸ್! ನಾನು ಬುಲೆಟ್ ರಾಜ..... ಎಲೆಕ್ಷನ್ ಡ್ಯೂಟಿಗೆ ಬೌನ್ಸರ್ಸ್ ಬೇಕೂಂತ ಹೇಳಿ ಕಳಿಸಿದ್ರಲ್ಲಾ.. ಎಲ್ಲಾರ್ನೂ ರೆಡಿ ಮಾಡೀದೀನಿ.. ಎಕ್ವಿಪ್ಮೆಂಟು...... ಚೈನು, ಮಚ್ಚು ಎಲ್ಲಾ ತೊಗೊಂಡೇ ಬರ್ತಾರೆ.. ಇಲ್ಲಿ ಹಾಕಿ ಸ್ಟಿಕ್ ಸಿಗ್ತಿಲ್ಲ.. ನೀವು ಅಲ್ಲೇ ಅರೇಂಜ್ ಮಾಡಿ ಅದನ್ನ. ರಾತ್ರಿ ಅವರಿಗೆ ಸ್ವಲ್ಪ ಡ್ರಿಂಕ್ಸು, ನಾನ್ ವೆಜ್ ಕೊಡಿಸ್ಬಿಡಿ. ಲೋಕಲ್ ಆದ್ರೂ ಆಯ್ತು. ನೀವು ಹೇಳಿದ ಕೆಲ್ಸ ಮಾಡ್ತಾರೆ.. ವೆಲ್ ಟ್ರೈನ್ಡ್.. ಪೇಮೆಂಟು ನಾನು ಅಲ್ಲಿಗೆ ಬಂದಾಗ ತೊಗೊಳ್ತೀನಿ... ಇಡ್ಲಾ..?'

ನಮ್ಮ ದೇಶದಲ್ಲಿ ಹಾಕಿ ಪಂದ್ಯ ಯಾವ ದುಸ್ಥಿತಿಗೆ ಇಳಿದಿದೆ ಅಂತ ಗೊತ್ತಾಗುತ್ತೆ!

ಇನ್ನು ಸ್ವಲ್ಪ ದೂರ ಹೋದ ಮೇಲೆ ಸ್ಮಾರ್ಟಾಗಿ ಡ್ರೆಸ್ ಮಾಡಿದ ಸೇಲ್ಸ್ಮನ್ ಅವನ ಮೊಬೈಲ್ನಲ್ಲಿ ಬಾಸ್ ಹತ್ರ ಮಾತಾಡ್ತಿದ್ದ. 'ಇವತ್ತು ಆಫೀಸಿಗೆ ಬರೋದಕ್ಕೆ ಆಗುತ್ತೋ ಇಲ್ವೋ ಸರ್! ಬೆಂಗಳೂರಿನ ಕೆಟ್ಟ ಟ್ರಾಫಿಕ್ನಲ್ಲಿ ಸಿಕ್ಹಾಕ್ಕೊಂಡಿದ್ದೀನಿ.... ಸ್ಯಾಟಲೈಟ್ ಬಸ್ ಸ್ಟ್ಯಾಂಡ್ನಿಂದ ವೋಲ್ವೊ ಹತ್ಕೊಂಡು ಬರ್ತೀನಿ.. ಮೈಸೂರು ತಲುಪೋಷ್ಟರಲ್ಲಿ ಬಹಳ ಲೇಟಾಗುತ್ತೆ.... ಏನಾದ್ರೂ ಅರ್ಜೆಂಟ್ ಮ್ಯಾಟರ್ ಇದ್ರೆ ಆಫೀಸಿಗೆ ಬರ್ತೀನಿ ಸರ್.... ಇಲ್ದಿದ್ರೆ ನಾಳೆ ಬೆಳಿಗ್ಗೆ ಬರ್ತೀನಿ... ಆಗ್ಬಹುದಾ ಸರ್?..... ಏನಂದ್ರಿ ಸರ್... ಬರುವಾಗ ಎದುರಿಗೆ ನೋಡ್ಕೊಂಡು ನಡೀ ಅಂದ್ರ... ಅರ್ಥವಾಗ್ಲಿಲ್ಲ...'

'ಎದುರಿಗೆ ನೋಡ್ಕೊಂಡು ನಡೀ ಅಂತ ಹೇಳಿಲ್ವಾ..'

'ಈಗ ನನಗೇ ಢಿಕ್ಕಿ ಹೊಡೆದ್ಯಲ್ಲೋ.. ಫೂಲ್!'

ಕೆಳಗೆ ಬಿದ್ದಿದ್ದ ಬಾಸ್ನ ಎತ್ತಿದ್ಮೇಲೆ ಸೇಲ್ಸ್ಮನ್ ಗತಿ ಏನಾಗಿರುತ್ತೋ ಊಹಿಸಿಕೊಳ್ಳಿ!

# ಹೈ ಪವರ್ ಪ್ರವಾಸ, ವಿಪರ್ಯಾಸ

**- ಇ.ಆರ್. ರಾಮಚಂದ್ರನ್**

**ಅದ್ದೂರಿ ಸೆಮಿನಾರ್ ನಂತರ ಫಾರಿನ್ ಸ್ಟಡಿ ಟೂರ್ ಬೇರೆ... ಯಾಕಾಗಿ?**

**ಟೇ**ಬಲ್‌ನಲ್ಲಿ ಸುತ್ತಮುತ್ತ ಕುಳಿತಿದ್ದವರು ಗಂಭೀರ ವಿಷಯವನ್ನು ಆಲೋಚಿಸುತ್ತಿದ್ದರು.

'ಇದು ಹಿಂಗೇ ಆದ್ರೆ, ಮುಂದೇನ್ ಗತಿ?'

'ಮುಂದೆ ಹಿಂಗಾಗೋದಕ್ಕೆ ಬಿಡಬಾರ್ದು. ನಾವೆಲ್ಲಾ ಎಕ್ಸ್‌ಪರ್ಟ್‌ಗಳಾಗಿ ಇದ್ದು ಏನು ಪ್ರಯೋಜನ?'

'ಅದು ನಿಜ.. ನಾವು ಇದ್ದೂ ಹಿಂಗಾಯ್ತು ಅಂದ್ರೆ, ನಾಳೆ ನಾಲ್ಕು ಮಾತು ಬಂದೇ ಬರುತ್ತೆ. ಏನಾದ್ರೂ ಐಡಿಯಾ ಇದ್ರೆ ಕೊಡಿ.'

'ನಾವು ಇದರ ವಿಚಾರವಾಗಿ ಕೂಲಂಕುಶವಾಗಿ ಚರ್ಚೆ ಮಾಡಲು ಒಂದು ಸೆಮಿನಾರ್ ಮಾಡಿದ್ರೆ ಹೇಗೆ? ಅದ್ರಿಂದ ಸಲ್ಯೂಷನ್ನೂ ಸಿಗಬಹುದು.'

'ಎಕ್ಸಲೆಂಟ್ ಐಡಿಯಾ! ಮೂರು ದಿವಸದ ನ್ಯಾಷನಲ್ ಸೆಮಿನಾರ್ ಮಾಡೋಣ. ಡೆಲ್ಲಿಯಿಂದ ಪೂಸ ಅಗ್ರಿಕಲ್ಚರ್ ರಿಸರ್ಚ ಇನ್ಸ್ಟಿಟ್ಯೂಟ್ ಡೈರೆಕ್ಟರ್ನ ಅಧ್ಯಕ್ಷರನ್ನಾಗಿ ಕರಿಯೋಣ. ನಿಮ್ಹಾನ್ಸ್‌ನಿಂದ ಯಾರಾದ್ರೂ ಸೈಕಾಲಜಿಸ್ಟ್ ಇದ್ರೆ ಅವರನ್ನೂ ಕರಿಯೋಣ.'

'ಗ್ರೇಟ್! ಸಿ.ಎಮ್. ಹ್ಯಾಗಿದ್ರೂ ಮೈಸೂರಿನಲ್ಲೇ ಇರ್ತಾರೆ. ಅವರ್ನ ಇನಾಗುರೇಷನ್ಗೆ ಕರಿಯೋಣ. ಅವ್ರು ಸೆಮಿನಾರ್ನಲ್ಲೇ ಯಾವುದಾದ್ರೂ ಹೊಸ ಭಾಗ್ಯಾನ ಅನೌನ್ಸ್ ಮಾಡ್ಬಹುದು.'

'ಮೂರು ದಿವಸ, ಅದರಲ್ಲೂ ಸಿ.ಎಮ್. ಮತ್ತು ಡೆಲ್ಲಿಯಿಂದ ಎಕ್ಸಪರ್ಟ್ ಅಂದ್ರೆ ಇಂಟರ್ ನ್ಯಾಷನಲ್ ಡೆಲಿಗೇಟ್ಸೂ ಬರ್ತಾರೆ. ಅದಕ್ಕೆ ಸರಿಯಾಗಿ ಬ್ರೆಕ್‌ಫಾಸ್ಟ್, ಲಂಚ್, ಡಿನ್ನರ್ ಅರೇಂಜ್ ಮಾಡ್ಬೇಕಾಗುತ್ತೆ.'

'ರೈಟ್! ಸೆಮಿನಾರ್ನ 5-ಸ್ಟಾರ್ ಲಲಿತ ಮಹಲ್ ಹೋಟಲ್ನಲ್ಲಿ ಮಾಡೋಣ. ರೂಮ್ಸೂ ಅಲ್ಲೇ ಬುಕ್ ಮಾಡ್ಬಹುದು. ಲಾಸ್ಟ್ ಡೇ ಆಫ್ಟರ್ ಲಂಚ್ ಮಂಡ್ಯಗೆ ಸೈಟ್ ವಿಸಿಟ್ ಇಟ್ಕೊಳ್ಳೋಣ. ಇನ್ನೊಂದು ವಿಷಯ. ಈ ತರಹ ಸೆಮಿನಾರ್ಗೆ ಪಬ್ಲಿಸಿಟಿ ಸರಿಯಾಗಿ ಇರ್ಬೇಕು. ನ್ಯಾಷನಲ್ ಪ್ರೆಸ್ ಬರದಿದ್ರೆ ಹೊರಗಡೆ ಬೇರೆ ಯಾರ್ಗೂ ನಮ್ಮ ಸೆಮಿನಾರ್ ವಿಷಯ ಗೊತ್ತಾಗಲ್ಲ. ಅವರಿಗೆ ಟು ಅಂಡ್ ಫ್ರೋ ಏರ್ ಟಿಕೆಟ್ ಪ್ಲಸ್ 5 ಸ್ಟಾರ್ ಹೋಟೆಲ್‌ನಲ್ಲಿ ಇರಸ್ಕೊಂಡ್ರೇನೇ ಅವರು ಬರೋದು. ನಮ್ಮ ಪ್ರೈಮ್ ಮಿನಿಸ್ಟರ್ ಕೂಡ ಅವರ್ಗೆ ಸರಿಯಾಗಿ ಉಪ್ಚಾರ ಮಾಡ್ತಾರೆ; ಆಗ್ಲೇ ಅವರು ಸರಿಯಾಗಿ ಬರಿಯೋದು.'

'ಯಾರನ್ನು ಕರೀಬೇಕು?'

'ಡೆಲ್ಲೀಲಿರೋ ಒಂದೆರೆಡು ಇನ್‌ಫ್ಲುಎನ್‌ಷಿಯಲ್ ಟಿವಿ ಮತ್ತು ಪ್ರಿಂಟ್

ಮೀಡಿಯಾದವರು... ಬರ್ಕಾ ದತ್‌ನ ಕರೆದ್ರೆ, ಯಾವ ಸಬ್ಜೆಕ್ಟ್ ಕೊಟ್ರು ಒಂದರ್ಧ ಘಂಟೆ ಕೊರೀತಾರೆ.'

'ನಿಜ. ಟೈಮ್ಸ್ ನೌ ನಿಂದ ಅರ್ನಾಬ್ ಗೋಸ್ವಾಮೀನ ಕರೆದ್ರೆ, ಆಸಾಮಿ ಇಡೀ ರಾತ್ರಿ ನಮ್ಮ ಸೆಮಿನಾರ್ ವಿಷಯಾನೇ ಮಾತಾಡ್ತಾರೆ. ಒಳ್ಳೆ ಪಬ್ಲಿಸಿಟಿ ಸಿಗುತ್ತೆ. ಆಮೇಲೆ ವಾರಗಟ್ಲೆ ಡಿಬೇಟ್ ಮಾಡ್ತಾರೆ. ಇವರಿಬ್ಬರನ್ನೂ ಸ್ಪೆಷಲ್ ಗೆಸ್ಟ್ಸ್ ಆಗಿ ಕರಿಯೋಣ.'

'ಮೆನು ಏನಿರಲಿ?'

'ಅದಕ್ಕೆ ಒಂದು ಸಣ್ಣ ಕಮಿಟಿ ಮಾಡೋಣ. ಅವರು ಏನು ಚೂಸ್ ಮಾಡಿದಾರೋ ಅದಕ್ಕೆ ಬೇಕಾದ್ರೆ ಐಟಮ್ಸ್ನ ಸೇರಿಸಿದ್ರಾಯಿತು. ಬೋತ್ ವೆಜ್ ಅಂಡ್ ನಾನ್ ವೆಜ್. ವ್ಯಾಲಿಡೆಕ್ಟರಿ ಫಂಕ್ಷನ್. ರಾತ್ರಿ ಡಿನ್ನರ್ಗೆ ಮುಂಚೆ ಡ್ರಿಂಕ್ಸ್ ಇಡೋಣ. ಅದಿಲ್ದೆ ಗೆಸ್ಟ್ಸ್ ಯಾರೂ ಬರೋದಿಲ್ಲ. ಸ್ಕಾಚ್ ಇರ್ಲಿ; ಪ್ರೆಸ್ಟಿಜ್ ಮೆನ್ಟೇನ್ ಮಾಡ್ಬೇಕಲ್ಲ. ಕೊನೇಲಿ ಸ್ಯಾಂಡಲ್‌ವುಡ್ನಲ್ಲಿ ಮಾಡಿದ್ದ ಮಹಿಷಾಸುರಮರ್ಧಿನಿ ಗಿಫ್ಟ್ ಎಲ್ಲಾ ಡೆಲಿಗೇಟ್ಸ್‌ಗೆ.'

'ಹಾಗಾದ್ರೆ ಅಗ್ರೀಡ್. 3-ಡೆ ಸೆಮಿನಾರ್. ಸಿ.ಎಮ್. ಅಂಡ್ ಡೆಲ್ಲಿ ಐ.ಎ.ಆರೈ. ಯಿಂದ ಡೈರೆಕ್ಟರ್. ಲಲಿತ ಮಹಲ್‌ನಲ್ಲಿ. ಸ್ಯಾಂಡಲ್ ವುಡ್ ಗಿಫ್ಟ್. ನಾನು ಮಿನಿಟ್ಸ್ ಕಳಿಸ್ತೀನಿ. ಡೇಟ್ಸ್ ಕನ್ಫರ್ಮ್ ಮಾಡಿ ನನಗೆ ಹೇಳಿ.'

'ಇನ್ನೊಂದು ವಿಷಯ. ಈ ತರಹ ಫಂಕ್ಷನ್ಗೆ ಯಾರಾದ್ರು ಪ್ರತಿಭಟಿಸೋವ್ರು ಇದ್ದೇ ಇರ್ತಾರೆ. ಬ್ಲಾಕ್ ಫ್ಲಾಗ್, ಹಂಗರ್ ಸ್ಟ್ರೈಕ್, ಡೆಮಾನ್ಸ್ಟ್ರೇಷನ್ ಇತ್ಯಾದಿ.'

'ನಮ್ಮ ಹೊಸ ಪೊಲೀಸ್ ಕಮಿಷನರ್ಗೆ ಹೇಳಿ ಬಂದೋಬಸ್ತ್ ಬಿಗಿ ಮಾಡ್ಸೋಣ. ಒಂದೊಂದು ಸಲ ಅವೆಲ್ಲಾ ಇದ್ರೇನೇ ಒಳ್ಳೇದೂಂತ ಅನ್ಸುತ್ತೆ. ಫ್ರೀ ಪಬ್ಲಿಸಿಟಿ!'

'ಯಸ್! ಯು ಆರ್ ರೈಟ್!'

★★★

1500 ಡೆಲಿಗೇಟ್ಸ್ ಭಾಗವಹಿಸಿ, ಮೂರು ದಿನದ ಸೆಮಿನಾರ್ ಲಲಿತ ಮಹಲ್ ಹೋಟಲ್ನಲ್ಲಿ ಅದ್ದೂರಿಯಾಗಿ ನಡೆಯಿತು. ವೆಸ್ಟರ್ನ್, ಇಂಡಿಯನ್ ಮೆನು ಇರುವ ಊಟಗಳು ಎಲ್ಲರಿಗೂ ಇಷ್ಟವಾಯಿತು.

'ಸೆಮಿನಾರ್ ಲಾಸ್ಟ್ ಡೇ, 'ಎ ಕಮಿಟಿ ಶುಡ್ ವಿಸಿಟ್ ಅಬ್ರಾಡ್ ಅಂಡ್ ಸ್ಟಡಿ ದಿ ಮ್ಯಾಟರ್ ಇನ್ ಡೀಟೇಲ್' ಅಂತ ಚೇರ್ಮನ್ ಹತ್ರ ಹೇಳ್ಸಿದ್ದು ಒಳ್ಳೇದಾಯ್ತು. ಸಿ.ಎಮ್.ಗೆ ಅದರ ಕಾಪಿ ಕಳಿಸಿದ್ರಾ?'

'ಆವತ್ತೇ ಕಳಿಸಿ ಅವರ ರಿಪ್ಲೈ ಕೂಡ ಬಂತು. 15 ಡೇಸ್ ಸ್ಟಡಿ ಟೂರ್ ಅಪ್ರೂವ್ ಮಾಡಿದಾರೆ! ನಮ್ಮ ಟೀಂನಲ್ಲಿ 10 ಮೆಂಬರ್ಸ್ ಹೆಸರು ಸೇರ್ಸಿದಾರೆ. ಪಾರ್ಟಿ ಎಮ್‌ಎಲ್ಏಸ್, ಡಿಸಿಡೆಂಟ್ಸು, ಅಹಿಂದ ಮೆಂಬರ್ಸ್...'

'ಫುಲ್ ಟೀಮ್ ಆಯ್ತು.'

'ಇನ್ನೊಂದು ವಾರ ಎಕ್‌ಸ್ಟೆಂಡ್ ಮಾಡಿ ಯು ಎಸ್ ಗೂ ಹೋಗಿ ಸ್ಟಡಿ ಮಾಡಿಕೊಂಡು ಬನ್ನಿ ಅಂತ ಸಿ.ಎಮ್. ಹೇಳಿದಾರಂತೆ. ಇದು ಡಿಸಿಡೆಂಟ್ ಮೆಂಬರ್ಸ್‌ರ ಡಿಮ್ಯಾಂಡ್

ಇರ್ಬಹುದು ಅಂತ ನನ್ನ ಊಹೆ. ಒಟ್ನಲ್ಲಿ 3 ವೀಕ್ಸ್.'

'ವಂಡರ್‌ಫುಲ್! ಚೀಫ್ ಸೆಕ್ರಟರಿ ಹೇಳಿದ್ರು. ಇನ್ನಿಬ್ರು ಮೆಂಬರ್ಸ್ ಸೇರ್ಸಿದಾರಂತೆ.'

'ಎಕ್ಸ್‌ಪರ್ಟ್ಸ್ ಇರ್ಬೇಕು..'

'ಒಬ್ರು ಡೊಳ್ಳು ಕುಣಿತ ಆರ್ಟಿಸ್ಟ್ ಅಂತೆ. ಇನ್ನೊಬ್ರು ಜಂಬೂ ಸವಾರೀ ದಿನ ಸಿ.ಎಮ್. ಡ್ಯಾನ್ಸ್ ಮಾಡಿದ್ರಲ್ಲಾ, ಅವ್ರೇ ಅದನ್ನು ಹೇಳಿಕೊಟ್ರಂತೆ ಸಿಎಮ್ಗೆ. ಒಟ್ಟು ಹನ್ನೆರೆಡು ಮೆಂಬರ್ಸು ನಾವು.'

'ಇದರಲ್ಲಿ ಸಬ್ಜೆಕ್ಟ್ ಗೊತ್ತಿರೋವ್ರು ಎಷ್ಟು?'

'ನಾವಿಬ್ಬರು.'

'ಗುಡ್. ಡ್ರೆಸ್ ಅಲೊಎನ್ಸ್, ಟಿಎ ಡಿಎ ಎಲ್ಲಾ ರೆಡಿ ಮಾಡ್ಸೋಣ. ವುಲನ್ ಅಲೊಎನ್ಸ್ ಅಂತ ಇದೆಯಂತಲ್ಲಾ. ಅದನ್ನೂ ನೋಡಿ ಅರೇಂಜ್ ಮಾಡ್ಸೋದು ಒಳ್ಳೇದು.'

★★★

'ಮಿಕ್ಕಿದೋವ್ರಿಗೆ ನ್ಯೂ ಯಾರ್ಕ್ ನೋಡ್ಕೊಂಡ್ಬನ್ನಿಂತ ಕಳ್ಸಿದ್ದು ಸರಿಯಾಯ್ತು..... ಅಂದ ಹಾಗೆ ಯಾವುದೋ ರಿಪೋರ್ಟ್ ಸಿಗ್ತು ಅಂದ್ಯಲ್ಲಾ? ಯಾವುದು?'

'ಮೊನ್ನೆ ಡಿಸ್ನಿ ಲ್ಯಾಂಡ್ಗೆ ಹೋಗಿದ್ದಾಗ ಇಲ್ಲಿ ಒಬ್ಬ ಸೈನ್‌ಟಿಸ್ಟ್ ಪರಿಚಯ ಆಯ್ತು ಅಂತ ಹೇಳಿದ್ನಲ್ಲಾ... ಅವ್ರ ಆಫೀಸಿಗೆ ಹೋದಾಗ ಅವ್ರು ಬರ್ದ 'ಹೌ ಟು ಇಂಪ್ರೂವ್ ಲಿವಿಂಗ್ ಕನ್ಡಿಷನ್ಸ್ ಆಫ್ ರೆಡ್ ಇಂಡಿಯನ್ ಫಾರ್ಮರ್ಸ್' ರಿಪೋರ್ಟ್‌ನ ಕಾಪಿ ಒಂದು ಕೊಟ್ರು.'

'ಗ್ರೇಟ್! ನಮ್ಮ ಟೂರ್ ರಿಪೋರ್ಟ್ಗೆ ಯೂಸ್ ಆಗುತ್ತೆ. ರೆಡ್ ಇಂಡಿಯನ್‌ನಲ್ಲಿ ರೆಡ್ ತೆಗೆದ್ರೆ ಆ ರಿಪೋರ್ಟ್ ಇಂಡಿಯನ್ ಫಾರ್ಮರ್ಸ್‌ಗೆ ಅನ್ವಯಿಸುತ್ತೆ. ಮೂರು ಕಾಪಿ ಮಾಡ್ಸು, ಸೈನ್ ಮಾಡಕ್ಕೆ ಜಾಗ ಇರ್ಲಿ........ ಇನ್ನೊಂದು ಪೆಗ್ ಆರ್ಡರ್ ಮಾಡ್ತೀನಿ..... ಎಂಪೈರ್ ಸ್ಟೇಟ್ ಬಿಲ್ಡಿಂಗ್ನಿಂದ ಎಲ್ಲಾನು ಹೇಗೆ ಕಾಣುತ್ತೆ ಅಲ್ವಾ? ಜನ ಹುಳುಗಳ ಹಾಗೆ ಕಾಣಿಸ್ತಾರೆ.'

'ಡ್ರಿಂಕ್ಸ್ ತೊಗೊಂಡು ಇಲ್ಲಿ ಡಿನ್ನರ್ ಮಾಡ್ತಾ ಇದೀವಿ ಅಂದ್ರೆ ನನ್ಗೇ ನಂಬ್ಕೆ ಬರೋದಿಲ್ಲ.'

'ನಂಗೂ ಹಾಗೇ ಅನ್ನುಸ್ತಿದೆ.... ನಮ್ ಹೊಲ್ದಾಗೆಲ್ಲಾ ಡ್ರಿಪ್ ಇರಿಗೇಷನ್ ಮಾಡಿದ್ರೆ, ಮಂಡ್ಯದಲ್ಲಿ ಕಬ್ಬಿನ ಬೆಳೆ ಚೆನ್ನಾಗಿ ಬರುತ್ತೆ. ರೇಟ್ ಚೆನ್ನಾಗಿ ಸಿಗ್ಬೋದು ನಮ್ಮ ರೈತರ್ಗೆ.'

'ಅದನ್ನ ಹೋದ್ವಾರ ಇಸ್ರೇಲ್‌ನಲ್ಲಿ ನೋಡಿದ್ವಲ್ಲಾ... ಅದರ್ಜೊತೆ ಇಲ್ಲಿ ಮಾಡೋ ಹಂಗೆ ನಮ್ಮೂರ್ ಹೊಲ್ದಾಗೆ ಡ್ರೋನ್ಸ್ನ ಮೇಲೆ ಕಳ್ಸಿ ಹೊಲಕ್ಕೆಲ್ಲಾ ನೀರಾವರಿ, ಔಷ್ದಿ ಹೊಡಿಸ್ಬೋದು. ರೈತರ್ಗೆ ಸುಮ್ನೆ ನಡಿಯೋದು ತಪ್ಪುತ್ತೆ.'

'ನನ್ಗೂ ದುಃಖ ತಡೆಯಕ್ಕಾಗ್ತಿಲ್ಲ. ಏನ್ ಮಾಡೋದು. ವಾಪಸ್ಸು ಹೋಗಿ ನಮ್ ಕೈಲಾಗಿದ್ದ ಸೇವೆ ಇದೇ ರೀತಿ ಮಾಡ್ಕೊಂಡು ಹೋಗೋಣ. ಇನ್ನೇನು ಮಾಡಕ್ಕಾಗುತ್ತೆ?'

'ಅದು ನಿಜ. ಹೋಟಲ್ಗೆ ಹೋಗೋಣ. ನಾಳೆ ಫ್ಲೈಟ್‌ನಲ್ಲಿ ಊರ್ಗೆ ವಾಪಸ್ಸು ಹೋಗ್ಬೇಕಲ್ಲ.'

# ದೀಪಾವಳಿಗೆ ಏನು ತೊಡಿಸಲಿ ನನ್ನ ಹೆಂಡತಿಗೆ?

**- ಸಹನಾ ಪ್ರಸಾದ**

**ಎಲ್ಲರ ಮನೆಯ ಹೆಂಗಸರೂ ಹೀಗೆನಾ? ಇಲ್ಲಾ ಇವಳು ಮಾತ್ರ ನಮೂನೆಯಾ?**

‘‘ಅಬ್ಬ! ನೀನೆಷ್ಟು ಅದೃಷ್ಟವಂತ, ಆಹಾ, ಇದ್ದರೆ ನಿನ್ನಂತೆ ಭಾಗ್ಯವಿರಬೇಕು, ಬದುಕಿದರೆ ನಿನ್ನಂತೆ ಬದುಕಬೇಕು. ಅಬ್ಬಬ್ಬ, ಕೇಳಿ ಮನಸ್ಸು ಖುಶಿಯಾಯಿತು, ಪುಣ್ಯವೆಂದರೆ ಈ ಪರಿ, ಜನುಮವೆಂದರೆ ನಿನ್ನದು. ಎಲ್ಲಿ, ನಿನ್ನ ಪಾದದ ಜೆರಾಕ್ಸ್ ಪ್ರತಿ ಕೊಡು. ಅದನ್ನು ನೋಡುತ್ತಾ ಇದ್ದರೆ ನನಗೂ ಒಳ್ಳೆಯದಾಗಬಹುದು. ನಿನ್ನ ಹೆಂಡತಿಯ ಪಟ ಕೊಡು, ದೇವರ ಮನೆಯಲ್ಲಿಟ್ಟು ಬಿಡುವೆ.., ಮುಗಿಯದ ಪ್ರಲಾಪ ಕೇಳಿ ನಮ್ಮ ಸಂಜೂ ಉರಿದೆದ್ದ.’’

‘ಥೂ ಸಾಕಯ್ಯ ನಿನ್ನ ಡ್ರಾಮಾ. ಏನೋ ಗೆಳೆಯಾ ಎಂದು ನಿನ್ನ ಬಳಿ ಬಂದರೆ ಅತಿ ಆಡುತ್ತಿದ್ದೀಯ’ ಗೆಳೆಯನ ಮಾತು ಕೇಳಿ ರಜತ ನಕ್ಕ.

‘ಅಲ್ಲಯ್ಯ, ನಿನ್ನ ಸಮಸ್ಯೆಯೂ ಒಂದು ಸಮಸ್ಯೆಯ? ಅದು ಭಾಗ್ಯ. ಆರಾಮವಾಗಿ ಇರುವುದನ್ನುಬಿಟ್ಟು ಒದ್ದಾಡುತ್ತಿರುವೆಯಲ್ಲ. ಈಗ ನನ್ನನ್ನು ನೋಡು. ಇನ್ನು ತಿಂಗಳ ಸಾಮಾನು ಪೂರ್ತಿ ತಂದಿಲ್ಲ, ಮಗನಿಗೆ ಶರ್ಟು ಪ್ಯಾಂಟು ಕೊಡಿಸಬೇಕು. ಮಗಳಿಗೆ ಅದೇನೋ ಹೊಸ ತರಹದ ಡ್ರೆಸ್ಸಂತೆ, ಹೆಸರು ಗೊತ್ತಿಲ್ಲ. ಕೊಡಿಸಲು ಹಣ ವ್ಯವಸ್ಥೆ ಮಾಡಬೇಕು. ಇನ್ನು ನನ್ನ ಶ್ರೀಮತಿಯೋ, ಅವಳ ಡಿಸೈನರ್ ರವಿಕೆಗಳೋ. ಹೋದ ತಿಂಗಳು ಅವಳ ಗೆಳತಿ ಕೊಂಡಳೆಂದು ಅದ್ಯಾವುದೋ ಹೊಸ ನಮೂನೆ ಸೀರೆ ಕೊಂಡಿದ್ದೆ ಇನ್ನು ಪೂರ್ತಿ ಹಣ ಕೊಟ್ಟಿಲ್ಲ. ಈಗ ಹೇಳು ನನ್ನ ಸಮಸ್ಯೆಯ ಮುಂದೆ ನಿನ್ನದೂ ಒಂದು ಸಮಸ್ಯೆಯ? ನಿನಗೆ ಹಣ ಜಾಸ್ತಿ ಇದ್ದರೆ ನನಗೆ ಕೊಡು, ನನ್ನ ಸಮಸ್ಯೆಗಳಾದರೂ ತೀರಲಿ. ನನ್ನ ಹೆಂಡತಿಯನ್ನು ನಿನ್ನ ದೇವರು ಕೊಡಲು ಮರೆತಿರುವ ತಂಗಿಯೆಂದುಕೊ...’ ಮತ್ತೆ ಡ್ರಾಮ ಶುರು ಮಾಡಿದ ಗೆಳೆಯನನ್ನು ಕಂಡು ಸಂಜು ಬೇಸರದಿಂದ ಎದ್ದು ಹೋದ.

ಇಷ್ಟಾದರೂ ನಮ್ಮ ಸಂಜುವಿನ ಪ್ರಾಬ್ಲಮ್ ಏನು?

ಮಧ್ಯಮ ವರ್ಗದ ಪರಿವಾರದಲ್ಲಿ ಬೆಳೆದ ಅವನಿಗೆ, ಮನೆ, ಮಕ್ಕಳು, ಸಂಸಾರವೆಂದರೆ ಇದ್ದ ಕಲ್ಪನೆಯೇ ಬೇರೆ. ಆಡಳಿತವೆಲ್ಲಾ ತಂದೆಯದು. ದುಡ್ಡು ಕಾಸಿನ ಮಾತೆಲ್ಲಾ ಅವರದು. ಅವರು ಕೊಟ್ಟ ಹಣದಲ್ಲಿ ಮನೆ ನಡೆಸುತ್ತ, ಹಬ್ಬಗಳಲ್ಲಿ ಅವರು ಕೊಡಿಸಿದರೆ ಸೀರೆ ಉಟ್ಟು ಸಂಭ್ರಮಿಸುವ ಕೆಲಸ ಅಮ್ಮನದು. ನನ್ನ ಅತ್ತಿಗೆ ಒಡವೆ ಮಾಡಿಸಿಕೊಂಡಳು, ನೆರೆಮನೆಯ ಪದ್ದಮ್ಮ ಹೊಸ ಜಾಕೀಟ್ ಕೊಂಡರು. ಆಚೆ ಮನೆಯ ಸೀತಮ್ಮನ ಮಗನ

ಚೌಲಕ್ಕೆ ಭಾರಿ ರೇಶಿಮೆ ಸೀರೆ ಉಡುಗೊರೆ ಬಂತು, ನನ್ನ ತಂಗಿಗೆ ಅವಳ ಗಂಡ ಕಾರಣವಿಲ್ಲದೆ ಚಿಫಾನ್ ಸೀರೆ ಉಡುಗೊರೆ ನೀಡಿದ. ಹೀಗೆ ಹಲುಬುತ್ತಾ, ಕೊರಗುತ್ತಾ ಜೀವನ ಸಾಗಿಸಿದ ಅಮ್ಮನನ್ನು ನೋಡಿ ಅಭ್ಯಾಸವಿದ್ದ ಅವನಿಗೆ, ಮದುವೆಯಾದಾಗ ಇದ್ದದ್ದು ಒಂದೇ ಧ್ಯೇಯ. ಹೆಂಡತಿಗೆ ಅವಳು ಕೇಳುವುದಕ್ಕಿಂತ ಮುಂಚೆ ಸೀರೆ, ಆದಾಗ ಒಡವೆ ಕೊಡಿಸಬೇಕು. ಅಲ್ಲಲ್ಲಿ ತಿರುಗಲು, ತಿರುಗಾಟ ಮುಗಿಸಿ ತಿಂಡಿ, ಜ್ಯೂಸ್ ಇತ್ಯಾದಿ ಕೊಡಿಸಿ ಅವಳನ್ನು ಖುಷಿಯಾಗಿಡಬೇಕು.

ಮದುವೆಯಾಗಿ ಬಂದ ಮೇಲೆ ಹೆಂಡತಿ ಏನನ್ನೂ ಕೇಳದೆ ಇದ್ದದ್ದು ಅವನಿಗೆ ಅಚ್ಚರಿ ಆಯಿತು. ಅವಳೊಂದಿಗೆ ಬಂದ ಅವಳ ಬಟ್ಟೆಗಳ ರಾಶಿ ಕಂಡು ಬೆಚ್ಚಿಬಿದ್ದಿದ್ದ. ಬೀರು ತುಂಬಾ ತುರುಕಿದ್ದ ಹೊರೆ ಬಟ್ಟೆಗಳು. ಕೆಲಸಕ್ಕೆ ಹೋಗುತ್ತಿರುವ ಅವಳಿಗೆ ದುಡ್ಡಿಗೆ ಕೊರತೆಯಿಲ್ಲ. ಗಂಡನೇ ಕೊಡಿಸಬೇಕೆಂಬ ಗತಿಯೂ ಇಲ್ಲ. ಹೀಗೆ ಸಾಗುತ್ತಿದ್ದ ಬದುಕು, ಪ್ರತಿ ವರುಷ ಎಲ್ಲಾ ಕಡೆಯೂ ದೀಪಾವಳಿ ಸೇಲ್ ಬಂದಾಗ ಅವಳಿಗೆ ಏನಾದರೂ ಕೊಡಿಸಬೇಕೆಂಬ ಆಸೆಯಿಂದ ಕೊಂಚ ಏರುಪೇರಾಗುತಿತ್ತು. ಕೇಳುವ ಮುಂಚೆಯೇ ಅವಳು ಕೊಂಡು ತರುತ್ತಿದ್ದಳು. ಮಗುವಿಗೂ ಸಹ ಅವಳೇ ಬೇಕಾದ್ದನ್ನೆಲ್ಲಾ ತರುತ್ತಿದ್ದಳು. ಎಲ್ಲರ ಮನೆಯ ಹೆಂಗಸರೂ ಹೀಗೆನಾ? ಇಲ್ಲಾ ಇವಳು ಮಾತ್ರ ನಮೂನೆಯಾ? ಅವನಿಗೆ ಗೊತ್ತಾಗುತ್ತಲೇ ಇರಲಿಲ್ಲ.

''ಹೈ ಚಿನ್ನ , ಈ ಸಲ ಆನ್ ಲೈನ್ ಅಲ್ಲಿ ಭರ್ಜರಿ ಸೇಲ್ ಇದೆ. ನಿನಗೆ ಹೊಸ ಸೀರೆ, ಮೊಬೈಲ, ಪರ್ಸ್ ಏನಾದರೂ ಕೊಳ್ಳೋಣವೇ? ನನ್ನ ಕ್ರೆಡಿಟ್ ಕಾರ್ಡ್ ಬಳಸಿದರೆ ಡಿಸ್ಕೌಂಟ್ ಸಿಗುತ್ತದೆ.'' ಆಸೆಯಿಂದ ಕೇಳಿದವನಿಗೆ ನಿರಾಸೆ ಕಾದಿತ್ತು. ''ನನ್ನ ಕಾರ್ಡ್ ಬಳಸಿದರೂ ಸಿಗುತ್ತದೆ. ನಾನಾಗ್ಲೆ ಹೊಸ ಸೀರೆ, ಮನೆಗೆ ಮಿಕ್ಸರ್, ರೂಮಿಗೆ ಬೆಡ್‌ಶೀಟ್ ಆರ್ಡರ್ ಮಾಡಿರುವೆ. ಪಾಪುಗೆ ಹೊಸ ಬ್ಯಾಗ್, ನಿಮಗೆ ಹೊಸ ಮೊಬೈಲ್ ಕೂಡ ಹೇಳಿರುವೆ.'' ಮತ್ತೊಮ್ಮೆ ಅವಳಿಗೆ ಸರ್ಪ್ರೈಸ್ ಕೊಡಲು ಸೀರೆ ಕೊಂಡು ತಂದಿದ್ದ. ''ನಾನೀಗ ಸೀರೆ ಉಡುವುದನ್ನು ಬಿಟ್ಟಿದೀನಿ. ಬರೀ ಪ್ಯಾಂಟ, ಸಲ್ವಾರ್ ಕಮೀಜ್ ಮಾತ್ರವೇ ತೊಡುವುದು'' ಅವಳ ಮಾತು ಕೇಳಿ ಪೆಚ್ಚಾದ.

ಹೋಗಲಿ, ಅವಳಿಗೆ ಚಿನ್ನದ ಒಡವೆ ಮೇಲೆ ಆಸೆಯೂ ಇಲ್ಲ. ಬಾಕ್ಸ್‌ನಲ್ಲಿ ತುಂಬಿದ್ದ ಫ್ಯಾಷನ್ ಒಡವೆಗಳು, ಬೀದಿಯಲ್ಲಿ ಮಾರುವ ಕಿವಿಯೋಲೆಗಳು, ಬಳೆಗಳು ಅವಳಿಗೆ ಇಷ್ಟ. ಪಾನಿ ಪುರಿ, ಮಸಾಲಪುರಿ ಕೊಡಿಸುವುದರಲ್ಲಿ ಅವನು ತೃಪ್ತಿಪಡಬೇಕಿತ್ತು.

ಈ ರೀತಿ ನಿರಾಸೆಗಳನ್ನು ಬಿಟ್ಟರೆ ಅವನು ಪರಮ ಸುಖಿ ಎಂದೇ ಹೇಳಬೇಕು. ಮನೆಯಲ್ಲಿ ಅಡುಗೆಯವಳು, ಪಾಪು ನೋಡಿಕೊಳ್ಳುವುದಕ್ಕೆ ಆಯಾ, ಕಾರ್ ಡ್ರೈವರ, ಮನೆಕೆಲಸಕ್ಕೆ ಆಳು, ಸಾಮಾನು ತರಲೊಬ್ಬ, ಹೀಗೆ ಆರಾಮವಾದ ಬದುಕು. ಹೆಂಡತಿಗೆ ಏನಾದರೂ ಕೊಡಿಸಬೇಕೆಂಬ ನೆರವೇರದ ಆಸೆ ಬಿಟ್ಟರೆ ಅವನು ಪುಣ್ಯವಂತ.

ಈ ಸಲ ದೀಪಾವಳಿಗೆ ಮನೆಗೆ ಸಾಲು ದೀಪ, ಮಗುವಿಗೆ ಪಟಾಕಿ ತರಲೇಬೇಕೆಂದು ನಿರ್ಧಾರ ಮಾಡಿದ. ''ಪುಟ್ಟಿ, ಇವತ್ತು ನಿಮ್ಮಮ್ಮ ಬರುವುದು ತಡ, ನಾನು, ನೀನು

ಪಟಾಕಿಕೊಂಡು ಹೋಟಲಿನಲ್ಲಿ ಊಟ ಮಾಡಿ ಬರೋಣ, ಆಯಿತಾ?'' ಮಗುವಿನ ಉತ್ತರ ಕೇಳಿ ಅವನು ನಿರುತ್ತರನಾದ ''ಪಪ್ಪ, ಈ ಸಲದಿಂದ ಪಟಾಕಿ ಹೊಡೆಯಬಾರದೆಂದು ನಮ್ಮ ಕ್ಲಾಸಿನ ಮಕ್ಕಳೆಲ್ಲಾ ಡಿಸೈಡ್ ಮಾಡಿದೀವಿ, ಅದರಿಂದ ಪರಿಸರ ಮಾಲಿನ್ಯ ತಡೆಗಟ್ಟಬಹುದು, ಪ್ರಾಣಿಗಳಿಗೂ, ವಯಸ್ಸಾದವರಿಗೂ ಆರಾಮ, ಸಾಲು ದೀಪ ಬೇಡ. ಈಗ ನಮ್ಮ ರಾಜ್ಯದಲ್ಲಿ ವಿದ್ಯುಚ್ಛಕ್ತಿಯ ಕೊರತೆ, ಕತ್ತಲೆ ಭಾಗ್ಯ.''

ಹೋಗಲಿ, ಮನೆಕೆಲಸದವರಿಗೆ ದೀಪಾವಳಿ ಬೋನಸ್ ಕೊಡೋಣ ಎಂದು ಅವರಿಗೆಲ್ಲಾ ಉಡುಗೊರೆ, ಸಿಹಿ ತಿಂಡಿ ಪ್ಯಾಕೆಟ, ಕವರ್‌ನಲ್ಲಿ ದುಡ್ಡು ಹಾಕಿ ಕೊಟ್ಟ. ರುಚಿ ರುಚಿಯಾಗಿ ಅಡುಗೆ ಮಾಡುವ ಅಡುಗೆಯ ಶಾಂತಳಿಗೆ ಸೀರೆ ತಂದ. ಅವತ್ತು ರಾತ್ರಿಯೇ ಹೆಂಡತಿಯ ಮೋರೆ ದಪ್ಪಗಾಗಿತ್ತು. ''ಈ ದೀಪಾವಳಿಗೆ ನನಗೇನು ಉಡುಗೊರೆ? ''ಒಳಗೊಳಗೆ ಖುಶಿಯಾದರೂ ತಡೆದುಕೊಂಡ'' ಅಲ್ಲವೇ, ನನಗಿಂತ ನಿನಗೇ ಸಂಬಳ ಜಾಸ್ತಿ, ನೀನೇ ನನಗೆ ಗಿಫ್ಟ್ ಕೊಡಿಸು'' ಮುಖ ಇನ್ನೂ ದಪ್ಪಗಾಗಿ, ಕಣ್ಣಲ್ಲಿ ಕೋಪ ತುಂಬಿತು. ''ಯಾವಾಗಲೂ ಗಂಡ ಕೊಡಿಸುವುದು ಹೆಣ್ಣು ಮಕ್ಕಳಿಗೆ ಇಷ್ಟ. ನಾವೆಷ್ಟೇ ಸಂಪಾದಿಸಿದರೂ ನೀವು ಕೊಡಿಸುವ ಸಣ್ಣ ಉಡುಗೊರೆಯೇ ನಮಗೆ ಅತ್ಯಮೂಲ್ಯವಾದುದ್ದು, ತಿಳಿದುಕೊಳ್ಳಿ. ಇಷ್ಟು ವರುಷವಾದರೂ ನನ್ನನ್ನು ಅರ್ಥ ಮಾಡಿಕೊಂಡಿಲ್ಲ'' ಧುಮುಗುಟ್ಟುತ್ತಾ ಹೊರನಡೆದ ಅವಳನ್ನು ರಮಿಸಲು ಸಂತಸದಿಂದ ಅವಳನ್ನು ಹಿಂಬಾಲಿಸಿದ.

---

## ಕದ್ದು ಕೇಳಿದ್ದು

ನನ್ನ ರಾಜಾ, ನಿಮ್ಮ ಹೃದಯ ಸಿಂಹಾಸನದ ಮಹಾರಾಣಿ ನಾನು
ನಿಜ
ರಾಜಾ ನನ್ನ ಕಣ್ಣುಗಳು ನಕ್ಷತ್ರದಂತಿದೆ ಅಲ್ಲವೇ
ಹೌದು
ಮತ್ತೆ ನನ್ನ ಮುಖ, ದೊರೆಯೇ, ಹುಣ್ಣಿಮೆ ಚಂದ್ರನಂತಿದೆ ಅಲ್ಲವೇ
ದಿಟ
ಮತ್ತೆ ನನ್ನ ಬಾಹುಗಳು ಕೋಮಲವಾದ ಲತೆಗಳು ತಾನೇ
ಖಂಡಿತಾ
ಆಹಾ ಪ್ರಿಯತಮಾ, ನೀವೆಷ್ಟು ಕಾವ್ಯಮಯವಾಗಿ ಮಾತಾಡುತ್ತೀರಲ್ಲ

– *(ಸಂಗ್ರಹ) ಜಯಣ್ಣ*

# Advertisement

# Advertisement

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

- ದಂನಅ

- ಮಂಗನಾಗಬಾರದು, ಆಂಜನೇಯನಾಗಿ ಬೆಳೆಯಬೇಕು.
- ನನ್ನ ತಂದೆ ನನಗೆ ಎಲ್ಲವನ್ನೂ ಹೇಳಿಕೊಟ್ಟರು. ಹೇಗೆ? ನನಗೆ ಕುತೂಹಲ ಮತ್ತು ಚಿತ್ತೈಕಾಗ್ರತೆ ಹೇಳಿಕೊಟ್ಟರು. ಅವುಗಳಿಂದ ನಾನು ಎಲ್ಲವನ್ನೂ ಕಲಿತೆ.
- ಎಲ್ಲ ಪುರುಷರೂ ಧೈರ್ಯಸ್ಥರೇ. ಆದರೆ ಒಬ್ಬ ಧೈರ್ಯಸ್ಥ ಮಹಿಳೆಯನ್ನು ತಮ್ಮ ಬದುಕಿನಲ್ಲಿ ಸೇರಿಸಿಕೊಳ್ಳಲು ಧೈರ್ಯ ಮಾಡುವ ಪುರುಷರ ಸಂಖ್ಯೆ ಬಹು ಕಡಿಮೆ.
- ಓ! ಮೆನ್ ಹ್ಯಾವ್ ಬಿಕಂ ಟೂಲ್ಸ್ ಆಫ್ ದೇರ್ ಟೂಲ್ಸ್.
- ಈ ಭೂಮಿ ಉಳಿದುಕೊಳ್ಳುತ್ತದೆ. ಆದರೆ ನಾವು?
- ಆರೋಗ್ಯ ವಿಮೆ ಎಂದ ಮಾತ್ರಕ್ಕೆ ಆರೋಗ್ಯ ಇದೆ ಎಂದರ್ಥವಲ್ಲ.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ಧಾರವಾಡದಲ್ಲಿ ಒಂದು ಕಲ್ಲು ಎಸೆದರೆ ಅದು ಒಬ್ಬ ಕವಿಗೆ ಬಡಿಯುತ್ತಿತ್ತಂತೆ. ಈಗ ಬೆಂಗಳೂರಿನಲ್ಲಿ ಒಂದು ಕಲ್ಲು ಎಸೆದರೆ ಅದು ಒಬ್ಬ ಸಾಫ್ಟ್‌ವೇರ್ ಇಂಜನಿಯರ್ ಮೇಲೆ ಬೀಳುತ್ತದೆ.
- ನೀವು ಪ್ರೀತಿಸಿದ್ದರೆ ಹಳೇ ಹೆಂಡತಿ ಕೊನೆಯವರೆಗೂ ಹೊಸಬಳೆ.
- ಹಿ ಗೇವ್ ಅ ಪಿಂಟ್ ಬೈ ಪಿಂಟ್ ರಿಪ್ಲೈ ಇನ್ ದಿ ಬಾರ್.
- ನಾವೆಲ್ಲರೂ ಗೌತಮ ಬುದ್ಧರೇ. ಆದರೆ ಅದು ನಮಗೆ ಅರಿವಾಗಿಲ್ಲ. ಪರವಾಗಿಲ್ಲ ಬಿಡಿ. ಏಕೆಂದರೆ ಆ ವಿಷಯ ಗೌತಮನಿಗೂ ಗೊತ್ತಿರಲಿಲ್ಲ. ಅವನಿಗೂ ಅದು ಅರಿವಾದ್ದು ಕೊನೆಯಲ್ಲೇ.
- ಮತ್ತೆ ಜೀವನ ತರ್ಕಕ್ಕೆ ಮೀರಿದ್ದು ಅಲ್ವಾ?
- ಬೇರೆಯವರಿಗೆ ಸಲಹೆ ನೀಡಲು ಸ್ವಲ್ಪ ಮಟ್ಟಿಗೆ ಬುದ್ಧಿವಂತಿಕೆ ಬೇಕು. ಆದರೆ ನಮಗೆ ನಾವೇ ಸಲಹೆ ಕೊಟ್ಟುಕೊಳ್ಳಲು ಪ್ರಾಮಾಣಿಕತೆ, ಧೈರ್ಯ, ವಿವೇಚನೆ ಎಲ್ಲವೂ ಬೇಕಾಗುತ್ತದೆ.
- ಎ ಟೀಚರ್ ಈಸ್ ಒನ್ ಹು ಮೇಕ್ಸ್ ಹಿಮ್‌ಸೆಲ್ಫ್ ಪ್ರೊಗ್ರೆಸಿವ್ಲಿ ಅನ್‌ನೆಸೆಸರಿ.
- ಈರುಳ್ಳಿ ಕಣ್ಣಿನಲ್ಲಿ ನೀರು ತರಿಸಬಹುದು. ಆದರೆ ಅಳುವಂತೆ ಮಾಡುವುದು ಮನುಷ್ಯರೇ.
- ಫಲಿತಾಂಶಗಳನ್ನು ನಾವು ಆಯ್ಕೆ ಮಾಡುವಂತಾದರೆ ವೈಫಲ್ಯ ಎನ್ನುವುದು ಇರುವುದೇ ಇಲ್ಲ.
- ಹಣದ ಬಗ್ಗೆ ದೇವರ ಅಭಿಪ್ರಾಯ ತಿಳಿಯಬೇಕೆ? ಹಾಗಿದ್ದರೆ ಅದನ್ನು ಅವನಿಂದ ಪಡೆದವರತ್ತ ಗಮನ ಹರಿಸಿ.

# ಉಪ್ಪಿ ಉಪಾಖ್ಯಾನ!

**- ತುರುವೇಕೆರೆ ಪ್ರಸಾದ್**

**ಉ**ಪ್ಪಿ-2 ಸಿನಿಮಾ ಬಂದ್ಮೇಲೆ ಹೊಸ ಟ್ರೆಂಡ್ ಶುರುವಾಗಿದೆ. ಕಾಲೇಜಲ್ಲಿ ಪಾಠ, ಹುಡುಗಿ ಕಾಟ, ಹೆಂಡ್ತಿ ವಟ ವಟ ಯಾವ್ದೂ ಅರ್ಥ ಆಗ್ತಿಲ್ಲ ಅಂತ ಹಲುಬೋ ಹಾಗೇ ಇಲ್ಲ. ಜೀವನದಲ್ಲಿ ಒಂದಕ್ಕೊಂದು ಐ ಮೀನ್ ಪಾಸ್ಟ್‌ಗೂ ಫ್ಯೂಚರ್‌ಗೂ ಲಿಂಕ್ ಮಾಡಿ ಯೋಚ್ನೆ ಮಾಡುದ್ರೇ ಏನಾದ್ರೂ ಅರ್ಥ ಆಗ್ಬೇಕು ಅನ್ನೋದು ನಿಜ.. ಹಿಂದಿನ ಚರಿತ್ರೆ ಬೇಕಾಗೇ ಇಲ್ಲ, ಮುಂದಿನ ಭವಿಷ್ಯ ಇಲ್ವೇ ಇಲ್ಲ ಅನ್ನೋರಿಗೆ ಅರ್ಥ ಮಾಡ್ಕೊಳೋ ಹಂಗು ಯಾಕಿರ್ಬೇಕು? ಪ್ರೆಸೆಂಟ್ನ ಸಿಂಪ್ಲಿ ಎಂಜಾಯ್ ಮಾಡ್ಬೇಕು, ಅರ್ಥ ಮಾಡ್ಕೊಳೋಕ್ ಹೋಗ್ಬಾರ್ದು.. ಆದ್ರೆ ಕೈ ತುಂಬಾ ಅರ್ಥ (ದುಡ್ಡು) ಇರೋ ಹಾಗೆ ನೋಡ್ಕೊಬೇಕು.. ಈ ದೃಷ್ಟಿಕೋನದಿಂದ ನೋಡಕ್ ಹೋದ್ರೆ ಮನೆ ಮನೆ ರಿಲೇಶನ್‌ಗಳೇ ಚೇಂಜ್ ಆಗೋಗಿವೆ. ಒಂದೆರಡು ಸ್ಯಾಂಪಲ್ ನೋಡಿ.

> **ಹಿಂದಿನ ಚರಿತ್ರೆ ಬೇಕಾಗೇ ಇಲ್ಲ, ಮುಂದಿನ ಭವಿಷ್ಯ ಇಲ್ವೇ ಇಲ್ಲ ಅನ್ನೋರಿಗೆ ಅರ್ಥ ಮಾಡ್ಕೊಳೋ ಹಂಗು ಯಾಕಿರ್ಬೇಕು?**

**ಮಗ:** ನೋಡಿ ಡ್ಯಾಡ್, ನೋ ಪಾಸ್ಟ್ ಪೋಸ್ಟ್ ಮಾರ್ಟಂ, ಹಿಂದೆ ಎಷ್ಟ್ ಮಾರ್ಕ್ಸ್ ಬಂದಿತ್ತು, ಮುಂದೆ ಎಷ್ಟ್ ಬರುತ್ತೆ ಅನ್ನೋದು ಮುಖ್ಯ ಅಲ್ಲ.. ಈಗ ಬಂದಿಲ್ಲ, ಅಷ್ಟೇ.. ಅದನ್ನ ಅಕ್ಸೆಪ್ಟ್ ಮಾಡಿ.. ನಾನು ಯಾವತ್ತಾದ್ರೂ ನಿಮ್ ಪಾಸ್ಟ್ ಕೆದಕಿದೀನಾ? ನಿಮ್ ಕಾರ್ ಆಕ್ಸಿಡೆಂಟ್ ಮಾಡಿದ್ದು, ನಿಮ್ ಎಟಿಎಂನಿಂದ ಹಣ ಎಗರಿಸಿದ್ದು ಎಲ್ಲಾ ಭೂತಕಾಲ.. ಆ ಭೂತನೆಲ್ಲಾ ತಲೆ ಹೊಕ್ಕಿಸ್ಕೊಬಾರ್ದು ಡ್ಯಾಡ್.. ಮಗ ಏನಾಗ್ತಾನೋ ಅಂತ ಮುಂದಿಂದ್ ಯೋಚ್ನೆಮಾಡಿ ತಲೆ ಕೆಡಿಸ್ಕೊಬಾರ್ದು.. ನೀವು ಇದ್ದಿದ್ ಸ್ಥಿತಿ ನೋಡಿ ನೀವೇನಾಗ್ತೀರೋ ಅನ್ನೋ ಟೆನ್ಶನ್‌ನಲ್ಲಿ ತಾನೇ ತಾತ ಗೊಟಕ್ ಅಂದಿದ್ದು.. ಸೋ ನೀವು ಹಾಗ್ ಆಗ್ಬಾರ್ದು ಡ್ಯಾಡ್! ಫರ್‌ಗೆಸ್ಟ್ ಪಾಸ್ಟ್, ಲಿವ್ ಇನ್ ಪ್ರೆಸೆಂಟ್, ಫ್ಯೂಚರ್‌ನಲ್ಲಿ ಏನಾಗುತ್ತೋ ಅದೇ ಆಗೋದು! ಈಗ ಒಂದ್ ಕಾರು ಕೊಡ್ಸಿ..

**ಮಗಳು:** ನೋಡು ಮಮ್ಮಿ, ಲೈಫ್ ತುಂಬಾ ಚೇಂಜ್ ಆಗಿದೆ. ಇದು ಉಪ್ಪಿ ಯುಗ! ಇನ್ನೂ ಎಷ್ಟು ದಿವಸ ಅಂತ ಹೀಗೆ ಮನೇಲೇ ಕೂತಿರೋದು? ಏನೋ ಒಂದ್ ಲವ್ ಅಫೇರ್ ಆಯ್ತು.. ಅದ್ನೆಲ್ಲಾ ನಾನು ನಡ್ದೇ ಇಲ್ಲ ಅಂದ್ಕೊಂಡ್ ಮರ್ತ್ ಬಿಟ್ಟಿದೀನಿ.. ಹಾಗಂತ ನೀವು ಹೇಳಿದ್ ಹುಡುಗನ್ನ ಮದ್ವೆ ಮಾಡ್ಕೊಂಡ್ರೆ ಹೊಸ ಫ್ಯೂಚರ್ ಸಿಗುತ್ತೆ ಅಂತ ನಂಗೇನೂ ಅನಿಸ್ತಿಲ್ಲ.. ನೀನು ನಿನ್ ಲವ್ವರ್ ಬಿಟ್ಟು ಅಪ್ಪನ್ ಮದ್ವೆ ಆಗಿದ್ದಕ್ಕೆ ನಿನ್ ಫ್ಯೂಚರ್ ಏನು ಹೊಳೆದು ಹೋಗ್ತಿದ್ಯಾ? ನಾನ್ ಹೇಗೋ ಖುಷಿಯಾಗ್ ಇರ್ತೀನಿ.. ನನ್ ಪಾಡಿಗ್ ನನ್ ಬಿಟ್ ಬಿಡು.. ಈಗ ಪ್ರಸೆಂಟ್ ಬಗ್ಗೆ ಯೋಚ್ನೆ ಮಾಡೋ ನನ್ನಂಥ ಮೈಂಡ್‌ಸೆಟ್‌ಪ್ ಇರೋ ಹುಡುಗ್ರು ತುಂಬಾ ಜನ ಇದಾರೆ.. ಈ ಹ್ಯಾಂಗ್ ಓವರ್ ಇಳಿಯೋಕ್ ಮುಂಚೆ ಯಾರಾದ್ರೊಬ್ಬನ್ನ ಟ್ರಾಪ್ ಮಾಡ್ಬಿಡ್ತೀನಿ..

**ಟಿವಿ ಜ್ಯೋತಿಷಿ:** ಈ ನಾನು ಅನ್ನೋದ್ ಬಿಡೋ ಮಗನೇ! ಅಹಂಬ್ರಹ್ಮಾಸ್ಮಿ ಅಂತಿದ್ರು.. ನಾನೇ ನೀನು, ನೀನೇ ನಾನು ಅಂತಿದ್ರು.. ನಾನು ನೀನು ಒಂದೇ ಅಂತಿದ್ರು.. ಆಮೇಲೆ ನಿಧಾನಕ್ಕೆ ನಾನು ಎಂಬುದ ಬಿಟ್ಟು ಜ್ಞಾನಿಗಳೊಡಗೂಡಿ ಏನೆಲ್ಲಕೆ ದೈವ ಪ್ರೇರಣೆ ಅಂದ್ರು ದಾಸರು. ನಾನೇ ಎಂಬ ಭಾವ ನಾಶವಾಯಿತು, ನೀನೇ ಎಂಬ ನೀತಿ ನಿಜವಾಯಿತು ಅಂದ್ರು.. ಆಮೇಲೆ ನೀನು ನೀನೇ ಇಲ್ಲಿ ನಾನು ನಾನೇ ಅಂತ ಎರಡೂ ಅಸ್ತಿತ್ವ ಒಪ್ಕೊಂಡ್ರು.. ನಾನೇ ಮುಖ್ಯ, ಯಾಕಂದ್ರೆ ನಾನಿಲ್ಲದಾಗ ಈ ಸೃಷ್ಟಿ, ಬ್ರಹ್ಮಾಂಡ, ನೀನು, ಅವಳು ಎಲ್ಲಾ ಇದೆ ಅಂತ ನೀನು ನಂಗೆ ಪ್ರೂವ್ ಮಾಡಿ ತೋರ್ಸಕ್ಕಾಗಲ್ಲ, ಸೋ ನಾನೇ ಗ್ರೇಟ್ ಅಂದ್ರು. ನಾನು ಇಲ್ಲದಾಗ ಏನಿದ್ರೇನು? ಬಿಟ್ರೇನು? ಇರುವಾಗ ನೆಟ್ಟಗೆ ಇರ್ಬೇಕಂದ್ರೆ, ನೀನೇ ಅಂತ ಶರಣಾಗೋದೇ ಸರಿ ಅನ್ನೋ ಜ್ಞಾನೋದಯವಾಯ್ತು. ಎಲ್ಲಾ ನೀನೇ, ಎಲ್ಲಾ ನಿನ್ನದೇ, ಎಲ್ಲವೂ ನಿನ್ನಿಂದಲೇ – ಅಂತ ಮದುವೆಯಾದರೋರು ಹೆಂಡತಿಗೆ ಶರಣಾಗ್ಬೇಕು, ಹೆಂಡತಿ ಸತ್ತವರು, ಬಿಟ್ಟವರು ಕೊನೆಗೆ ಅನ್ಯಥಾ ಶರಣಂ ನಾಸ್ತಿ ಅಂತ ದೇವರಿಗೆ ಶರಣಾಗೋದು.. ಇದೇ ಉಪ್ಪಾಪೋಖ್ಯಾನ!

**ಫ್ರೆಂಡ್:** ನೋಡೋಮಾ, ಉಪ್ಪಿ2 ಸಿನಿಮಾ ನೋಡಿದ್ಮೇಲೆ ನಂಗೆ ಸಕತ್ ಜ್ಞಾನೋದಯ ಆಗಿದೆ. ನೀನು ಆ ಹಳೇ ಜುಜುಬಿ ಸಾಲನ ಪದೇ ಪದೇ ಕೇಳಕ್ ಹೋಗ್ಬೇಡ.. ಆಗೋಗಿದ್ರ ಬಗ್ಗೆ ಯೋಚ್ನೆ ಮಾಡ್ಬಾರ್ದು. ಹಾಗೇ ನನ್ ಸಾಲ, ಅದಕ್ಕೆ ಚಕ್ರ ಬಡ್ಡಿ ಎಲ್ಲಾ ವಾಪಸ್ ಬರುತ್ತೆ, ಅದ್ರಲ್ಲಿ ಮನೆ ಕಟ್ತೀನಿ, ಕಾರ್ ತಗೊತೀನಿ, ಹಾಗ್ ಮಾಡ್ತೀನಿ, ಹೀಗ್ ಮಾಡ್ತೀನಿ ಅಂತ ಕನಸು ಕಟ್ಟೋದು, ಫ್ಯೂಚರ್ ಪ್ಲಾನ್ ಮಾಡೋದು ತಪ್ಪು.. ಈಗ ನಾನು ಇದೀನಿ ಅನ್ನೋದೇ ಸತ್ಯ.. ನಾನಿಲ್ಲ ಅಂದ್ರೆ ನಿನ್ ಮೇಲೆ ಸಾಲಕ್ ಕಿರುಕುಳ ಕೊಟ್ಟ ಅಂತ ಬರದಿಟ್ಟೇ ಸತ್ತಿರ್ತೀನಿ.. ಆಗ ನಿಂಗೆ ಪ್ರಸೆಂಟ್ ಇರಲ್ಲ.. ಆಂ! ಯಾಕ್ ಬೆವರ್ತಿದೀಯ? ಬಾ, ಒಂದ್ ಕ್ವಾರ್ಟರ್ ವಿಸ್ಕಿ ಹೊಡಿ.. ಪಾಸ್ಟ್, ಪ್ರೆಸೆಂಟೂ ಎಲ್ಲಾ ಮರ್ತ್ ಹೋಗುತ್ತೆ..

**ಹುಡುಗಿ:** (ತನ್ನ ಲವರ್‌ಗೆ) ನೋಡು, ನಿನ್ನೆ ನೀನು ಯಾಕ್ ಬಂದಿಲ್ಲ, ಮೊನ್ನೆ ಎಲ್ ಹೋಗಿದ್ದೆ, ನಂಗ್ ಯಾಕ್ ಫೋನ್ ಮಾಡ್ಲಿಲ್ಲ ಅಂತ ಒಂದೂ ಕೇಳಲ್ಲ.. ನಂಗೊತ್ತು ಪಾಸ್ಟ್ ಬಗ್ಗೆ ಯೋಚ್ನೆ ಮಾಡಿ ಏನೂ ಪ್ರಯೋಜ್ನ ಇಲ್ಲ ಅಂತ. ನಿನ್ ಹಾಗೆ ಒಂದ್ ಹೀರೋ ಹೋಂಡಾನೂ ಇಲ್ದ ಬಿಟಿಎಸ್ ಬಸ್ ಹಿಡಿದು ನೇತಾಡೋ ಹುಡುಗನಿಂದ ಯಾವ ಫ್ಯೂಚರ್ನೂ ನಿರೀಕ್ಷೆ ಮಾಡ್ಬಾರ್ದು.. ಇವತ್ತು ಬ್ಯಾಕ್ ಟು ದ ಫ್ಯೂಚರ್ ಪಿಕ್ಚರ್‌ಗೆ ಹೋಗೋಣ.. ಇದೇ ಲಾಸ್ಟ್ ಇರ್ಬಹುದು.. ಆಮೇಲೆ ಪಾಸ್ಟ್ ಬಗ್ಗೆ ಯೋಚ್ನೆ ಮಾಡ್ಬೇಡ.. ನಾನಿಲ್ದೆ ನಿನ್ ಫ್ಯೂಚರ್ ಇರಲ್ಲ, ನೀನಿದ್ರೂ ನನ್ ಫ್ಯೂಚರ್ ನೆಟ್ಟಗಿರಲ್ಲ ಅಂತ ನಂಗೊತ್ತಿದೆ.. ಅದನ್ನೂ ಯೋಚ್ನೆ ಮಾಡ್ಬೇಡ.

**ಹೆಂಡತಿ:** ನೋಡ್ರೀ! ಉಪ್ಪಿ2 ನೋಡ್ ಬಂದ್ಮೇಲೆ ನಂಗ್ ಬುದ್ಧಿ ಬಂದಿದೆ. ನೀವು ಆ ಪಿಂಕಿ ಜೊತೆ ಯಾಕ್ ಓಡಾಡ್ತಿದ್ರಿ? ಅವಳ ಜೊತೆ ಎಲ್ಲಿಗೆ ಹೋಗ್ತೀರಿ? ಎದರು ಮನೆ ಮೀನಾನ ಯಾಕ್ ಕದ್ ನೋಡ್ತೀರಿ ಒಂದೂ ಕೇಳಲ್ಲ..! ಯಾಕಂದ್ರೆ, ಪಾಸ್ಟ್ ಈಸ್ ಪಾಸ್ಟ್! ಅದನ್ನ ಯೋಚ್ನೆ ಮಾಡಿ ಯಾವ ಪ್ರಯೋಜ್ನನೂ ಇಲ್ಲ, ಡೈವೋರ್ಸ್ ಕೊಡ್ತೀನಿ ಅಂತಿದ್ದೆ.. ಆದ್ರೆ

ಈಗ ಫ್ಯೂಚರ್ ಬಗ್ಗೆನೂ ಯೋಚ್ನೆ ಇಲ್ಲ.. ನಿಮ್ ಫ್ಯೂಚರ್ ಸರಿಯಾಗೋಕೂ ನಾನ್ ಬಿಡಲ್ಲ.. ನಿಮ್ ತರನೇ ಈ ಸೆಟಪ್ಪಲ್ಲೇ ನಾನೂ ಪ್ರಸೆಂಟ್ ಹೇಗೆ ಎಂಜಾಯ್ ಮಾಡ್ಬೇಕು ಅಂತ ಅರ್ಥ ಮಾಡ್ಕೊಂಡಿದೀನಿ. ಈಗ ನಿಮ್ ಪ್ರಸೆಂಟ್ ಚೆನ್ನಾಗಿರ್ಬೇಕು ಅಂದ್ರೆ ನಡೀರಿ ಜಾಯ್ ಅಲುಕಾಸ್‌ಗೆ! ಒಂದಿಷ್ಟು ಒಡವೆ, ಸೀರೆ ಕೊಡ್ಸಿ..

**ಜೀವನದ ನೀತಿ ಪಾಠ:** ಇರುವೆ ಗೂಡಿನ ಬಳಿ ನಿಂತ್ಕೊಂಡ್ ಮಲೆಯಾಳಿ ವಾಲ್ ಪೋಸ್ಟರ್ ನೋಡುದ್ರೆ ಮೈಗೆ ಇರುವೆ ಹತ್ತುತ್ತೆ. ಪಕ್ಕದಲ್ಲಿ ಹುಡುಗಿ ಕೂರುಸ್ಕೊಂಡ್ ಉಪ್ಪಿ2 ನೋಡುದ್ರೆ ಹತ್ತಿದ್ ಇರುವೆ ತಾನೇ ಎದ್ ಹೋಗುತ್ತೆ

**ರಾಜಕೀಯದವರು:** ಉಪ್ಪಿ2 ಸೂಪರ್ ಸಿನಿಮಾ ರೀ! ನಾವು ಇಷ್ಟು ವರ್ಷ ಮಾಡ್ಕೊಂಡ್ ಬಂದಿದ್ದನ್ನೇ ಉಪೇಂದ್ರ ಅವರು ಸಿನಿಮಾ ಮಾಡಿದಾರೆ.. ಓಟು ಹಾಕೋರಿಗೆ ನಾವು ಅದನ್ನೇ ಹೇಳ್ತಿದ್ದದ್ದು.. ಹಳೇದನ್ನ ಮರೆತ್ ಬಿಡಿ, ಅದರ ಬಗ್ಗೆ ಯೋಚ್ನೆ ಮಾಡ್ಬೇಡಿ.. ನಮ್ ಭವಿಷ್ಯದ್ ಬಗ್ಗೆ ನೀವು ಯೋಚ್ನೆ ಮಾಡ್ಬೇಡಿ ಅದನ್ನ ನಾವು ನೋಡ್ಕೊತೀವಿ.. ಪ್ರಸೆಂಟ್ ಮುಖ್ಯ.. ಸುಮ್ನೆ ಓಟ್ ಹಾಕಿ ಅಂತ.

**ಒಂದು ದುಂಡಿಯದಲ್ಲದ ದಂಡಿ ಯಾತ್ರೆ ಮಾಡದ ಉಪ್ಪಿ ಕವನ:**

*ದುಂಡಿ ಬರೆದಿದ್ದರು: ಪ್ರಿಯಾ ನಿನ್ನ ಮುಖವೇಕೆ ಕಪ್ಪಿಟ್ಟಿದೆ*

*ಏನು ಮಾಡಲಿ ಹೇಳು ಎದುರಿಗೆ ನೀ ಮಾಡಿದ ಉಪ್ಪಿಟ್ಟಿದೆ.*

**ಈಗ:**

*ಪ್ರಿಯಾ ನಿನ್ನ ಮುಖವೇಕೆ ಕಪ್ಪಿಟ್ಟಿದೆ?*

*ಹೇಳಲಾರೆ ನೀನು ನಂಗೊತ್ತಿದೆ.*

*ನಿನ್ನ ಮುಖದಲ್ಲಿ ಎದ್ದು ಕಾಣುತಿದೆ ಉಪ್ಪಿ2*

*ಸಿಕ್ಕಿದೆ ಸರೋಜಳ ಜೊತೆ ಸಿನಿಮಾಗೆ ಹೋಗಿದ್ದ ಟಿಕೀಟು!*

**ಹೆಂಡತಿ ಹೇಳಿದ್ದು:**

*ಪಾಸ್ಟ್ ನಿಪ್ಪಟ್ಟು*

*ನೆನೆದು ಹಲುಬಬೇಡ*

*ಫ್ಯೂಚರ್ ಒಬ್ಬಟ್ಟು*

*ಕನವರಿಸಬೇಡ*

*ಉಸಿರೆತ್ತದೆ ತಿನ್ನು*

*ಎದುರಿಗಿರುವ*

*ಪ್ರಸೆಂಟ್ ಉಪ್ಪಿಟ್ಟು..!*

**ಉಪ್ಪಿ2 ಸಿನಿಮಾ ವಿಮರ್ಶೆ:** ಇಂಟರ್‌ವಲ್ ತನಕ ಹಿಂದಿನದ್ದು ಅರ್ಥ ಮಾಡ್ಕೊಬಾರ್ದು.. ಅದು ಪಾಸ್ಟ್.. ಇಂಟ್ರವಲ್ ಆದ್ಮೇಲೆ ಫ್ಯೂಚರ್ ಹೇಗಿದ್ರೂ ಅರ್ಥ ಆಗಲ್ಲ.. ಸೋ ಎಂಜಾಯ್ ದ ಇಂಟ್ರವಲ್ ಅಂತ ಹುಡುಗಿ ಜೊತೆ ಕೂಲ್‌ಡ್ರಿಂಕ್ಸ್ ಕುಡ್ದೆ.

ಉಪ್ಪಿ ಮುಂದಿನ ಸಿನಿಮಾಗಳು ಹೀಗಿರಬಹುದೇ? –ಪ್ಪಿ– (ಹಿಂದಿನ ಉ ಇಲ್ಲ ಮುಂದಿನ ಟು ಇಲ್ಲ), ಉಪ್ಪಿತ್ರೀ ಅಥವಾ ಕತೆ ಹೇಳೋದ್ರಲ್ಲಿ ಉಪ್ಪಿ ನಿಸ್ಸೀಮರು.. ಮುಂದಿನದ್ದು ರೈಲ್–ಉಪ್ಪಿ2 ಇರಬಹುದೇ?

**ಉಪಸಂಹಾರ:** ಮನೆಗೆ ಶಶಾಂಕ್ ರಾತ್ರಿ ತಡವಾಗಿ ಬರ್ತಾನೆ. ಹೆಂಡ್ತಿ ಸೌಮ್ಯ ಹೇಳ್ತಾಳೆ.. ರೀ! ನೀನು ಬಂದಿದಾರೆ, ರೂಮಲ್ಲಿದಾರೆ.. ಶಶಾಂಕ್ ಶಾಕಾಗಿ ರೂಮಿಗೆ ಓಡಿ ಹೋಗ್ತಾನೆ. ಅಲ್ಲಿ ಹಿಮಾಲಯದಿಂದ ಬಂದ ಬಾಬಾ ಒಬ್ಬರು ಕುಳಿತಿದ್ದಾರೆ.. ನೀನಾ? ಎಂದು ಶಶಾಂಕ್ ಅಚ್ಚರಿ ವ್ಯಕ್ತಪಡಿಸ್ತಾನೆ. ಅಲ್ಲ ನಾನು ಎಂದು ಬಾಬಾ ಗಡ್ಡ ಕಿತ್ತುಹಾಕಿದಾಗ ಒಂದು ಹುಡುಗಿ ಎಕ್ಸ್‌ಪೋಸ್ ಆಗ್ತಾಳೆ. ಶಶಾಂಕ್ ದಂಗು.. ಅಯ್ಯೋನೀನಾ? ಇಲ್ಲಿಗ್ ಯಾಕ್ ಬಂದೆ? ಅಂತ ಕೇಳ್ತಾನೆ. ಅದಕ್ಕವಳು ನಾನ್ ನಿನ್ನ ತುಂಬಾ ಪ್ರೀತಿಸ್ತೀನಿ. ನನ್ ಹೆಸರಲ್ಲಿರೋ ವಿಲ್ ಮೇಲೆ ಕೇಡಿಗಳ ಕಣ್ ಬಿದ್ದಿದೆ, ನನ್ ಸೇವ್ ಮಾಡು, ನಾವಿಬ್ರೂ ಮದುವೆ ಆಗೋಣ ಅಂತಾಳೆ... ಅಷ್ಟರಲ್ಲಿ ಹೆಂಡ್ತಿ ಸೌಮ್ಯ ಬಂದು ಇಬ್ಬರನ್ನೂ ಕೂಡಿ ಹಾಕ್ತಾಳೆ. ಇಬ್ಬರೂ ''ಅಯ್ಯಯ್ಯೋ ನೀನಾ?'' ಅಂತ ದಂಗಾಗ್ತಾರೆ. ಸೌಮ್ಯ ಹೇಳ್ತಾಳೆ, ಏಯ್ ಸ್ನೋ ವೈಟ್ ಹುಡುಗಿ, ನಾನು ನಾನಲ್ಲ, ನಾನು ನೀನು, ಅಂದ್ರೆ ನಾನು ನಿನ್ನ ಮಾಜಿ ಲವರ್..! ಮತ್ತೆ ಇದೇನು ನಿನ್ ಗೆಟಪ್? ಸ್ನೋ ಹುಡುಗಿ ಕೇಳ್ತಾಳೆ. ''ನಾನು ಬರೀ ಹೆಸರು ಚೇಂಜ್ ಮಾಡ್ಕೊಂಡಿಲ್ಲ, ಆಧಾರ್ ಕಾರ್ಡ್ ಡೂಪ್ಲಿಕೇಟ್ ಮಾಡಿಲ್ಲ, ಹೊಸ ಬ್ಯಾಂಕ್ ಅಕೌಂಟ್ ಮಾಡಿಲ್ಲ, ಬರೀ ಪ್ಲಾಸ್ಟಿಕ್ ಸರ್ಜರಿ ಮಾಡ್ಸಿಲ್ಲ, ಟೋಟಲೀ ಲಿಂಗ ಬದಲಾವಣೆ ಮಾಡಿಸ್ಕೊಂಡಿದೀನಿ.. ನಾನು ಈಗ ನೀನು... ನಿನ್ ವಿಲ್ ನನ್ನ ಆಸ್ತಿ.. ಈ ನಿನ್ನ ಲವರ್, ಈಗ ನನ್ನ ಗಂಡ..'' ಅಂತಾಳೆ ಸೌಮ್ಯ. ಸುತ್ತಾ ಆಕ್ಟ್ ಮಾಡಲು ಬಂದ ಅಪ್ಪ, ಅಮ್ಮ, ಮಗ, ಮಗಳು ಎಲ್ಲಾ ನಿಂತಿದ್ದಾರೆ. ಹೆಂಡ್ತಿ ಪಿಸ್ತೂಲ್ ತೆಗೆದು ಸ್ನೋ ವೈಟ್ ಹುಡುಗಿಯನ್ನು ಶೂಟ್ ಮಾಡ್ತಾಳೆ.. ವಿಲನ್ ನುಗ್ಗಿ ಬಂದು ಛೇ! ಎಂತ ಕೆಲಸ ಮಾಡ್ಬಿಟ್ಟೆ.. ಆ ನೀನುನ ನೀನ್ಯಾಕ್ ಕೊಂದೆ? ಅಂತಾನೆ. ಅಷ್ಟರಲ್ಲಿ ಬರುವ ಪೋಲೀಸ್ ಕೊನೆಗೂ ಎಲ್ಲಾ ನೀನುಗಳು ಒಂದ್ಕಡೆ ಸಿಕ್ರಿ.. ಈಗ ನಿಜವಾದ್ ನೀನುನ ನಾನ್ ಹಿಡೀತೀನಿ ಅಂತಾನೆ.. ಏಯ್ ಗುಗ್ಗು, ಅಲ್ಲೇನ್ ಹಿಡೀತೀಯ ನಾನು ಇಲ್‌ಇಲ್ಲಿದೀನಿ. ವಾಯ್ಸ್ ಓವರ್, ಮೇಲೆ ಕಾಲಿ ರೂಫ್ ಮೇಲೆ ಲೈಟು.. ಕಟ್.. ನೀನು ಯಾರು? ಅಪ್ಪನಾ? ಅಮ್ಮನಾ? ಹೆಂಡ್ತಿನಾ? ಗಂಡನಾ? ಸ್ನೋ ವೈಟ್ ಸುಂದ್ರಿನಾ? ನೀವೇ ಡಿಸೈಡ್ ಮಾಡ್ಕೊಳಿ..

# ಏಕಾಂತದ ಸುಖ

**- ಎಚ್. ಗೋಪಾಲಕೃಷ್ಣ**

**ಎಂ**ದಿನ ಹಾಗೇ ಬೆಳಿಗ್ಗೆ ಎದ್ದೆ, ಮನೆ ಪಕ್ಕದ ಪಾರ್ಕಿನಲ್ಲಿ ಐದು ಸುತ್ತ ಸುತ್ತಿ ರೌಂಡು ಹಾಕಿದೆ. ಬಯಲು ವ್ಯಾಯಾಮ ಶಾಲೆಯಲ್ಲಿ ಕೊಂಚ ಕಸರತ್ತು ಅಂತ ಮಾಡಿದೆ. ಎರಡು ಹನಿ ಬೆವರು ಬಂತು ಅಂತ ಅನಿಸುತ್ತಿದ್ದ ಹಾಗೆ ಒಂದೂ ಕಾಲು ಕಿ.ಮೀ. ಸ್ಪೀಡಿನಲ್ಲಿ ಮನೆಗೆ ಓಡಿದೆ. ಮನೇಲಿ ಕೆಲಸಗಳು ನನಗೋಸ್ಕರ ಕಾಯ್ಕೊಂಡಿರುತ್ವೆ. ರಿಟೈರ್ ಆದ ಮೇಲೆ ಏನು ಮಾಡೋದೂ ಅಂತ ಚಿಂತೆ ಹಚ್ಕೊಂಡಿದ್ದೆ. ಆದರೆ ಆ ಚಿಂತೆ ಈಗಿಲ್ಲ, ಮನೆ ಕೆಲಸ ಮಾಡೋಕ್ಕೆ ಸಮಯ ಹೊಂಚೋದೇನೇ ಮತ್ತೊಂದು ಸಮಸ್ಯೆ ಈಗ!

ಒಂದು ಚೀಲ ಕೊಟ್ಟು ಎರಡು ಲೀಟರು ಹಾಲು, ಅರ್ಧ ಮೊಸ್ರು, ಮಜ್ಜಿಗೆ ಬೇಕೂಂದ್ರೆ ತನ್ನಿ, ಸುಮ್ ಸುಮ್ನೆ ತಂದು ಬಿಸಾಕ ಬೇಡಿ ಅಂತ ಉಪದೇಶ ನೀಡಿ ಎರಡು ನೋಟು ಕೊಟ್ಟರು ಮನೆ ಓನರು.

ರಿಟೈರ್ ಆದ ಮೇಲೆ ಒಂದು ಕಲ್ತಿದೀನಿ – ಯಜಮಾನಿಗೆ ಎದುರು ಉತ್ತರ ಕೊಡದೇ ಇರೋದು! ಇದು ಯಾಕೆ ಅಂದರೆ ಮನೇಲಿ ಶಾಂತಿ ಕಾಪಾಡಬೇಕು ಅನ್ನುವ ಸಾಮಾಜಿಕ ಕಳಕಳಿ. ಸುಮ್ ಸುಮ್ನೆ ತಂದು ಬಿಸಾಕಬೇಡಿ ಅಂತ ಉಪದೇಶ ಕೇಳಿದರೆ ಮೈ ಉರಿಯುತ್ತೆ. ಹಾಗಂತ ಜಗಳವಾಡಿ ನೆಮ್ಮದಿ ಕಳೆದುಕೋಬೇಕಾ? ಬೇರೆ ಸಮಯದಲ್ಲಿ ಆಗಿದ್ದರೆ ಇಡೀ ದಿವಸ ಜಗಳವಾಡಿ ಆಚೆ ಹೋಗಿಬಿಡುತ್ತಿದ್ದವನು ನಾನು. ರಾತ್ರಿ ಊಟದ ಸಮಯದಲ್ಲಿ ಮನೆ ಸೇರುತ್ತಿದ್ದೆ ಮತ್ತು ಇದು ಮರೆತೇ ಹೋಗಿರುತ್ತಿತ್ತು. ಜಗಳ ವಾರಗಟ್ಟಲೆ ನಡೆದಿದ್ದೂ ಇದೆ.

ರಿಟೈರ್ ಆದ ಮೇಲೆ ಮನೇಲೇ ಇರಬೇಕಲ್ಲಾ?

ಅನುಭವ ಪಾಠ ಕಲಿಸುತ್ತಂತೆ. ಅದರಿಂದ ಪಾಠ ಕಲಿತ ನಾನು ಈಗ ರಿಟೈರಿನ ನಂತರ ಮರು ಮಾತು ಆಡುವುದಿಲ್ಲ, ಆರ್ಗ್ಯುಮೆಂಟು ಮಾಡುವುದಿಲ್ಲ, ಕೂರು ಅಂದರೆ ಕೂಡುವ ನಿಲ್ಲು ಅಂದರೆ ನಿಲ್ಲುವ, ಮಲಗು ಎಂದರೆ ಮಲಗುವ, ತಿನ್ನು ಅಂದರೆ ತಿನ್ನುವ ವಿಧೇಯ ಮುದಿನಾಯಿಯಾಗಿ ಅತ್ಯಂತ ಒಬೀಡಿಯೆಂಟ್ ಜಂಟಲ್ ಮನ್ ಆಗಿ ಮೆಟಾಮಾರ್ಫಸಿಸ್‌ಗೆ ಒಳಗಾಗಿರುವ ಸಾಧು ಸಂತನಾಗಿ ಮೊಬೈಲ್ ವಸ್ತುವಾಗಿದ್ದೇನೆ. ನೋಟು ತಗೊಂಡು ಹಾಲಿಗೆ ಹೋದೆ. ನೋಟು, ಮೊಬೈಲು ಎಲ್ಲವೂ ಷರಟಿನ ಮೇಲಿನ ಜೇಬಿನಲ್ಲಿ ಇಟ್ಕೊಳ್ಳೋದು ನಾನು.

ಹಾಲು ತಗೊಂಡು ನೋಟು ಕೊಟ್ಟು ಚಿಲ್ರೆ ಇಸ್ಕೊಂಡೆ. ಅಲ್ಲಿಂದ ಕಾಫಿ ವಾಸನೆ ಬಂತು ಅಂತ ಪಕ್ಕದ ಹೋಟೆಲಿಗೆ ನುಗ್ಗಿದೆ. ಅಲ್ಲೂ ಚಿಲ್ರೆ ಇಸ್ಕೊಂಡು ಜೇಬಿಗೆ ಸೇರಿಸಿದೆ.

ಆಗಾಗ ಜೇಬಿನಲ್ಲಿ ಮೊಬೈಲು ಇದೆಯಾ ಅಂತ ಮುಟ್ಟಿ ಮುಟ್ಟಿ ನೋಡಿಕೊಂಡೇ ಮನೆ ಸೇರಿದೆ. ಮನೆ ಸೇರಿದೆನಾ? ಮನೆ ಎದುರಿನ ಜಗಲಿ ಮೇಲೆ ಕೂತು ಶೂ ಬಿಚ್ಚಿದೆ. ಯಾರೋ ಫೋನು ಮಾಡ್ತಿದಾರೆ ಅನ್ನಿಸ್ತು. ಜೇಬಿನಿಂದ ಫೋನು ತೆಗೆದೆ. ಹತ್ತು ನಿಮಿಷ ಮಾತುಕತೆಯಾಡಿ ಒಳಗೆ ಸೇರಿದೆ.

ಸ್ನಾನಕ್ಕೆ ಅಂತ ಷರಟು ಬಿಚ್ಚಿ ನೋಟು ಆಚೆ ತೆಗೆದರೆ ಒಂದು ನೂರು ರೂಪಾಯಿ ನೋಟು ಮಿಸ್ ಆಗಿರಬೇಕೇ? ಎಲ್ಲಿ ಹೋಯಿತು ಅಂತ ತಲೆಗೆ ಕೆಲಸ ಕೊಟ್ಟೆ. ಹಾಲಿನವನ ಹತ್ರ ಸರಿಯಾಗೇ ಚಿಲ್ರೆ ಇಸ್ಕೊಂಡಿದ್ದೆ. ಕಾಫೀಗೂ ಸರಿಯಾಗೇ ಕಾಸು ಕೊಟ್ಟಿದ್ದೆ. ಬೇರ ಇನ್ನೇನಾದರೂ ತಗೊಂಡೆನಾ? ಮನೆಯಿಂದ ಹೊರಟಾಗಿನಿಂದ ತಿರುಗಿ ವಾಪಸ್ ಬರುವವರೆಗೆ ಏನೇನು ಮಾಡಿದೆ. ಎಲ್ಲೆಲ್ಲಿಗೆ ಹೋಗಿದ್ದೆ. ನನ್ನ ಅರಿವಿಗೆ ಬಾರದ ಹಾಗೆ ಹೋಟೆಲ್ಲಿಗೆ ಹೋಗಿಬಿಟ್ಟಿದ್ದೆನಾ? ಅಂತ ನೆನಪಿನ ಸುರುಳಿ ಬಿಚ್ಚಿದೆ.

ನೂರರ ನೋಟು ಎಲ್ಲಿ ಕರ್ಚಾಯಿತು ಅಂತ ನೆನಪಿಗೆ ಬರಲಿಲ್ಲ. ಬದಲಿಗೆ ನೂರು ರೂಪಾಯಿನ ಲೆಕ್ಕ ಎಲ್ಲಿ ಹೇಗೆ ಹೊಂದಿಸಬಹುದು ಅಂತ ಹೊಸಾ ತಲೆನೋವು ಹಚ್ಚಿಕೊಂಡೆ. ಹಾಗೆ ನೋಡಿದರೆ ನಾನು ಯಾರಿಗೂ ಲೆಕ್ಕ ಒಪ್ಪಿಸಬೇಕಿಲ್ಲ. ಆದರೂ ನನಗೆ ನಾನೇ ಒಂದು ರೂಲು ಮಾಡಿಕೊಂಡಿದೀನಿ – ರಿಟೈರ್ ಆದ ಮೇಲೆ. ಹಿತವಾಗಿ ಮಿತವಾಗಿ ಖರ್ಚು ಮಾಡಿ. ಪ್ರತಿಯೊಂದರ ಲೆಕ್ಕ ಇಡಿ. ಇನ್ಮುಂದೆ ನಿಮಗೆ ಒಂದೇ ಒಂದು ರೂಪಾಯಿಯ ಸಂಪಾದನೇನೂ ಇರುಲ್ಲ. ಒನ್ ರುಪೀ ಗೈನ್ ಡ್ ಈಸ್ ಒನ್ ರುಪೀ ಎರ್ನ್‌ಡ್ ಅಂತ ನಾನು ರಿಟೈರ್ ಆದಾಗ ಆದ್ಯಾರೋ ಫೈನಾನ್ಷಿಯಲ್ ಎಕ್ಸ್ ಪರ್ಟ್ ಅಂತೆ ಅವನು ನಮ್ಮನ್ನೆಲ್ಲಾ ಸೇರಿಸಿಕೊಂಡು – ರಿಟೈರ್ ಆಗ್ತಿರೋ ಬಕರಾಗಳಿಗೆಲ್ಲಾ ಪಾಠ ಹೇಳಿದ್ದ! ಮಿಕ್ಕವರು ಈ ಪಾಠಾನ ಅವತ್ತೇ ಮರೆತು ಸುಖವಾಗಿದ್ದಾರೆ. ನಾನು ಅದನ್ನ ಚಾಚೂ ತಪ್ಪದೇ ಪಾಲಿಸಿಕೊಂಡು ಬರ್ತಾ ಇದೀನಿ. ಪಾಪ ಎಕ್ಸ್ ಪರ್ಟ್ ಅಷ್ಟೊಂದು ಕಾಳಜಿಯಿಂದ ನಮಗೆ ಪಾಠ ಹೇಳಿದ್ದು ನಾವು ಮರೀಲೀ ಅಂತಲೇ?

ನೂರು ರೂಪಾಯಿ ಏನಾಯಿತು ಅನ್ನುವ ತಲೆನೋವು ಹಚ್ಚಿಕೊಂಡೆ ಅಂತ ಹೇಳಿದೆ ಅಲ್ವೇ? ನೂರು ಸಂಪಾದಿಸೋಕ್ಕೆ ಅದೇನೇನು ಮಾಡಬೇಕು ಅನ್ನುವ ಪರರ ಅನುಭವ ನೆನಪಿಗೆ ಬರಬೇಕೇ? ಇಡೀ ದಿವಸ ಮಾರ್ಕೆಟ್ಟಿನಲ್ಲಿ ಮೂಟೆ ಹೊತ್ತರೆ ನೂರು ಸಂಪಾದಿಸಬಹುದೇ? ಸಂಪಾದಿಸಬಹುದು – ಆದರೆ ಈಗಾಗಲೇ ಇರೋ ಬೆನ್ನು ನೋವಿಗೆ ಔಷಧಕ್ಕೆ ಅದೆಷ್ಟು ಬೇಕು? ಮೂಟೆ ಹೊತ್ತರೆ ಬೆನ್ನು ನೋವು ಇನ್ನೂ ಹೆಚ್ಚಾಗುತ್ತೆ. ಅದರ ಆರೈಕೆಗಾಗಿ ಕಾಸು ಹೇಗೆ ಹೊಂದಿಸೋದು? ಮೂಟೆ ಹೊರುವ ಐಡಿಯಾ ದೂರ ತಳ್ಳಿದೆ.

ಪೇಪರಿಗೆ ಕಥೆ ಬರೆದರೆ? ಕಥೆ ಬರೀಬಹುದು – ಅದು ಪಬ್ಲಿಷ್ ಆದರೆ ಕಾಸು ಬರೋದು. ಇಲ್ಲ ಅಂದರೆ ನಮ್ಮ ಶ್ರಮ ವೇಷ್ಟು ಅಷ್ಟೇ. ಹದಿನೈದು ಪುಟ ಬರೆಯೋದು ಅಂದರೆ ಸುಮ್ಮನೆ ಆಯ್ತೆ? ತಲೇಗೆ ಕೆಲಸ, ಕೈಗೆ ಕೆಲಸ, ಬಿಳೀ ಹಾಳೆ ತರಬೇಕು, ಪೆನ್ನು ತರಬೇಕು, ರಬ್ಬರ್ ತರಬೇಕು.... ಕಥೆ ಬರೆವ ಐಡಿಯಾ ಡ್ರಾಪ್ ಆಯಿತು.

ಬ್ಯಾಂಕಿನಲ್ಲಿ ನೂರು ರೂಪಾಯಿ ಬಡ್ಡಿ ಗಿಟ್ಟಿಸೋಕ್ಕೆ ಅದೆಷ್ಟು ಕಾಸು ಇಡಬೇಕು? ಗಣಿತದಲ್ಲಿ ನಾನು ವೀಕ್ ಆದರೂ ಒಂದು ಗಂಟೆ ಲೆಕ್ಕ ಹಾಕಿದೆ. ತಿಂಗಳಿಗೆ ನೂರು ಬಡ್ಡಿ ಬರಬೇಕಾದರೆ ಹದಿನೈದು ಸಾವಿರ ಇಡಬೇಕಾಗುತ್ತೆ. ಹದಿನೈದು ಸಾವಿರ ಎಲ್ಲಿದೆ? ಹದಿನೈದು ಸಾವಿರ ಸಂಪಾದಿಸುವ ಕೆಲಸ ನನಗೆ ಯಾವ ಈಡಿಯಟ್ ಕೊಡ್ತಾನೆ? ಈ ಐಡಿಯಾ ಕೂಡಾ ಡ್ರಾಪ್ ಆಯಿತು.

ಹಿಂದೆ ನಾನು ಕಳೆದುಕೊಂಡ ಹಣಕಾಸಿನ ನೆನಪು ಈಗಲೇ ಒದ್ದುಕೊಂಡು ಮೆದುಳಿನ ಮೇಲಿನ ಪದರಕ್ಕೆ ಅಪ್ಪಳಿಸಬೇಕೇ? ಬಸ್ಸಿನ ಕಂಡಕ್ಟರಿನ ಬಳಿ ಮರೆತು ಹೋದ ಸಣ್ಣ ಮೊತ್ತದಿಂದ ಅದು ಆರಂಭವಾಯಿತು. ತೀರಾ ಈಚೆಗೆ ಅದು ಯಾರೋ ಪುಣ್ಯಾತ್ಮ ನನಗೆ ನಾಮ ಹಾಕಿದ್ದು ನೆನಪಾಯಿತು. ಲಕ್ಷಕ್ಕೆ ಬರೀ ಐನೂರು ರೂಪಾಯಿಗೆ ಬಡ್ಡಿ ಬಿಟ್ಟಿದೀರಾ ಸಾರ್? ನನಗೆ ಕೊಡಿ ಸಾರ್ ಐದು ಸಾವಿರ ಕೊಡ್ತೀನಿ ತಿಂಗಳಿಗೆ ಅಂತ ಒಂದು ಹುಡುಗ ತುಂಬಾ ಆಪ್ತನಾದ ನಂತರ ಐಡಿಯಾ ತುಂಬಿದ ನನ್ನ ತಲೆಯೊಳಗೆ. ಅವನ ಮುಖ ನೋಡಿದರೆ ಮೋಸ ಮಾಡುವವನ ಹಾಗೆ ಕಾಣಲಿಲ್ಲ – ಬುದ್ಧ ಇದ್ದ ಹಾಗಿದ್ದ. ಯಾವದೋ ಶೇರ್ ಕಂಪನೀಲಿ ಕೆಲಸ ಅವನಿಗೆ. ಯಾರು ಯಾರಿಗೆ ತಿಂಗಳಿಗೆ ಐದು ಸಾವಿರ ಬರೋ ಹಾಗೆ ಮಾಡಿದ್ದೀನಿ ಅಂತ ವಿವರ ಕೊಟ್ಟ. ಪಾಪ ಯಾವುದೋ ದೂರದ ಊರಿನಿಂದ ಬಂದಿರೋನು. ನಾವಲ್ಲದೆ ಬೇರೆ ಯಾರು ಇವನಿಗೆ ಪ್ರೋತ್ಸಾಹ ಕೊಡಬೇಕು ಅಂತ ಯೋಚಿಸಿ ತಿಂಗಳಿಗೆ ಲಕ್ಷಕ್ಕೆ ಐದು ಸಾವಿರ ಕೊಡ್ತೀನಿ ಅಂತ ಅವನ ಕೈಲಿ ಪ್ರಾಮಿಸ್ ಮಾಡಿಸಿಕೊಂಡು ಅವನಿಗೆ ಕಾಸು ಕೊಟ್ಟಿದ್ದೆ – ಯಾರ ಹತ್ತಿರವೂ ಸಂಗತಿ ಬಾಯಿ ಬಿಟ್ಟಿರಲಿಲ್ಲ. ಹುಡುಗ ಒಂದೇ ತಿಂಗಳಿಗೆ ಯಾರಿಗೂ ಹೇಳದೇ ಕೇಳದೇ ಅವನ ಊರಿಗೆ ಹೋಗಿಬಿಟ್ಟ. ನನಗೆ ನಾಮ ಹಾಕಿಸಿಕೊಂಡಿದ್ದೇ ಬಂತು.

ಈ ವಿಷಯವನ್ನ ನಾನು ಯಾವಾಗಲೋ ಮರೆತೂ ಬಿಟ್ಟಿದ್ದವನು. ಯಾರಿಗಾದರೂ ಇದನ್ನ ಹೇಳಿದರೆ ನಾನು ತಮಾಷೆ ವಸ್ತುವಾಗ್ತೀನಿ ಅಂತ ಒಳಗೇ ಇಟ್ಟುಕೊಂಡಿದ್ದೆ. ಈಗ ಅದೂ ಆಚೆ ಬಂದು ಕಾಡಬೇಕೇ? ಛೇ ಅನಿಸಿತು.

ಹುಳಿಯನ್ನ, ಮೊಸರನ್ನ ಬಾಳಕ ಉಪ್ಪಿನಕಾಯಿ ಉಂಡೆ, ಹಾಯಾಗಿ ಸೋಫಾ ಮೇಲೆ ಮೈ ಚೆಲ್ಲಿದೆ – ನಿದ್ದೆ ಅಂತೂ ಗಾವುದ ದೂರ. ಹಗಲು ಕನಸಾದರೂ ಕಾಣೋನ ಅಂದರೆ ಹಾಳಾದ ನೂರರ ನೋಟು ಕಣ್ಣ ಮುಂದೆ ಥಕಥೈ ಎಂದು ಕುಣೀಬೇಕೆ? ಕುರುಡು ಕಾಂಚಾಣ ಕುಣಿಯೂತಿತ್ತ....?

ನೂರರ ಕಾಟ ಹೆಚ್ಚಿತು ಅನಿಸಿತು. ಟೈಂ ನೋಡಿದೆ, ಸಂಜೆ ವಾಕಿಂಗ್ ಗೆ ತಯಾರಾಗಬೇಕಲ್ಲಾ?

ಕಾಫಿ ಕುಡಿದೆ, ಷರಟು, ಪ್ಯಾಂಟು ತೊಟ್ಟೆ, ಆಚೆ ಬಂದೆ. ಶೂ ಮನೇಲಿ ಒಳಗೆ ಬಿಡೋಲ್ಲ – ಅದು ಮೈಲಿಗೆ ಲೆಕ್ಕವಂತೆ. ಅದರಿಂದ ಅದು ಯಾವಾಗಲೂ ಆಚೆ. ಜಗಲಿ ಕೆಳಗೆ ಬಗ್ಗಿ ಶೂ ಆಚೆ ತೆಗೆಯಲು ಕೈ ಹಾಕ್ತೀನಿ. ಅಲ್ಲೇನು ಕಾಣಿಸಬೇಕು ನನಗೆ? ಬೆಳಿಗ್ಗೆಯಿಂದ ನನ್ನ ತಲೆ ಕೆಡಿಸಿ ಗೊಬ್ಬರ ಮಾಡಿದ್ದ ನೂರರ ನೋಟು ಅಲ್ಲಿಂದ ನನ್ನನ್ನು ನೋಡಿ ಹಲ್ಲು ಕಿಸೀಬೇಕೇ?

ಅಯ್ಯೋ ಮಾರಾಯ, ಬೆಳಿಗ್ಗೆ ನೀನು ಇಲ್ಲಿ ಕೂತು ಮೊಬೈಲ್ ಫೋನು ಆಚೆ ತೆಗೆದೆಯಲ್ಲೋ ಆಗ ನಾನು ಕೆಳಗೆ ಬಿದ್ದೋನು. ಯಾಕೆ ಯಾರೂ ಬರಲಿಲ್ಲವೇ ಇನ್ನೂ ಅಂತ ಕಾದಿದ್ದೆ. ನಾನು ಹುಟ್ಟಿದ ಮೇಲೆ ಇಷ್ಟು ನಿರಾಳವಾಗಿ ಇಷ್ಟು ಹೊತ್ತು ಒಬ್ಬನೇ ಇದ್ದದ್ದು ಇವತ್ತೇ ಮೊದಲು. ಏಕಾಂತದ ಸುಖ ದೊರಕಿಸಿ ಕೊಟ್ಟ ಮಹಾನುಭಾವ ನೀನು.... ಅಂತ ಅದು ನನ್ನ ಬಳಿ ಬಂದು ಅಪ್ಪಿಕೋಬೇಕೇ?

# ಸೋಪಿನ ಅವಾಂತರ

**- ಕಮಲಾ ಸಿಡೆನೂರ**

**'ಮೇ'** ತಿಂಗಳು ನಮ್ಮಿಬ್ಬರ ಉತ್ಸಾಹಕ್ಕೆ ಗರಿ ಮೂಡಿತು. ಕಾರಣ ಸೂಟಿಗೆ ಮಕ್ಕಳು, ಮೊಮ್ಮಕ್ಕಳ ಆಗಮನ, ಜಾತಕಪಕ್ಷಿಯಂತೆ ಕಾದು ಕುಳಿತಿರುವ ಹಿರಿಜೀವಿಗಳಿಗೆ ಮಕ್ಕಳ ಆಗಮನದ ಸಂಭ್ರಮದ ವಾತಾವರಣ. ಇಡೀ ವರ್ಷ ಅವರಲ್ಲಿಗೆ ಭೇಟಿಯಾಗಿ, ಬಿಡಾರ ಹೂಡಿ ಬಂದಿದ್ದರೂ (ಅಲ್ಲಿ ಸಹ ನಮ್ಮ ಸ್ವಇಚ್ಛೆ ಪೂರೈಸಿ) ಹಾಗೂ ಕಲಿಕೆಗಳನ್ನು ಮಾಡಿ (ಬರದಿದ್ದರೂ) ಅವುಗಳ ಪ್ರಾತ್ಯಕ್ಷಿಕೆಯನ್ನು ಈ ತಿಂಗಳು ಮಾಡುವ ನಮಗೆ ಸುಸಮಯ. ಅಲ್ಲದೇ ಮೊಮ್ಮಕ್ಕಳಿಗೂ ನಾವೂ ಸಹ ನಿಮ್ಮಂತೆ (ಯಾಂತ್ರಿಕಯುಗದಲ್ಲಿ) ಇರಲು ಪ್ರಯತ್ನಿಸಿದ್ದೇವೆ ಎಂಬುದನ್ನು ತೋರಿಸುವ ತವಕ.

ಮಕ್ಕಳು, ಮೊಮ್ಮಕ್ಕಳೆಲ್ಲಾ ಬಂದು ಯಾವ ತಗಾದೆಯಿಲ್ಲದೇ ಅಜ್ಜಾ-ಅಜ್ಜಿಯರ ಮನೆಯಲ್ಲಿ, ತಮ್ಮ ಸ್ವಾತಂತ್ರತೆ ಪ್ರದರ್ಶಿಸುತ್ತಾ ಸೂಟಿ ಕಳಿಯುತ್ತಿದ್ದರು. ಆದರೆ ಮಕ್ಕಳಿಗೆ ಅಮ್ಮಾ, ಅಪ್ಪಾ ಇವರ ಚಿಂತೆ. ಇಂಥದರಲ್ಲಿ ಕೆಲವೊಮ್ಮೆ ಜೀವನದಲ್ಲಿ ನೆನಹಿಡುವ ಘಟನೆಗಳು ನಡೆದು ನಮ್ಮ ಇಂಥ ಇರುವಿಕೆಯನ್ನು ಜ್ಞಾಪಿಸುತ್ತವೆ.

ಮಕ್ಕಳು ಇದಕ್ಕೆ ತಮ್ಮದೇ ಆದ ಉಪಾಯ ಮಾಡಿ, ಮಾರ್ಕೆಟ್ಟಿಗೆ ಹೋಗಿ 'ಮನೆಯ ಸ್ವಚ್ಛತೆ ಸಲುವಾಗಿ ತರಹದ ಬ್ರಶ್‌ಗಳು, ಲಿಕ್ವಿಡ್‌ಗಳು, ಫಿನಾಯಿಲ್‌ಗಳು, ಕೈ ತೊಳೆಯುವ ಸಾಧನಗಳನ್ನು ತಂದರು. (ಬಹುಶಃ ಅವರ ಮನಸ್ಸಿನಲ್ಲಿ ಇವುಗಳ ಬಳಕೆ ಮಾಡಲು ಒಂದು ವ್ಯಕ್ತಿಯ ಅವಶ್ಯಕತೆಯನ್ನು (ಕೆಲಸದವಳು ಅವುಗಳನ್ನು ತಿಳಿದವಳು) ಮರೆತರೆಂದು ಕಾಣುತ್ತದೆ. ಇರಲಿ ಪಾಪ! ಬಹಳ ಆಶೆ ಪಡಬಾರದು.

ಲೋಕಲ್ ಪ್ರಾಡೆಕ್ಟ್ ಅಂತಾ ಒಂದು ದೊಡ್ಡ ಬಾಟಲಿಯ ಕೈತೊಳೆಯುವ ಸೋಪನ್ನು (ಗುಲಾಬಿ ಬಣ್ಣದ್ದು) ತಂದಿದ್ದರು. ಅದರ ಮೇಲೆ ಯಾವ ಲೇಬಲ್ ಇರಲಿಲ್ಲ. ಫಿನಾಯಿಲ್ ಬಣ್ಣ ಸಹ ಅದೇ ತರಹ ಇತ್ತು. ಸೂಟಿಯನ್ನು ಮುಗಿಸಿ ಎಲ್ಲರೂ ತಮ್ಮ ತಮ್ಮ ಊರುಗಳಿಗೆ ಹಿಂದಿರುಗಿದರು.

ಈಗ ಅವುಗಳ ಯಜಮಾನತಿ ನಾನು. ನನ್ನ ಪ್ರಕಾರ ಎಲ್ಲವುಗಳನ್ನು ಸಣ್ಣ ಸಣ್ಣ ಬಾಟಲಿಯಲ್ಲಿ ಹಾಕಿ ದಿನವೂ ಕೆಲಸದವಳಿಗೆ ಯಾವ ರೀತಿ ಹಾಖಬೇಕು ಎಂಬುದನ್ನು ಫರಮಾನು ಹೊಡೆಸಿದೆ. ಮರುದಿನ ನನ್ನ ಕೆಲಸದವಳು ಬಕೆಟಿಗೆ ಹಾಕಿದಾಗ್ಗೆ ಬಹಳ ಬುರುಗು (ಫೋಮ) ಬರುತ್ತದೆ, ಎಷ್ಟು ತೊಳೆದರೂ ದಬ್ಬಿ ಒರೆಸಿದರೂ ಹೋಗುತ್ತಿಲ್ಲ ಎಂದು ಕಂಪ್ಲೇಂಟ್ ಮಾಡಿದಳು. ಅವಳು ಸಣ್ಣಾಗಿ ಕಂಪ್ಲೇಂಟ್ ಮಾಡಿದಾಗ್ಗೆ ನಾನೇ ಖುದ್ದಾಗಿ ಅದನ್ನು ಮಾಡಿದರೂ ಅದೇ ಪರಿಣಾಮ. ಆಗ ಬೇಸರಿದು ಮಕ್ಕಳಿಗೆ ಫೋನಾಯಿಸಿದೆ. ನೋಡು ಈ ಸಲ ನೀನು ತಂದ ಆ ಗುಲಾಬಿ ಬಣ್ಣದ ಫಿನಾಯಿಲ್ ''ಸೋಪ್'' ತರಹ ಇದೆ, ನೆಲ ಜಾರುತ್ತದೆ ಎಂದೆ. ಅದಕ್ಕೆ ಅವಳ ಉತ್ತರ ''ಅಮ್ಮಾ ನೀವು

ಹಾಕಿದ್ದು ಫಿನಾಯಿಲ್ ಅಲ್ಲ, ಕೈತೊಳೆಯುವ ಸಾಬೂನು, ಕಾನ್ಸನ್‌ಟ್ರೇಟೆಡ್, ಪದೇ ಪದೇ ನೀವು ಮಾರ್ಕೆಟಿಗೆ ಹೋಗಬಾರದೆಂದು ತಂದದ್ದು. ಅಲ್ಲದೇ ಲೋಕಲ್ ಪ್ರಾಡೆಕ್ಟ್ ಇದೆ, ಲೇಬಲ್ ಇಲ್ಲ. ಅದರ ಬಗ್ಗೆ ನಿಮಗೆ ತಿಳಿಸಿದೆ ಎಂದರು. ಹೋಗಲಿ ನಾನೇನೋ ತಪ್ಪು ಮಾಡಿದೆ ಅಂತ ತಿಳೀರಿ. ಆದರೆ ಮಕ್ಕಳಿಂದ ಬಂದ ಮುಂದಿನ ಮೆಸೇಜ್ ನೋಡಿ, ''ಅಮ್ಮಾ ಶಿವಾಜಿ ಪಿಕ್ಚರ್‌ನಲ್ಲಿ ರಜನೀಕಾಂತ ಬೆಳ್ಳಗಾಗಲು ಫೇರ್ ಅಂಡ್ ಲವ್ಲಿಯನ್ನು ಬಾಥ್ ಟಬ್‌ನಲ್ಲಿ ಹಾಕಿ ಸ್ನಾನ ಮಾಡಿದ ಹಾಗೆ ಆಯಿತಲ್ಲ, ಅದೂ ತಾನು ಕೆಂಪಾಗಬೇಕೆಂದು ಮಾಡಿದ ಅವನ ಉಪಾಯ. ಆದರೆ ಇದು ಕೈತೊಳೆಯುವ ಸೋಪ್, ಮನೆಯನ್ನು ಹೇಗೆ ಸ್ವಚ್ಛ ಮಾಡುವುದು? ಎನ್ನಬೇಕೆ!

ನನ್ನ ಪೆಚ್ಚಾದ ಮುಖವನ್ನು ನೋಡಿ, ''ಏನು ಬಹಳ ಸ್ಮಾರ್ಟ್ ಅಂತ ಅನಕೋತಿದ್ದ ಈಗ.......'' ಎಂದು ಅನ್ನಬೇಕೆ ನಮ್ಮ ಯಜಮಾನ ಆಕಾಶವಾಣಿ (ಬಹುಶಃ ಅವರೂ ತುಂಬಾ ದಿನಗಳಿಂದ ಸಂಧಿಗೋಸ್ಕರ ಕಾಯುತ್ತಿದ್ದರೇನೋ!

---

**ಬುದ್ಧಿವಂತರು ಯಾರು**

ಈಗಿನ ಕಾಲದಲ್ಲಿ ದೀಪಾವಳಿಗೆ ಅಳಿಯ ಮಾವನ ಮನೆಗೆ ಹೋದ ಅಂತ ಯಾರಿಗಾದರೂ ಹೇಳಿದರೆ ಹುಬ್ಬೇರಿಸುತ್ತಾರೆ. ಈಗೀಗ ಅಂಥಾ ಪ್ರಸಂಗಗಳೇ ಬರೋದಿಲ್ಲ. ಅಸಲಿಗೆ ಈಗ ಹುಡುಗರು ಹಬ್ಬಕ್ಕೆ ಆಸಕ್ತಿ ತೋರೋದೂ ಇಲ್ಲ. ತೋರಿದರೂ ಮಾವನ ಮನೆಗೆ ಹೋಗೋದು ಅಷ್ಟರಲ್ಲೇ ಇದೆ. ಹೋದರೂ ಪಟಾಕಿ ಹೊಡೆಯೋ ಮಾತೇ ಇಲ್ಲ. ಈಗೀಗ ಸಾಮಾನ್ಯವಾಗಿ ಅಳಿಯ ಮಾವ ಇಬ್ಬರ ಮನೆಯೂ ಒಂದೇ ಊರಿನಲ್ಲಿ, ಒಂದೇ ಬಡಾವಣೆಯಲ್ಲಿ ಇರುವ ಸಂಭವವೇ ಹೆಚ್ಚಿರುವಾಗ ಇನ್ನು ಮಾವನ ಮನೆಗೆ ಹೋಗೋದು ಎಣ್ಣೆ ನೀರು ಹಾಕಿಸಿಕೊಳ್ಳೋದು ಇವೆಲ್ಲ ಚರಿತ್ರೆಯ ಪುಟಗಳು. ಆದರೆ ಮದುವೆಯಾಗಿ ಐದು ವರ್ಷಗಳಾಗಿದ್ದರೂ ಸೋಮುಗೆ ಮಾವನ ಮನೆಯಿಂದ ದೀಪಾವಳಿಗೆ ಬುಲಾವ್ ಬಂದಾಗ ಅಚ್ಚರಿಯಿಂದಲೇ ಹೋದ. ಅಲ್ಲಿ ನೋಡಿದರೆ ಅತ್ತೆ, ನಾದಿನಿ, ಹೆಂಡತಿ ಎಲ್ಲಾ ಒಂದೊಂದು ಕಾರಣ ಕೊಟ್ಟು ಹಾಸಿಗೆ ಹಿಡಿದಿದ್ದರು. ಮಾವ, ಅಳಿಯಂದಿರೇ ಹೇಗೂ ಸೋಮಿ ಹೇಳ್ತಿರ್ತಾಳೆ ನಿಮ್ಮ ಕೈ ಅಡಿಗೆ ಚಂದ ಅಂತ ಅದಕ್ಕೆ ನೀವೇ ಅಡಿಗೆ ಮಾಡಿಬಿಡಿ ಎಂದರು. ಒಂದು ಗಂಟೆ ನನ್ನನ್ನು ಯಾರೂ ತೊಂದರೆ ಮಾಡಬೇಡಿ ಅಂತ ಸೋಮು ಅಡಿಗೆ ಮನೆಗೆ ಹೋಗಿ ಅಲ್ಲಿಂದಲೇ ಹೋಟೆಲಿಗೆ ಫೋನ್ ಮಾಡಿ ಹಬ್ಬದ ಊಟ ತರಿಸಿಬಿಟ್ಟ. ಎಲ್ಲರೂ ಚಪ್ಪರಿಸಿಕೊಂಡು ಬಾರಿಸಿದ್ದೇ ಬಾರಿಸಿದ್ದು. ಸ್ವಲ್ಪ ಹೊತ್ತಾದ ಮೇಲೆ ಮಾವ ಟಿವಿ ಮೇಲೆ ಸಾವಿರ ರೂಪಾಯಿ ನೋಟು ಇಟ್ಟಿದ್ದೆ ಯಾರಾದರೂ ನೋಡಿದಿರಾ ಅಂತ ಕೇಳಿದಾಗ
ಸೋಮು ನಾನು ನೋಡಿದೆ ಅದನ್ನೇ ಅಲ್ಲವೇ ಈಗ ನೀವೆಲ್ಲಾ ಚಪ್ಪರಿಸಿಕೊಂಡು ಬಾರಿಸಿದ್ದು ಅಂದಾಗ ಮನೆಯಲ್ಲಿ ಆಟಂ ಬಾಂಬ್ ಹೊಡೆದ ಅನುಭವ ಎಲ್ಲರಿಗೂ ಆಯಿತು

*– ಸುಕೇಶವ*

# ಐ.ಟಿ. ಕನ್ಸಲ್ಟಂಟ್!

**- ವಿದ್ಯಾ ವಿ. ಹಾಲಭಾವಿ**

**ಕಾ**ಲೇಜ್ ಮೆಟ್ಟಿಲು ಹತ್ತಿ ಡಿಗ್ರೀ ಪಡೆದವರು ತಾವೇ ಜಾಣರು ಅಂತಾ ಜಂಬ ಪಡುತ್ತಾರೆ. ಆದರೆ ಹೆಚ್ಚು ಓದದೇ ಇದ್ದರೂ ಜಾಣ್ಮೆಯನ್ನು ಹೊಂದಿರುವ ಕುರುಬನೊಬ್ಬನ ಕಥೆಯಿದು..

ಒಂದು ಸಲ ಕುರುಬನೊಬ್ಬ ನಿರ್ಜನ ರಸ್ತೆಯೊಂದರ ಪಕ್ಕದಲ್ಲಿ ತನ್ನ ಪಾಡಿಗೆ ತಾನು ಯಾವುದೋ ಹಾಡನ್ನು ಗುನುಗುತ್ತಾ ಕುರಿಗಳನ್ನು ಮೇಯಿಸುತ್ತಿದ್ದ. ಆಗ ಅಲ್ಲಿಗೆ ಅನಿರೀಕ್ಷಿತವಾಗಿ ಲಕ ಲಕ ಹೊಳೆಯುತ್ತಿರುವ ಹೊಚ್ಚ ಹೊಸದಾದ ಬೆನ್ಜ್ ಕಾರೊಂದು ಬಂದು ನಿಂತಿತು. ರೇಮಂಡ್ ಸೂಟ್, ರಿಬಾಕ್ ಶೂಸ್, ರೇಬಾನ್ ಕನ್ನಡಕ, ರೊಲೆಕ್ಸ್ ವಾಚ್, ಬೆಲೆ ಬಾಳುವ ಟೈ ಧರಿಸಿದ ಯುವಕನೊಬ್ಬ ಕಾರಿನಿಂದ ಇಳಿದು, ಕುರುಬನ ಹತ್ತಿರ ಬಂದು ''ನಿನ್ನ ಬಳಿ ಇರುವ ಕುರಿಗಳು ಎಷ್ಟೆಂದು ಹೇಳುತ್ತೇನೆ. ಸರಿಯಾಗಿ ಹೇಳಿದರೆ ಒಂದನ್ನು ನನಗೆ ಕೊಡುವೆಯಾ?'' ಎಂದು ಕೇಳಿದ. ಆಗ ಕುರುಬ ಅವನನ್ನು ಮೇಲಿಂದ ಕೆಳತನಕ ನೋಡಿ, ಮತ್ತೊಮ್ಮೆ ತನ್ನ ಕುರಿಮಂದೆಯನ್ನು ನೋಡಿ ''ಸರಿ'' ಎಂದು ಉತ್ತರಿಸಿದ.

ಆಗ ಆ ತರುಣ ತನ್ನ ಕಾರನ್ನು ಪಾರ್ಕ್ ಮಾಡಿ ಬಂದು ತನ್ನ ಲ್ಯಾಪ್ ಟಾಪ್‌ನ್ನು ಮೊಬೈಲ್ ಫ್ಯಾಕ್ಸ್‌ಗೆ ಕನೆಕ್ಟ್ ಮಾಡಿ ನ್ಯಾಸಾ ವೆಬ್‌ಸ್ಟರ್‌ಗೆ ಎಂಟರ್ ಆಗಿ ತನ್ನ ಜಿ.ಪಿ.ಎಸ್. ಸಾಧನದಿಂದ ಆ ಭೂಮಿಯನ್ನ ಸ್ಕ್ಯಾನ್ ಮಾಡಿದ. ಡಾಟಾ ಬೇಸ್‌ನಲ್ಲಿ ಏನೇನೊ ಲೆಕ್ಕಚಾರ ಮಾಡಿದ ಮೇಲೆ ಸುಮಾರು 150 ಪುಟಗಳಷ್ಟು ವರದಿಯನ್ನು ತನ್ನ ಹೈಟೆಕ್ ಮಿನಿ ಪ್ರಿಂಟರ್‌ನಿಂದ ಪ್ರಿಂಟ್ ಮಾಡಿದ. ನಂತರ ಕುರುಬನತ್ತ ತಿರುಗಿ ''ನಿನ್ನ ಹತ್ತಿರ ಕರೆಕ್ಟಾಗಿ 586 ಕುರಿಗಳಿವೆ ಅಲ್ಲವೇ?'' ಎಂದು ಹೇಳಿದ. ಆಗ ಕುರುಬ ಸಂತೋಷಗೊಂಡು ''ಸರಿಯಾಗಿ ಹೇಳಿರುವೆ, ಕೊಟ್ಟ ಮಾತಿನಂತೆ, ನಾನು ಕುರಿಯನ್ನು ಕೊಡುತ್ತೇನೆ ನೀನೇ ತೆಗೆದುಕೋ'' ಎಂದ.

ಆ ಯುವಕ ತನಗೆ ಬೇಕಾದ್ದನ್ನ ಹುಡುಕಿ ಆರಿಸಿ ತೆಗೆದುಕೊಂಡು ತನ್ನ ಕಾರಿನ ಹಿಂದೆ ಇರಿಸಿಕೊಂಡನು. ಆ ನಂತರ ಕುರುಬ ಅವನತ್ತ ನೋಡುತ್ತಾ ''ನಾನು ನಿನ್ನ ಉದ್ಯೋಗವನ್ನ ಊಹಿಸಿ ಸರಿಯಾಗಿ ಹೇಳಿದರೆ, ನೀನು ತೆಗೆದುಕೊಂಡಿರುವ ನನ್ನ ಪ್ರಾಣಿಯನ್ನು ನನಗೆ ವಾಪಾಸ್ ಕೊಡುವೆಯಾ?'' ಎಂದು ಕೇಳಿದ. ನನ್ನ ಪ್ರೊಫೇಷನ್ ಬಗ್ಗೆ ಈ ಕುರುಬನಿಗೇನು ಗೊತ್ತಾದೀತು ಎಂಬ ಮನೋಭಾವದಿಂದ ಆ ತರುಣ ''ಓಹೋ ಆಗಲಿ ಅದಕ್ಕೇನಂತೆ'' ಎಂದು ಹೇಳಿದ. ಕುರುಬನು ''ನೀನು ಐ.ಟಿ. ಕನ್ಸಲ್ಟಂಟ್ ಆಗಿರುವೆ'' ಎಂದುತ್ತರಿಸಿದ. ಕುರುಬನ ಉತ್ತರದಿಂದ ಆಶ್ಚರ್ಯ ಚಕಿತನಾದ ತರುಣನು ''ಅರೆ! ಇದು ನಿನಗೆ ಹೇಗೆ ಗೊತ್ತಾಯಿತು?'' ಎಂದು ಕೇಳಿದ. ಆಗ ಕುರುಬ ''ಇದು ತುಂಬಾ ಸುಲಭ. ಮೊದಲನೆಯದಾಗಿ ಕರೆಯದೇ ನೀನು ಇಲ್ಲಿಗೆ ಬಂದೆ. ಎರಡನೆಯದಾಗಿ ನನ್ನ ಬಳಿ ಕುರಿಗಳೆಷ್ಟಿದೆ ಎಂದು ನನಗೆ ಗೊತ್ತಿದ್ದ ವಿಷಯವನ್ನೇ ಹೇಳಲು ನೀನು ಚಾರ್ಜ್ ಮಾಡಿದೆ. ಮೂರನೆಯದಾಗಿ ನನ್ನ ವ್ಯವಹಾರದ ಬಗ್ಗೆ ನಿನಗೇನೂ ಗೊತ್ತಿಲ್ಲ. ನೀನು, ಕುರಿಯೆಂದು ತಪ್ಪು ತಿಳಿದುಕೊಂಡು ಕಾರಿನಲ್ಲಿರಿಸಿಕೊಂಡ ನನ್ನ ನಾಯಿಯನ್ನು ವಾಪಾಸ್ ಕೊಡು !!!!!!!!''

ಶುಂಠಿ ಕಷಾಯ

# ಸುಖ ಅರಸುವ ಧೀರರು

**- ಬೇಲೂರು ರಾಮಮೂರ್ತಿ**

ಶ್ರೀನಿಧಿ ಮತ್ತು ಶ್ರೀಪತಿ ಇಬ್ಬರೂ ಹತ್ತಿರದ ಸ್ನೇಹಿತರು. ಒಂದೇ ಊರಿನಲ್ಲಿ ಹುಟ್ಟಿದವರು, ಒಂದೇ ಬೀದಿಯಲ್ಲಿ ವಾಸವಿದ್ದವರು, ಒಂದೇ ಶಾಲೆಗೆ ಹೋದವರು. ಒಂದು ಹಂತದ ಓದು ಮುಗಿದ ಮೇಲೆ ಅಥವಾ ತಂದೆಗೆ ವರ್ಗ ಆದರೆ ಅಗಲುವುದು ಅನಿವಾರ್ಯವಾಗೋ ಹಾಗೆ ಇಬ್ಬರೂ ಬೇರೆ ಬೇರೆ ಊರಿಗೆ ಹೋದರು. ಹೆಚ್ಚಿನ ಸಂಪರ್ಕ ಇರಲಿಲ್ಲ. ಮುಂದೆ ಅನೇಕ ಸಂದರ್ಭಗಳು ಬಂದು ಅವರು ಮತ್ತೆ ಆತ್ಮೀಯರಾಗೋ ಅವಕಾಶಗಳೂ ಬರುತ್ತಿತ್ತು. ಎಷ್ಟೋ ಸಾರಿ ಸುಮಾರು ಐದಾರು ವರ್ಷಗಳು ಅವರು ಭೇಟಿಯಾಗೋಕೆ, ಮಾತಾಡೋಕೆ ಆಗುತ್ತಲೇ ಇರಲಿಲ್ಲ. ಈಗ ಅಂದರೆ ಒಂದು ವಾರದ ಹಿಂದೆ ಇಬ್ಬರೂ ಭೇಟಿಯಾದರು. ಸುಮಾರು ಹದಿನೈದು ವರ್ಷಗಳ ನಂತರ ಭೇಟಿ ಮಾಡುತ್ತಿದ್ದಾರೆ. ಶ್ರೀನಿಧಿ ಮತ್ತು ಶ್ರೀಪತಿ ಇಬ್ಬರಿಗೂ ಈಗ ಎಪ್ಪತ್ತರ ಹತ್ತಿರ ಹತ್ತಿರ. ಮಾತಾಡೋದು ತುಂಬಾ ಇತ್ತು. ಹೆಂಡತಿ ಕೊಟ್ಟ ತಿಂಡಿ ತಿಂದು ಶ್ರೀನಿಧಿ ''ಹೇಳಪ್ಪಾ ಇನ್ನೇನು ಸಮಾಚಾರ'' ಅಂತು ಶ್ರೀಪತಿ ಕಡೆ ನೋಡಿದ. ಶ್ರೀಪತಿ ಒಂದು ಸಾರಿ ಶ್ರೀನಿಯ ಕಡೆಗೂ ಅವನ ಮನೆಯ ಕಡೆಗೂ ಹೆಂಡತಿಯ ಕಡೆಗೂ ನೋಡಿದ. ಗೆಳೆಯರಿಬ್ಬರೂ ತುಂಬಾ ಹೊತ್ತು ಮಾತಾಡಿದರು. ಕಷ್ಟ ಸುಖ ಹಂಚಿಕೊಂಡರು. ಮಧ್ಯಾಹ್ನ ಊಟ ಆಗಿ ಒಂದು ನಿದ್ದೆ ಆದ ಮೇಲೆ ತನ್ನ ಮನಸ್ಸಿನಲ್ಲಿ ಕೊರೆಯುತ್ತಿದ್ದ ವಿಷಯವೊಂದನ್ನು ಗೆಳೆಯನ ಎದುರು ಹೇಳಲೇಬೇಕು ಅಂತ ಶ್ರೀಪತಿಗೆ ಎನಿಸಿತು.

ಶ್ರೀಪತಿ ''ಸುಖ ಎಂದರೇನು'' ಅಂತ ಶ್ರೀನಿಧಿಯನ್ನು ಕೇಳಿದ. ಅದಕ್ಕೆ ಶ್ರೀನಿಧಿ ನಕ್ಕ. ''ನಾವೆಲ್ಲಾ ತಪ್ಪು ಮಾಡೋದು ಅಲ್ಲೇ ನೋಡು. ಸುಖ ಅನ್ನೋ ಒಂದು ವಸ್ತು ಇದೆ ಅಂತ ಅದನ್ನು ಹುಡುಕಿಕೊಂಡು ಪರದಾಡ್ತಿರ್ತೀವಿ. ಹಾಗೆ ನೋಡಿದರೆ ಸುಖ ಅನ್ನೋ ವಸ್ತುವಾಗಲೀ, ಸ್ಥಿತಿಯಾಗಲೀ ಇಲ್ಲವೇ ಇಲ್ಲ. ಅದು ಕೇವಲ ನಮ್ಮ ಭ್ರಮೆ ಅಷ್ಟೆ. ಮತ್ತು ಮನಸ್ಸಿನ ಭಾವನೆಯೂ ಅದೇ. ಸುಖ ಅಂದುಕೊಂಡರೆ ಸುಖ, ದುಃಖ ಅಂದುಕೊಂಡರೆ ದುಃಖ'' ಅಂತ ಹೇಳಿದ ಶ್ರೀನಿಧಿಗೆ ಈ ನನ್ನ ಗೆಳೆಯ ಶ್ರೀಪತಿಗೆ ಜೀವನದಲ್ಲಿ ಏನೊ ಕೊರತೆ ಆಗಿರಬೇಕು ಅದಕ್ಕೇ ಈ ಪ್ರಶ್ನೆ ಕೇಳ್ತಿದಾನೆ ಅನಿಸಿತು. ಕೆಲವು ಕಾಲ ಮೌನ. ಮತ್ತೆ ಶ್ರೀಪತಿ ಗೆಳೆಯ ಶ್ರೀನಿಧಿಯ ಕಡೆ ನೋಡಿ ''ನಿನಗೆ ಇಷ್ಟು ವರ್ಷಗಳ ಜೀವನದಲ್ಲಿ ತೊಂದರೆಗಳು, ತಾಪತ್ರಯಗಳು, ಸಂಕಟಗಳು ಬಂದಾಗ ಏನು ಮಾಡಿದೀಯ, ಹೇಗೆ ನಿವಾರಣೆ ಮಾಡಿಕೊಂಡಿದೀಯ, ಮತ್ತೆ ನಿನ್ನ ಈ ಸುಖ ಜೀವನಕ್ಕೆ ಪ್ರಮುಖ ಸಾಧನ ಯಾವುದು'' ಅಂತ ಕೇಳಿದ.

ಒಂದು ಉಸಿರು ಬಿಟ್ಟ ಶ್ರೀನಿಧಿ ''ಕಷ್ಟಗಳು ಮನುಷ್ಯನಿಗೆ ಬರದೇ ಮರಕ್ಕೆ ಬರುತ್ವೇ ಅಂತ ಗಾದೆ ಮಾತು ಕೇಳಿಲ್ವೇ. ಅದು ಕಷ್ಟವೂ ಅಲ್ಲ ಸುಖವೂ ಅಲ್ಲ. ಜೀವನದಲ್ಲಿ ಆಗಾಗ

ಬರುವ ಬದಲಾವಣೆಗಳು ಅಷ್ಟೆ. ಎಲ್ಲವನ್ನೂ ಒಂದೇ ರೀತಿ ತಗೊಂಡರೆ ಕಷ್ಟ ಸುಖ ಅಂತ ಬೇಧ ಮಾಡೋ ಸಂದರ್ಭವೇ ಬರಲ್ಲ. ಇಷ್ಟು ವರ್ಷಗಳ ನನ್ನ ಬದುಕಿನಲ್ಲಿ ನನಗೆ ಒಂದು ವೇಳೆ ಆಗಿರುವ ಬದಲಾವಣೆ ಕಷ್ಟ ತಂದಿದೆ ಅನಿಸಿದರೆ, ಏನು ಮಾಡಬೇಕು ಅಂತ ಅರ್ಥ ಆಗದೇ ಹೋದರೆ ನಾನು ನನ್ನ ಮೇಷ್ಟ್ರನ್ನ ಕೇಳ್ತೀನಿ. ಅವರು ಎಲ್ಲಕ್ಕೂ ಪರಿಹಾರ ಹೇಳ್ತಾರೆ'' ಅಂದ. ಅಂಥಾ ಒಬ್ಬರು ಮೇಷ್ಟ್ರು ಎಲ್ಲರಿಗೂ ಇರೋದು ಸಾಧ್ಯವೇ ಅಂದುಕೊಂಡ ಶ್ರೀಪತಿ ''ನಿನಗೇ ಇಷ್ಟು ವರ್ಷ ವಯಸ್ಸಾಯ್ತು ಇನ್ನೂ ನಿನ್ನ ಮೇಷ್ಟ್ರು ಇದಾರಾ ಅಥವಾ ನೀನು ಅವರ ಫೋಟೋ ಮುಂದೆ ನಿಂತು ಮಾತಾಡ್ತೀಯ'' ಅಂತ ಕೇಳಿದ. ಗೆಳೆಯನ ಮಾತು ಕೇಳಿ ಶ್ರೀಪತಿ ನಕ್ಕ ನಂತರ ಹೇಳಿದ. ''ನೋಡು ಪ್ರತಿಯೊಬ್ಬ ವ್ಯಕ್ತಿಗೂ ಒಬ್ಬ ಗುರು ಇದ್ದೇ ಇರ್ತಾರೆ ಅನ್ನೋ ಮಾತು ಸತ್ಯ ತಾನೇ. ಗುರುವಿಲ್ಲದೇ ನಾವು ನಾಲ್ಕಕ್ಷರ ಕೂಡಾ ಕಲಿಯೋಕೆ ಆಗಲ್ಲ ಅಲ್ವಾ. ಹಾಗೇ ನಮ್ಮ ಬದುಕನ್ನು ಸದಾ ತಿದ್ದುವ ಗುರು ಕೂಡಾ ಇರ್ತಾರೆ. ನಾವು ಅವನನ್ನು ಗುರುತಿಸಬೇಕು ಅಷ್ಟೆ. ನಾನು ಹೇಳಿದ ಗುರು ಯಾರೆಂದುಕೊಂಡೆ ಅದು ಬೇರೆ ಯಾರೂ ಅಲ್ಲ ನಮ್ಮ ಅಂತರಾತ್ಮ. ನನಗೆ ಬದುಕಿನಲ್ಲಿ ಏನೇ ಬದಲಾವಣೆ ಬಂದರೂ, ನಾನು ಅಂತರಾತ್ಮದೊಂದಿಗೆ ಅರೆಕ್ಷಣ ಇದು ಸರಿಯೇ, ಇದು ತಪ್ಪೇ ನನ್ನ ನಡೆ ಸರಿಯೇ ನನ್ನ ನಡೆ ತಪ್ಪೇ ಅಂತ ಕೇಳಿಕೊಳ್ತೀನಿ. ಉತ್ತರ ಅಲ್ಲೇ ಸಿಕ್ಕಿಬಿಡುತ್ತೆ. ಈ ಮಾತನ್ನ ವೇದಾಂತ ಅಂತ ಅಂದ್ಕೊಬೇಡ. ಪ್ರತಿಯೊಬ್ಬರೂ ತಮ್ಮ ತಮ್ಮ ಅಂತರಾತ್ಮವನ್ನು ಅರಿಯೋ ಪ್ರಯತ್ನ ಮಾಡಿ, ಏನೇ ಕೆಲಸ ಮಾಡೋಕೂ ಮೊದಲು ನಾನು ಮಾಡ್ತಿರೋದು ಸರಿಯೇ ತಪ್ಪೇ, ಇದು ನನಗೆ ಬೇಕೇ ಬೇಡವೇ, ನನ್ನ ಮಾತು ಸರಿಯೇ ತಪ್ಪೇ, ಅಂತ ಅರೆಕ್ಷಣ ಯೋಚಿಸಿದರೆ ಸಾಕು ಎಲ್ಲವೂ ಸರಿಯಾಗುತ್ತೆ. ನಾವೆಲ್ಲಾ ಮಾಡೋ ಮೊದಲ ತಪ್ಪು ಅಂದ್ರೆ, ಅವರು ಸರಿಯಿಲ್ಲ ಇವರು ಸರಿಯಿಲ್ಲ ಅಂತ ಗೊಣಗಿಕೊಂಡೇ ಓಡಾಡ್ತಿರ್ತೀವಿಯೇ ಹೊರತು, ನಾವು ಸರಿಯಾಗಿದಿವೇಯೇ ಅಂತ ಯೋಚನೆ ಮಾಡೋದೇ ಇಲ್ಲ.'' ಇಷ್ಟು ಮಾತಾಡಿ ಯಾಕೋ ವಿಪರೀತ ಮಾತಾಡಿಬಿಟ್ಟೆ ಅಂತ ಶ್ರೀನಿಧಿ ಗೆಳೆಯ ಶ್ರೀಪತಿ ಕಡೆ ನೋಡಿದ. ಶ್ರೀಪತಿ ಗೆಳೆಯನ ಮಾತುಗಳನ್ನು ಅರಗಿಸಿಕೊಳ್ಳುತ್ತಲೇ ಇದ್ದ.

ಕೆಲವು ಕಾಲ ಅವರಿಬ್ಬರ ನಡುವೆ ಮೌನ. ಶ್ರೀಪತಿ ಟೀಪಾಯ್ ಮೇಲಿದ್ದ ಹೂಜಿಯಿಂದ ಲೋಟಕ್ಕೆ ನೀರು ಬಗ್ಗಿಸಿಕೊಂಡು ಕುಡಿದ. ಹೆಗಲ ಮೇಲಿನ ಚೌಕದಿಂದ ಬಾಯಿ ಒರೆಸಿಕೊಂಡ. ಆತ್ಮೀಯತೆಯಿಂದ ಗೆಳೆಯನ ಹೆಗಲ ಮೇಲೆ ಕೈ ಹಾಕಿ ಶ್ರೀನಿಧಿ ''ನಿನಗೆ ಏನಾದರೂ ಸಮಸ್ಯೆ ಇದ್ದರೆ, ಅದನ್ನು ನನ್ನ ಬಳಿ ಹೇಳ್ಕೊಬಹುದು ಅನಿಸಿದರೆ ಹೇಳ್ಕೊ'' ಅಂದ. ಶ್ರೀನಿಧಿ ಗೆಳೆಯನ ಕಡೆ ನೋಡಿ ''ಈಗ ನನ್ನ ಸ್ಥಿತಿ ಹೇಗಿದೆ ಎಂದರೆ, ಒಂದು ಕೈನಲ್ಲಿ ಪ್ರಶ್ನೆ ಪತ್ರಿಕೆ ಇದೆ ಇನ್ನೊಂದು ಕೈನಲ್ಲಿ ಎಲ್ಲ ಪ್ರಶ್ನೆಗಳಿಗೂ ಉತ್ತರ ಇರುವ ಗೈಡ್ ಇದೆ. ಹಾಗಿದ್ದೂ ಉತ್ತರಕ್ಕೆ ಪರದಾಡುವವನ ಸ್ಥಿತಿ, ಉತ್ತರಕ್ಕೆ ಎಲ್ಲೆಲ್ಲೋ ಹುಡುಕಾಡುವ ಸ್ಥಿತಿ ಆಗಿದೆ. ಸಮಸ್ಯೆ ಏನೋ ಇದೆ. ಆದರೆ ನಿನ್ನ ಮಾತು ಕೇಳಿದ ಮೇಲೆ

ಅದನ್ನು ಸಮಸ್ಯೆ ಅನ್ನಬಾರದು ಜೀವನದ ಒಂದು ಬದಲಾವಣೆ ಅನ್ನಬೇಕು ಅನಿಸಿದೆ. ಹಾಗೇ ಆ ಬದಲಾವಣೆಯನ್ನು ಹೇಗೆ ಎದುರಿಸಬೇಕು ಅನ್ನೋದಕ್ಕೆ ನಾನೂ ನನ್ನ ಮೇಷ್ಟ್ರನ್ನೇ ಕೇಳ್ತೀನಿ. ಇಷ್ಟು ದಿವಸ ಮೇಷ್ಟ್ರು ಇರೋದೇ ನನಗೆ ಮರೆತುಹೋಗಿತ್ತು. ಎಲ್ಲ ಆತಂಕಗಳಿಗೂ ಸರಿಯಾದ ದಾರಿ ತೋರೋರು ಈ ಮೇಷ್ಟ್ರೇ'' ಅಂದ.

ಶ್ರೀಪತಿ ಹೊರಟು ಹೋದ ಎಷ್ಟೋ ಹೊತ್ತಿನ ನಂತರ ಹೆಂಡತಿ ಬಂದು ''ಏನಂತೆ ನಿಮ್ಮ ಸ್ನೇಹಿತರದ್ದು ಏನೋ ಬೇಜಾರು ಮಾಡ್ಕೊಂಡು ಬಂದ ಹಾಗಿತ್ತು ನೀವು ಅವರಿಗೆ ಏನೋ ಉಪದೇಶ ಕೊಡ್ತಾ ಇರೋ ಹಾಗಿತ್ತು'' ಅಂತ ಕೇಳಿದರು. ಶ್ರೀನಿಧಿ ನಕ್ಕು ''ಏನೂ ಇಲ್ಲ ಕಣೆ, ನನ್ನ ಹತ್ರ ಬರೋವಾಗ ಬೆಟ್ಟ ಹೊತ್ಕೊಂಡು ಬಂದಿದ್ದ, ಎಲ್ಲಾನೂ ಇಲ್ಲೇ ಇಳಿಸಿ ಹೆಗಲು ಹಗುರ ಮಾಡ್ಕೊಂಡು ಹೋದ'' ಅಂದು ಸಂಕ್ಷಿಪ್ತವಾಗಿ ವಿವರಿಸಿದರು. ಎದ್ದು ತಮ್ಮ ಕೆಲಸದತ್ತ ಹೋಗುವಾಗ ಶ್ರೀನಿಧಿ ಒಂದೆರಡು ದಿನ ಬಿಟ್ಟು ಶ್ರೀಪತಿ ಮನೆಗೆ ಹೋಗಿ ಏನಾದರೂ ಸಮಸ್ಯೆ ಇದೆಯೇ ಅಂತ ವಿಚಾರಿಸಿ ಬರಬೇಕು ಅಂದುಕೊಂಡರು.

---

## ಹೊಸ ರೈಲುಗಳು

**ಮೋದಿ ಎಕ್ಸ್‌ಪ್ರೆಸ್:** ಕೊನೆ ನಿಲ್ದಾಣ ಮುಟ್ಟುವವರೆಗೂ ಎಲ್ಲೂ ನಿಲ್ಲದು.

**ಮನಮೋಹನ್ ಎಕ್ಸಪ್ರೆಸ್:** ನಿಶ್ಯಬ್ದ ರೈಲು – ಇದೊಂದೇ.

**ಅಮಿತ್ ಷಾ ಎಕ್ಸ್‌ಪ್ರೆಸ್:** ದೆಹಲಿ ಹೊರತುಪಡಿಸಿ ಎಲ್ಲೆಡೆ ಓಡಾಡುತ್ತದೆ.

**ಕೇಜ್ರಿವಾಲ್ ಎಕ್ಸ್‌ಪ್ರೆಸ್:** ಹೊರಡುವುದು ಗ್ಯಾರಂಟಿ ಆದರೆ ಗುರಿ ಮುಟ್ಟುವ ಖಾತರಿ ಇಲ್ಲ... ಡ್ರೈವರ್ ನಿರ್ಧರಿಸಿದರೆ ಮಧ್ಯದಲ್ಲೇ ನಿಂತು ಹೋಗುವ ಸಾಧ್ಯತೆಗಳಿವೆ.

**ಏಕ್ತಾ ಕಪೂರ್ ಎಕ್ಸ್‌ಪ್ರೆಸ್:** ಒಂದೇ ಪ್ಲಾಟ್‌ಫಾರ್ಮ್‌ಗೆ ಮೂರು ಸಲ ಬರುತ್ತದೆ – ಅದೂ ಸ್ಲೋ ಮೋಷನ್‌ನಲ್ಲಿ.

**ಆಮಿರ್ ಖಾನ್ ಎಕ್ಸ್‌ಪ್ರೆಸ್:** ವರ್ಷಕ್ಕೊಂದು ಸಲ ಓಡುತ್ತದೆ. ಬೇಕಾದ್ದವರನ್ನು ಮಾತ್ರ ಹತ್ತಿಸಿಕೊಳ್ಳುತ್ತದೆ.

**ಸಲ್ಮಾನ್ ಖಾನ್ ಎಕ್ಸ್‌ಪ್ರೆಸ್:** ಫುಟ್‌ಪಾತ್ ಮೇಲೆ ಸಹ ಓಡುತ್ತದೆ.

**ಧೋನಿ ಎಕ್ಸ್‌ಪ್ರೆಸ್:** ಶೇ. 95 ಪ್ರಯಾಣ ತಾಸಿಗೆ 10 ಕಿಮೀ ವೇಗದಲ್ಲಿ, ಉಳಿದಿದ್ದು ತಾಸಿಗೆ 400 ಕಿಮೀ ವೇಗದಲ್ಲಿ.

**ಕೊನೆಯದಾಗಿ,**

**ರಜನಿಕಾಂತ್ ಎಕ್ಸ್‌ಪ್ರೆಸ್:** ಒಂದು ನಿಲ್ದಾಣದಲ್ಲಿ ನಿಂತಿರುತ್ತದೆ ನಿಲ್ದಾಣಗಳು ಅವೇ ಬಂದು ಹೋಗುತ್ತವೆ.

## ಅಪರಂಜಿಗೆ ಹಾರ್ದಿಕ ಶುಭಾಶಯಗಳು

**ಡಾ. ಎಚ್.ಎಸ್. ಮುರಳಿ**

ನೇತ್ರ ವೈದ್ಯರು

**ದಿ ಐ ಕ್ಲಿನಿಕ್**

ಅಣ್ಣಯ್ಯ ಕಾಂಪ್ಲೆಕ್ಸ್

ಹೊಸಳ್ಳಿ ರಸ್ತೆ, ಮಂಡ್ಯ

ಫೋನ್: 224834

ಸಮಯ: ಬೆಳಗ್ಗೆ 9 ರಿಂದ 1 ಗಂಟೆ

**ಮಾಲಸ ಐ ಕ್ಲಿನಿಕ್**

ಬಸ್ ಸ್ಟಾಂಡ್ ಸರ್ಕಲ್

ಚಾಮುಂಡೀಪುರಂ

ಮೈಸೂರು 570 004

ಫೋನ್: 2332225

ಸಮಯ: ಸಂಜೆ 5 ರಿಂದ 8 ಗಂಟೆ

ಮೊಬೈಲ್: 94487 40093

# ಒಬ್ಬರಂತೆ ಇನ್ನೊಬ್ಬರೂ ಇದ್ದಾಗ

**- ಎಸ್.ಎನ್. ಸುಬ್ಬರಾವ್**

ಏನು ಪರಮಾತ್ಮನ ಸೃಷ್ಟಿ, ಕೋಟಿ ಕೋಟಿ ಜನರಿದ್ದರೂ, ಒಬ್ಬರಂತೆ ಇನ್ನೊಬ್ಬರಿರುವುದಿಲ್ಲ. ತಂದೆ, ತಾಯಿಯಂತೆ ಮಕ್ಕಳೇ ಇರುವುದಿಲ್ಲ. ಅವಳಿ-ಜವಳಿಗಳೇ ಕೆಲವು ಸಲ ಒಬ್ಬರಂತೆ ಇನ್ನೊಬ್ಬರು ಕಾಣುವುದಿಲ್ಲ. ಆದರೂ ಕೂಡ ದೂರದಿಂದಲೋ, ಹತ್ತಿರದಿಂದಲೋ ನೋಡಿದಾಗ ಒಬ್ಬರನ್ನೊಬ್ಬರು ಹೋಲುವುದನ್ನು ನೋಡಿದ್ದೇವೆ. ಕೆಲವು ಸಲ ನಡಿಗೆ, ಕೆಲವು ಸಲ ಮುಖ, ಕೆಲವು ಸರಿ ಹಿಂದಿನಿಂದ ನೋಡಿದಾಗ, ಬೆನ್ನು, ನಡಿಗೆ ಮುಂತಾದವು ಅದೇ ವಯಸ್ಸಿನ ಇನ್ನೊಬ್ಬರನ್ನು ಹೋಲಬಹುದು.

ಅದಕ್ಕೆ ಸಾಮಾನ್ಯವಾಗಿ ನಮ್ಮ ಮಕ್ಕಳೋ, ಸೊಸೆಯವರೋ, ಮಗುವನ್ನು ಹೆತ್ತಾಗ ನಾವು ನಮ್ಮ ಕಡೆಯವರಿಗೆ ತಿಳಿಸಿದರೆ, ಅವರು ತಕ್ಷಣ ಕೇಳುವುದು, ''ಮಗು ಯಾರಂತೆ ಕಾಣುತ್ತೆ - ತಂದೆಯಂತೋ, ತಾಯಿಯಂತೋ'' ನಾನು ಹೇಳ್ತಿರೋದು ಒಬ್ಬರನ್ನು ಇನ್ನೊಬ್ಬರು ನಡಿಗೆಯಲ್ಲೋ, ಮಾತಿನಲ್ಲೋ, ಹೋಲಿಸಿಕೊಂಡರೆ ಅಪಾಯಗಳೂ ಉಂಟು ಅಂತ.

1964ರ ಸುಮಾರಿನಲ್ಲಿ ಬಸವನಗುಡಿಯಲ್ಲಿದ್ದೆ. ಕಾರ್ಖಾನೆಯಿಂದ ಬಂದ ಮೇಲೆ, ಗವೀಪುರಂನಲ್ಲಿ ಇರುವ ಕೋಹಿನೂರ್ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ಕೊಕ್ಕೊ ಆಡುತ್ತಿದ್ದೆ. ಒಂದು ದಿನ ಆಟ ಮುಗಿಸಿ ಸಾಯಂಕಾಲ ಸುಮಾರು 6.30ರ ಹೊತ್ತಿಗೆ ರಂಗರಾವ್ ರಸ್ತೆಯಲ್ಲಿ ಪ್ರೊ.ವಿ.ಸಿ.ಯವರ ಮನೆಯ ಕಡೆ ಹೊರಟಿದ್ದೆ. ಅವರ ಮಗ ಮತ್ತು ನಾನೂ ಸ್ನೇಹಿತರಾಗಿದ್ದೆವು.

ಸ್ವಲ್ಪ ದೂರ ಹೋಗಿದ್ದೀನಿ. ನನ್ನ ಬೆನ್ನಿನ ಮೇಲೆ ಯಾರೋ ಬಾಸುಂಡೆ ಬರುವಂತೆ ಗುದ್ದಿದ್ದೂ ಅಲ್ಲದೇ, ಎಡ ಭುಜದ ಮೇಲೆ ಜೋರಾಗಿ ಹೊಡೆದರು. ''ಬೇಕೂಫಾ, ಬಟ್ಟೆ ಇಸ್ತ್ರಿ ಮಾಡಿಸಿಕೊಂಡು ಬಾರೋ ಅಂದ್ರೆ, ಇಲ್ಲಿ ಓಡಾಡ್ತಿದ್ದೀಯಾ'' ಎಂದು ಜೋರಾಗಿ ಬೈದರು. ನನಗೆ ನೋವಿನಿಂದ, ಕಣ್ಣಲ್ಲಿ ನೀರೇ ಬಂತು. ತಿರುಗಿ ನೋಡಿದೆ. ಯಾರೋ ಅಪರಿಚಿತರು. ಅವರು ತಕ್ಷಣ ''ಸ್ಸಾರೀ, ಸ್ಸಾರೀ ನೀನು ನನ್ನ ತಮ್ಮನ ತರಹವೇ ಕಾಣುತ್ತೀಯಾ. ಅವನಿಗೂ ನಿನ್ನಷ್ಟೇ ವಯಸ್ಸು. ನಿನ್ನ ಹಾಗೇ ಕಾಣ್ತಾನೆ. ನಿನ್ನ ನಡಿಗೆ, ನಿನ್ನ ತಲೆ, ಎಲ್ಲವೂ ನನ್ನ ತಮ್ಮನಂತೆಯೇ ಕಾಣುತ್ತೆ'' ಅಂದರು. ''ಅದು ಸರಿ ನೀವ್ಯಾಕೆ ನಂಗೆ ಹೊಡಿದ್ರೀ ಅಂತಾ ಜೋರಾಗೇ ಕೇಳ್ದೆ. ಬೆನ್ನು, ಭುಜ ನೋಯ್ತಾ ಇತ್ತು.''

''ಅದೇ ನಿನಗೆ ಹೊಡೆಯೋವಾಗ ಹೇಳಿದ್ನಲ್ಲಪ್ಪ ನನ್ನ ಬಟ್ಟೆ ಇಸ್ತ್ರೀ ಮಾಡಿಸಿಕೊಂಡು ಬಾ ಅಂತ, ಹೇಳಿದ್ದು - ಅದ್ಬಿಟ್ಟು ಇಲ್ಲಿ ಒಡಾಡ್ತಿದ್ನಲ್ಲ. ಅದಕ್ಕೆ ಕೋಪ ಬಂತು. ನಾಳೆ ಆಫೀಸ್‌ಗೆ ಹೋಗೋಕೆ ಇಸ್ತ್ರೀ ಮಾಡ್ಸಿರೋ ಬಟ್ಟೆ ಇಲ್ಲಾ''

''ಅದಕ್ಕೆ ಹಂಗೇನ್ರೀ ಹೊಡೆಯೋದು.....'' ''ಸ್ಸಾರಿ ಅಂತ ಹೇಳಿದ್ನಲ್ಲಪ್ಪ...?''




# ಸೀಜರ್ಸ್ ವೈಫ್.....

**- ಪ್ರಶಾಂತ ಅಡೂರ**

ರಾಮ ವನವಾಸ ಮುಗಿಸಿಕೊಂಡ ಪಟ್ಟಾಭಿಷೇಕ ಮಾಡಿಸಿಕೊಂಡ ಸುಖವಾಗಿ ರಾಜ್ಯ ಆಳಲಿಕ್ಕೆ ದಣೇಯಿನ ಶುರು ಮಾಡಿದ್ದಾ. ಎಲ್ಲಾ ಛಲೋ ನಡದಿತ್ತು. ಅವಂಗ ಒಮ್ಮಿಂದೊಮ್ಮಿಲೆ ಏನ ಅನಸ್ತೊ ಯಾಕ ಅನಸ್ತೋ ಏನೋ ನಮ್ಮ ರಾಜ್ಯದಾಗ ಜನಾ ನನ್ನ ಆಡಳಿತದ ಬಗ್ಗೆ ಏನ ಅನ್ನಲಿಕತ್ತಾರ ಅನ್ನೋದ ತಿಳ್ಕೊಂಡರಾತು ಅಂತ ಗೂಡಾಚಾರರನ ಕಳಸಿದಾ. ಗೂಡಾಚಾರರ ದೇಶ ಎಲ್ಲಾ ಸುತ್ತಾಡಿ ಬಂದ.

'ಹಂಗ ಎಲ್ಲಾರೂ ಖುಶ್ ಇದ್ದಾರ ಆದರ ಒಂದಿಷ್ಟ ಮಂದಿ ಸೀತಾನ ಬಗ್ಗೆನ ಡೌಟ್ ಮಾಡಲಿಕತ್ತಾರ, ರಾವಣ ಅಕಿನ್ನ ಎಬಸಿಗೊಂಡ ಹೋಗಿದ್ದಾ ಹಂತಾಕಿನ ರಾಮ ಅಗದಿ ಸರಳಾಗಿ ಕರಕೊಂಡ ಬಂದ ಪಟ್ಟದ ರಾಣಿ ಮಾಡಿದಾ' ಅಂತ ಒಂದಿಬ್ಬರ ಮಾತಾಡಲಿಕತ್ತಾರ ಅಂತ ಹೇಳಿದರು.

ರಾಮಗ ಯಾಕೊ ಮನಸ್ಸಿನಾಗ ಸಂಕಟ ಆತ. ಹಂಗ ಅವಂಗ ಮಂದಿ ಹೇಳಿದ್ದು ಖರೇ ಅನಸ್ತ. ಅಂವಾ ಸೀದಾ ಸೀತಾನ್ನ ಮತ್ತ ಕಾಡಿಗೆ ಅಟ್ಟ ಬೇಕು ಅಂತ ಡಿಸೈಡ ಮಾಡಿ ಲಕ್ಷ್ಮಣನ ಕರಸಿ ಸೀತಾನ್ನ ಕಾಡಿಗೆ ಬಿಟ್ಟ ಬಾ ಅಂತ ಹೇಳಿದಾ.

ಲಕ್ಷ್ಮಣಗ ಸಿಟ್ಟ ಬಂತ

'ಇದೇನ ಮಂದಿ ಮಾತ ಕೇಳಿ ಪಾಪ ಆ ಹೆಣ್ಣಮಗಳನ್ನ, ಅದು ಗರ್ಭಿಣಿ ಹೆಣ್ಣ ಮಗಳನ್ನ ಮತ್ತ ಕಾಡಿಗೆ ಕಳಸ್ತಿ, ಮೊನ್ನೆ - ಮೊನ್ನೇನ ಹದಿನಾಲ್ಕ ವರ್ಷ ವನವಾಸ ಮುಗಿಸಿಕೊಂಡ ಬಂದಿದ್ದ ಸಾಕಾಗಿಲ್ಲಾ? ಯಾರ ಮಾತ ಕೇಳಬೇಕು ಯಾರ ಮಾತ ಬಿಡಬೇಕು ಅಂತ ಒಂದ ಸ್ವಲ್ಪರ ವಿಚಾರ ಮಾಡ್ಬೇಕ ರಾಮಾ' ಅಂತ ಅಂದಾ, ಆದರ ರಾಮ ಅವನ ಮಾತ ಕೇಳಲಿಲ್ಲಾ.

'ಲಕ್ಷ್ಮಣಾ, ಸೀಸರ್ಸ್ ವೈಫ್ ಮಸ್ಟ್ ಬಿ ಅಬೌ ಸಸ್ಪಿಷನ್ ಅಂತ ಗಾದಿ ಮಾತ ಅದ ಕೇಳಿಯೋ ಇಲ್ಲೊ, ದಿ ಅಸೋಸಿಯೇಟ್ಸ್ ಆಫ್ ಪಬ್ಲಿಕ್ ಫಿಗರ್ಸ್ ಮಸ್ಟ್ ನಾಟ್ ಈವನ್ ಬಿ ಸಸ್ಪೆಕ್ಟೆಡ್ ಆಫ್ ರಾಂಗ್ ಡೂಯಿಂಗ್. ನಾ ರಾಜಾ ಅಂದ ಮ್ಯಾಲೆ ನನ್ನ ಹೆಂಡ್ತಿ ಬಗ್ಗೆ ಹಿಂಗ ಜನಾ ಮಾತಾಡ್ತಾರ ಅಂದರ ನಾ ನನ್ನ ಹೆಂಡತಿ ಜೊತಿ ಹೆಂಗ ಇರಬೇಕ? ನಾ ಹೇಳಿದಷ್ಟ ಕೇಳ. ಅಕಿನ್ನ ನೀ ಸೀದಾ ಕಾಡಿಗೆ ಬಿಟ್ಟ ಬಾ' ಅಂತ ಕಳಸಿಬಿಟ್ಟಾ. ಪಾಪ ಲಕ್ಷ್ಮಣಗ ಈ ಸೀಸರ್ ಯಾರು ಅಂತ ಕೇಳಲಿಕ್ಕು ರಾಮ ಅವಕಾಶ ಕೊಡಲಿಲ್ಲಾ.

ಈಗ ನೀವು ಕೇಳಬಹುದು

‘ಲೇ ಮಗನ, ಸೀತಾ ಮೊದ್ಲೊ ಸೀಸರ್ ಮೊದ್ಲೊ, ನಿಂಗ ಹೆಂಗ ಬೇಕ ಹಂಗ ರಾಮಾಯಣ ಬರೀತಿ ಏನ? ಅಂತ. ಹಂಗೇನಿಲ್ಲಾ, ನಾ ರಾಮ ಸೀಸರನ್ ಕೋಟ್ ಮಾಡಿದ್ದಾ ಅಂದರ ಅದ ಹೈಟ್ ಆಫ್ ಸೆಕ್ಯುಲರಿಸಂ ಅನಿಸಿ ಒಂದಿಷ್ಟ ಮಂದಿಗೆ ಲೈಕ ಆಗಬಹುದು ಅನಸ್ತ ಅದಕ್ಕ ರಾಮ ಹಂಗ ಅಂದಾ ಅಂದೆ. ಇನ್ನ ಅಕಸ್ಮಾತ ನಾ ಏನರ ಸೀಸರ್ ತನ್ನ ಹೆಂಡತಿ ಬಿಡಬೇಕಾರ ರಾಮನ್ನ ಕೋಟ್ ಮಾಡಿ ರಾಮಾಸ್ ವೈಫ್ ಮಸ್ಟ್ ಬಿ ಅಬೌ ಸಸ್ಪಿಷನ್ ಅಂತ ಅಂದಿದ್ದಾ ಅಂತ ಬರದಿದ್ದರ ನಾನೂ ಸೀಸರ್ ಇಬ್ಬರು ಕಮ್ಯೂನಲ್ ಆಗ್ತಿದ್ದವಿ.

ಏನ್ಮಾಡಲಿಕ್ಕೆ ಬರಂಗಿಲ್ಲಾ ಇದ ಇವತ್ತ ನಮ್ಮ ದೇಶದ್ದ ಹಣೇಬರಹ. ಇದ್ದ ಇತಿಹಾಸ ಇದ್ದಂಗ ಹೇಳಿದರ ಕಮ್ಯೂನಲ್ ಅಂತಾರ ಅದನ್ನ ತಮ್ಮ ಅನಕೂಲಕ್ಕ ಬದಲಾಯಿಸಿ ತಮಗ ಯಾರಿಗ ಬೇಕ ಅವರಿಗೆ ಪ್ಲೀಸ್ ಮಾಡ್ಕೊಂಡ ಸೆಕ್ಯುಲರ್ ಅನಿಸಿಗೊತಾರ.

ಅದೇನ ಇರಲಿ ರಾಮ ಸೀಸರನಕಿಂತಾ ಮೊದ್ಲ ಇದ್ದಾ. ಅಂವಾ ಆ ತ್ರೇತಾಯುಗದಾಗ ತನ್ನ ಹೆಂಡ್ತಿ ಮ್ಯಾಲೆ ಅಪವಾದ ಬಂದಾಗ ಎರಡನೇ ವಿಚಾರ ಮಾಡಲಾರದ ಸೀದಾ ಹೆಂಡ್ತಿನ್ನ ಕಾಡಿಗೆ ಅಟ್ಟಿದ್ದಾ, ಇದು ಇತಿಹಾಸ. ಈ ಸೀಸರ್ ಮೊನ್ನೆ ಮೊನ್ನೆ ಬಂದಂವಾ ಆದರೂ ಅವನು ಹೆಂಡ್ತಿ ಬಿಡೊದರಾಗ ರಾಮನ ವಿಚಾರದವನ ಇದ್ದಾ. ಹಿಂಗಾಗಿ ಅವನೂ ತನ್ನ ಹೆಂಡ್ತಿ ಮ್ಯಾಲೆ ಅಪವಾದ ಬಂದಾಗ ಸೀದಾ ಅಕಿನ್ನ ಬಿಟ್ಟ ಬಿಟ್ಟಾ.

ಈಗ ವಿಷಯ ಹೆಂಡ್ತಿ ಬಿಡೋದ ಅಲ್ಲಾ, ಇಲ್ಲೆ ನಾ ಹೇಳ್ತೊ ಇರೊ ವಿಷಯ ಏನಪಾ ಅಂದರ ಹೆಂಗ ರಾಮ ಆಗಲಿ ಸೀಸರ್ ಆಗಲಿ ‘ರಾಜ, ರಾಣಿ ಆದೋರ ರಾಷ್ಟ್ರದೊಳಗ ಆದರ್ಶ, ನಿಷ್ಕಳಂಕ ವ್ಯಕ್ತಿಯಾಗಿರಬೇಕು, ರಾಜಾನ ಪೈಕಿ ಯಾರಿಗೂ ಅಪವಾದ ಇರಬಾರದು’ ಅಂತ ತಮ್ಮ ಹೆಂಡಂದರ ಮ್ಯಾಲೆ ಅಪವಾದ ಬಂದ ಕೂಡಲೇನ ಕಾಡಿಗೆ ಅಟ್ಟಿದರೋ ಅಂದರ ರಾಜ್ಯ ಭಾರದಿಂದ ದೂರ ಇಟ್ಟರೊ ಹಂಗ ಅಕಸ್ಮಾತ ಇವತ್ತೀನ ನಮ್ಮ ದೇಶದ ರಾಜರು ಅಂದರ ಪ್ರಧಾನಿಗಳು, ಅಧ್ಯಕ್ಷರು ಅಥವಾ ಮುಖ್ಯಮಂತ್ರಿಗಳು ತಮ್ಮ ತಮ್ಮ ಸಂಬಂಧಿಕರು, ಆಪ್ತರು, ಬಾಂಧವರು ಅಕಸ್ಮಾತ ಕಳಂಕಿತ ಇದ್ದಾರ ಅಂದರ ಅವರನ ದೂರ ಇಟ್ಟ ಆಡಳಿತ ಮಾಡ್ತಾರಾ? ಅನ್ನೋದ ನನ್ನ ಪ್ರಶ್ನೆ.

ಸೀಸರ್ಸ್ ವೈಫ್ ಮಸ್ಟ್ ಬಿ ಅಬೌ ಸಸ್ಪಿಷನ್ ಅನ್ನೋದನ್ನ ಇವತ್ತಿನ ಆಡಳಿತಗಾರರು ಅನುಸರಸಲಿಕ್ಕೆ ಸಾಧ್ಯನಾ? ಅಲ್ಲಾ ಹಂಗ ಇವರೇನ ಶ್ರೀರಾಮಚಂದ್ರ ಅಲ್ಲಾ, ಸೀಸರನೂ ಅಲ್ಲಾ ಅಂದಮ್ಯಾಲೆ ಇದ ಅವರಿಗೆ ಅಪ್ಲಿಕೇಬಲ್ ಆಗಂಗಿಲ್ಲಾ ಅನಬ್ಯಾಡರಿ ಮತ್ತ.

ಇವತ್ತೀನ ಪ್ರಸ್ತುತ ಭಾರತದ ರಾಜಕಾರಣ ನೋಡಿದರ ನಾವ ರೋಮದ ಸೀಸರನ ಏನ, ನಮ್ಮ ಭರತ ಖಂಡದ ರಾಮನ್ನ, ಅವನ ಆದರ್ಶನ್ನ ಎಲ್ಲಾ ಮರತ ಬಿಟ್ಟೇವಿ. ಇವತ್ತ ಒಬ್ಬ ರಾಜಕಾರಣಿ ಮ್ಯಾಲೇನೂ ಅಪವಾದ ಇಲ್ಲಾ ಅನ್ನೊಹಂಗ ಇಲ್ಲಾ. ಅವನ ಮ್ಯಾಲೆ

ಇಂವಾ ಅಪವಾದ ಮಾಡ್ತಾನ ಇವನ ಮ್ಯಾಲೆ ಅಂವಾ ಅಪವಾದ ಮಾಡ್ತಾನ. ಹಂಗ ಇವರೇಲ್ಲಾ ಪ್ರಾಮಾಣಿಕರಾಗಿ ಸೀಸರ್ಸ್ ವೈಫ್ ಮಸ್ಟ್ ಬಿ ಅಬೌ ಸಸ್ಪಿಷನ್ ಅಂತ ತಮ್ಮ ಸುತ್ತ-ಮುತ್ತಲ ಇರೋ ಅಪವಾದಿತ ವ್ಯಕ್ತಿಗಳನ್ನ ದೂರ ಇಟ್ಟ ಕಾರ್ಯಭಾರ ಮಾಡಲಿಕ್ಕೆ ಹತ್ತಿದರ ನಮ್ಮ ದೇಶ ರಾಮ ರಾಜ್ಯ ಆಗೋದರಾಗ ದೂರ ಇಲ್ಲಾ.

ಅಲ್ಲಾ, ಹಂಗ ನಾ ರಾಮ ರಾಜ್ಯ ಅಂದರ ಅದ ಕಮ್ಯೂನಲ್ ಆಗ್ತದ ಅನಸ್ತಿದ್ದರ ಸೀಸರನ ಸಾಮ್ರಾಜ್ಯ ಅಂತ ಅನ್ಕೋಬಹುದು.

ಹೋಗಲಿ ಬಿಡ್ರಿ, ನಮ್ಮ ದೇಶದ ರಾಜಕಾರಣಿಗಳ ಬಗ್ಗೆ ಎಷ್ಟ ಬರದರು ಅಷ್ಟ. ಈಗ ನಿಮಗೇಲ್ಲಾ ರಾಮ ಯಾಕ ತನ್ನ ಹೆಂಡ್ತಿ ಬಿಟ್ಟಾ ಅನ್ನೋದ ಗೊತ್ತ ಇದ್ದದ್ದ ಅದ,. ಅದರ ಬಗ್ಗೆ ಏನ ಹೇಳಂಗಿಲ್ಲಾ ಇನ್ನ ಈ ಸೀಸರ್ಸ್ ವೈಫ್ ಮಸ್ಟ್ ಬಿ ಅಬೌ ಸಸ್ಪಿಷನ್ ಅನ್ನೋದ ಯಾಕ ರೂಡಿ ಒಳಗ ಬಂತ ಅನ್ನೋದನ್ನ ಸಂಕ್ಷಿಪ್ತ ಹೇಳ್ತೇನಿ ಕೇಳಿ ಬಿಡಿರಿ. ಹಿಂದಕ 62 ಬಿ.ಸಿ. ಒಳಗ ರೋಮನ ರಾಜಾ ಜೂಲಿಯಸ್ ಸೀಸರಗ ಪೊಂಪಿಯಾ ಅಂತ ಹೆಂಡ್ತಿ ಇದ್ಲು, ಅಕಿ ಅವನ ಎರಡನೇ ಹೆಂಡತಿ. ಅಕಿ ಒಂದ ಸರತೆ 'ಬೋನಾ ಡಿ' (ಒಳ್ಳೆಯ ದೇವತೆ) ಅನ್ನೋ ಒಂದ ವೃತಾ ಹಿಡದಿದ್ಲು. ಆ ವೃತ್ತದ ಪ್ರಥಾ ಪ್ರಕಾರ ಆ ಪೂಜಾ ಮಾಡಬೇಕಾರ ಪೂಜಾ ಕೋಣಿ ಒಳಗ ಯಾವ ಗಂಡಸರಿಗೂ ಅವಕಾಶ ಇರಲಿಲ್ಲಾ. ಆದರ ಪಬ್ಲಿಯಸ್ ಕ್ಲೋಡಿಯಸ್ ಅನ್ನೋ ಒಬ್ಬ ಯುವಕ ಹೆಣ್ಣಮಕ್ಕಳ ವೇಷ ಹಾಕ್ಕೊಂಡ ಆ ಪೂಜಾ ಕೋಣಿ ಒಳಗ ಹೊಕ್ಕೊಂಡಿದ್ದಾ. ಅವನ ಉದ್ದೇಶ ಪೊಂಪಿಯಾನ್ನ ಭ್ರಷ್ಟಗೊಳಿಸೋದ ಇತ್ತ (ಟು ಸೆಡ್ಯೂಸ್ ಪೊಂಪಿಯಾ). ಅಂವಾ ಮುಂದ ಸೀಸರನ ಕೈಯಾಗ ಸಿಕ್ಕೊಂಡ ಬಿದ್ದಾ, ಅವನ ಮ್ಯಾಲೆ ಅಪಾದನೆ ಬಂದ ಅವನ ಬಂಧಿಸಿದರು. ಆದರ ಸೀಸರ್ ಅವನ ವಿರುದ್ಧ ನ್ಯಾಯಾಧೀಶರಿಗೆ ಯಾವುದೇ ಸಾಕ್ಷಾಧಾರ ಕೊಡಲಿಲ್ಲಾ ಹಿಂಗಾಗಿ ಅವನ ಬಿಡುಗಡೆ ಆತು. ಆದರ ಅಂವಾ ಅವತ್ತ ತನ್ನ ಹೆಂಡತಿ ಪೊಂಪಿಯಾನ ಅಕಿ ಬಗ್ಗೆ ಜನಾ ಮುಂದ ಸಂಶಯ ಮಾಡಬಾರದು ಅಂತ ಬಿಟ್ಟ ಬಿಟ್ಟಾ. ಅವತ್ತಿನಿಂದ ಈ ಸೀಸರ್ಸ್ ವೈಫ್ ಮಸ್ಟ್ ಬಿ ಅಬೌ ಸಸ್ಪಿಷನ್ ಅನ್ನೋ ಗಾದಿ ಮಾತ ಚಾಲ್ತಿ ಒಳಗ ಬಂದಿದ್ದ. ಅಲ್ಲಾ ಆ ಕಾಲನ ಬ್ಯಾರೆ ಈ ಕಾಲನ ಬ್ಯಾರೆ ಬಿಡ್ರಿ. ಹಂಗ ನಾವು ನಮ್ಮಷ್ಟಕ್ಕ ನಾವ ಸೀಸರ ಅಂತ ಅನ್ಕೊಂಡರ ನಮಗ ಹೆಂಡ್ತಿ ಬಿಡಲಿಕ್ಕೆ ಅವನ ಅಪ್ಪನಂತಾ ಕಾರಣ ಸಿಗ್ತಾವ. ಅಲ್ಲಾ ಹಂಗಂತ ಬಿಟಗೋತ ಹೋದರ ನಾವ ಹೊಂತುಟ್ಲೇ ಹೋಗೆ ಬಿಡ್ತೇವಿ ಮತ್ತ. ನಮಗ್ಯಾರಿಗೂ ಇದ್ದ ಹೆಂಡ್ತಿನ್ನ ಬಿಡಲಿಕ್ಕೂ ದಮ್ ಇಲ್ಲಾ ಇನ್ನೊಂದ ಮಾಡ್ಕೋಳಿಕ್ಕೂ ದಮ್ ಇಲ್ಲಾ. ಇನ್ನ ನಮ್ಮ ಮಂದ್ಯಾಗಂತೂ ಕನ್ಯಾನ ಇಲ್ಲಾ.

ಇದೇನೊ ಒಂದ ಗಾದಿ ಮಾತು, ರಾಜ ಮಂದಿಗೆ ಇಷ್ಟ ಅನ್ವಯ ಆಗೋದ, ನಮ್ಮಂಥಾ ಸಾಮಾನ್ಯ ಪ್ರಜೆಗಳಿಗೇನ ಅಲ್ಲಾ, ಹಿಂಗಾಗಿ ನಾವೇನ ಭಾಳ ತಲಿಗೆಡಸಿಗೊಳ್ಳೊದ ಬ್ಯಾಡ.